ಸೋಮವಾರ, ಸೆಪ್ಟೆಂಬರ್ 1, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗಣೇಶ ಮೂರ್ತಿ ವಿಸರ್ಜನೆ

ನವದೆಹಲಿಯಲ್ಲಿ ಭಾನುವಾರ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಭಕ್ತರು ಯಮುನಾ ನದಿಯಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜಿಸಿದರು



ಹರ್ಮನ್ ಮಿಂಚು

ಬಿಹಾರದ ರಾಜಗೀರ್‌ನಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಜಪಾನ್ ವಿರುದ್ಧದ ಪಂದ್ಯದಲ್ಲಿ ಎರಡು ಗೋಲು ಹೊಡೆದ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್



ಚಿಟಿಕೆ ಸುದ್ದಿ

ಕಾವೇರಿ ಆರತಿ ಮುಂದೂಡಿಕೆ

ಮಂಡ್ಯ: ‘ಜಿಲ್ಲೆಯ ಕೆಆರ್‌ಎಸ್ ಅಣೆಕಟ್ಟೆ ಬಳಿ ಕಾವೇರಿ ಆರತಿ ಮಾಡುವ ವಿಚಾರ ಸದ್ಯಕ್ಕಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭಾನುವಾರ ತಿಳಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರಕರಣ ಕೋರ್ಟ್‌ನಲ್ಲಿರುವ ಕಾರಣ ಆರತಿ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ’ ಎಂದರು.

‘ಓದುವ ಅಭಿಯಾನ’ ಈದ್ ಮಿಲಾದ್ ಕೈಬಿಡಲು ಆಗ್ರಹ

ವಿಜಯಪುರ: ಸಮಗ್ರ ಶಿಕ್ಷಣ ಕರ್ನಾಟಕವು ಸೆ.1ರಿಂದ ಸರ್ಕಾರಿ, ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ನಡೆಸುವ ‘ಓದುವ ಅಭಿಯಾನ’ದ ಪಟ್ಟಿಯಿಂದ ‘ಈದ್ ಮಿಲಾದ್’ ಹಬ್ಬದ ಪರಿಚಯ ಕೈಬಿಡಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದ್ದಾರೆ.

ಈ ಕುರಿತು ತಮ್ಮ ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿರುವ ಅವರು, ‘ಸರ್ಕಾರ ಓಲೈಕೆ ರಾಜಕಾರಣ ಬಿಟ್ಟು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುವಂತಹ ಪಠ್ಯಕ್ರಮವನ್ನು, ವಿಷಯಗಳನ್ನು ಪರಿಚಯಿಸಲಿ’ ಎಂದು ತಿಳಿಸಿದ್ದಾರೆ.

ಎಸ್‌ಬಿಐಗೆ ₹73 ಲಕ್ಷ ವಂಚನೆ’

ಉಡುಪಿ: ಭಾರತೀಯ ಸ್ಟೇಟ್ ಬ್ಯಾಂಕ್‌ನ ಮಲ್ಪೆ ಶಾಖೆಯ ವ್ಯವಸ್ಥಾಪಕ ಹಾಗೂ ಇತರರು ಸೇರಿ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನ ಲಕ್ಷಾಂತರ ರೂಪಾಯಿ ದುರುಪಯೋಗ ಮಾಡಿ ವಂಚಿಸಿರುವ ಕುರಿತು ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೌಸಿಂಗ್ ಫೈನಾನ್ಸ್ ಕಂಪನಿಯೊಂದರಿಂದ ಬಂದ ಇ-ಮೇಲ್ ಸಂದೇಶ ಆಧರಿಸಿ ನಾಲ್ವರ ಖಾತೆಗಳಿಗೆ ₹73 ಲಕ್ಷ ವರ್ಗಾವಣೆ ಮಾಡಿರುವ ಕುರಿತು ಆ.25ರಂದು ಎಸ್‌ಬಿಐ ಮುಂಬೈ ಶಾಖೆಯು ಮಲ್ಪೆ ಶಾಖೆಯ ವ್ಯವಸ್ಥಾಪಕರಲ್ಲಿ ವಿವರ ಕೇಳಿತ್ತು.

ಈ ಕುರಿತು ಪರಿಶೀಲಿಸಿದಾಗ, ಮಲ್ಪೆ ಶಾಖೆಯಲ್ಲಿ ವ್ಯವಸ್ಥಾಪಕರಾಗಿದ್ದ ಮೀರಾ ಪಲ್ಲವಿ ಟಿ.ಎಚ್. ಅವರು ಹಾಗೂ ಹಣ ಪಡೆದ ಖಾತೆದಾರರು ಸೇರಿ ನಕಲಿ ದಾಖಲೆ ಸೃಷ್ಟಿಸಿ ಸ್ವಂತಕ್ಕೆ ಹಣ ಬಳಸಿ ಬ್ಯಾಂಕ್‌ಗೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಪಾರ್ಟ್‌ಮೆಂಟ್‌ನಲ್ಲಿ ಮಹಜರು

ಧರ್ಮಸ್ಥಳ ಬೆಳವಣಿಗೆ: ಹತ್ತು ತಾಸು ಎಸ್‌ಐಟಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವುಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತುಹಾಕಿರುವುದಾಗಿ ಹೇಳಿರುವ ಸಾಕ್ಷಿ, ದೂರುದಾರ ಉಳಿದುಕೊಂಡಿದ್ದ ವಿದ್ಯಾರಣ್ಯಪುರದ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ ನಸುಕಿನಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಮಹಜರು ನಡೆಸಿದೆ.

ಸಾಮಾಜಿಕ ಕಾರ್ಯಕರ್ತ ಟಿ.ಜಯಂತ್ ಅವರ ಮನೆ ಶೋಧ ಮುಕ್ತಾಯಗೊಂಡ ಬೆನ್ನಲ್ಲೇ ಭಾನುವಾರ ನಸುಕಿನ 2 ಗಂಟೆಯಲ್ಲಿ ದೂರುದಾರನ ಜತೆ ತಿಂಡ್ಲು ಸರ್ಕಲ್ ಬಳಿಯ ಅಪಾರ್ಟ್‌ಮೆಂಟ್‌ಗೆ ಬಂದಿದ್ದ ತನಿಖಾ ತಂಡ, ಮಧ್ಯಾಹ್ನದವರೆಗೂ ಪ್ರಕ್ರಿಯೆ ನಡೆಸಿತು. ಸತತ ಹತ್ತು ತಾಸು ಅಧಿಕಾರಿಗಳು ವಿಚಾರಣೆ ನಡೆಸಿದರು.

ಎಸ್‌ಪಿ ಸೈಮನ್ ನೇತೃತ್ವದಲ್ಲಿ 20 ಅಧಿಕಾರಿಗಳು, ಸಿಬ್ಬಂದಿ, ಸೀನ್ ಆಫ್ ಕ್ರೈಂ (ಸುಕೋ), ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸ್ಥಳದಲ್ಲಿದ್ದರು. ಸ್ಥಳೀಯ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಹೋರಾಟಗಾರ ಗಿರೀಶ್ ಮಟ್ಟೆಣ್ಣನವರ ವಾಸವಿರುವ ಫ್ಲ್ಯಾಟ್‌ನಿಂದ ಒಂದೂವರೆ ಕಿಲೊ ಮೀಟರ್ ದೂರದಲ್ಲಿರುವ ಸರ್ವಿಸ್ ಅಪಾರ್ಟ್‌ಮೆಂಟ್‌ನ ಇಂಚಿಂಚೂ ಶೋಧ ಮಾಡಲಾಯಿತು. ಯಾರ ಹೆಸರಲ್ಲಿ ಯಾವಾಗ ಕೊಠಡಿ ಬುಕಿಂಗ್ ಆಗುತ್ತಿತ್ತು? ಎಷ್ಟು ಜನರು ಕೊಠಡಿಗೆ ಬರುತ್ತಿದ್ದರು? ಎಷ್ಟು ಬಾರಿ ಬುಕ್ ಆಗಿದೆ? ಯಾರು ಹಣ ಪಾವತಿ ಮಾಡುತ್ತಿದ್ದರು? ಎಂಬ ಆಯಾಮದಲ್ಲಿ ತನಿಖೆ ನಡೆಸಲಾಗಿದೆ.

ಲೆಡ್ಜರ್ ಬುಕ್, ಅಪಾರ್ಟ್‌ಮೆಂಟ್‌ನ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಲಾಯಿತು. ಎಲ್ಲಾ ಪ್ರಕ್ರಿಯೆ, ಹೇಳಿಕೆಗಳನ್ನು ವಿಡಿಯೊ ರೆಕಾರ್ಡ್ ಮಾಡಲಾಯಿತು.

ದಾಖಲೆ ವಶಕ್ಕೆ ಪಡೆದ ತನಿಖಾ ತಂಡ

ನಗರದಲ್ಲಿ ಎಸ್‌ಐಟಿ ಸ್ಥಳ ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿದೆ. ಶನಿವಾರ ಟಿ.ಜಯಂತ್ ಅವರ ನಿವಾಸ ಹಾಗೂ ಭಾನುವಾರ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ಶೋಧ ಕಾರ್ಯ ನಡೆಸಿದ ಅಧಿಕಾರಿಗಳು, ಕೆಲವು ವಸ್ತು ಹಾಗೂ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆರೋಪಿ ಹುಟ್ಟೂರು ಮತ್ತು ಎರಡನೇ ಪತ್ನಿ ವಾಸವಾಗಿರುವ ತಮಿಳುನಾಡಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯಕ್ಕೆ ದೂರು ನೀಡುವ ಮುನ್ನ ಅಂದರೆ ನಾಲ್ಕೈದು ತಿಂಗಳ ಹಿಂದೆ ಸಾಕ್ಷಿ ದೂರುದಾರ ಉಳಿದುಕೊಂಡಿದ್ದ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿಯೇ ಗಿರೀಶ್ ಮಟ್ಟೆಣ್ಣನವರ, ಮಹೇಶ್ ಶೆಟ್ಟಿ, ಸುಜಾತಾ ಭಟ್, ಜಯಂತ್ ಅವರು ಬುರುಡೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ದೆಹಲಿ ಭೇಟಿಗೆ ಸಂಬಂಧಿಸಿದಂತೆ ಮತ್ತೊಬ್ಬ ದೂರುದಾರ ಟಿ. ಜಯಂತ್ ಅವರು ಸುಪ್ರೀಂ ಕೋರ್ಟ್ ಮುಂದೆ ನಿಂತಿರುವ ಫೋಟೊವನ್ನು ಬಿಡುಗಡೆ ಮಾಡಿದ್ದಾರೆ.

ಜೆಡಿಎಸ್ ರ‍್ಯಾಲಿ, ಎನ್‌ಐಎ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಉಜಿರೆ: ‘ಧರ್ಮಸ್ಥಳದ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ನಡೆದಿದ್ದು, ‘ಬುರುಡೆ ಪ್ರಕರಣ’ದಿಂದ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ. ಇದರ ಹಿಂದೆ ಯಾರಿದ್ದಾರೆ ಎಂಬುದರ ಪತ್ತೆಗೆ ತನಿಖೆಯನ್ನು ಎನ್‌ಐಎಗೆ ಒಪ್ಪಿಸಬೇಕು’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದರು.

ಜೆಡಿಎಸ್ ವತಿಯಿಂದ ಹಮ್ಮಿಕೊಳ್ಳಲಾದ ‘ಧರ್ಮಸ್ಥಳ ಸತ್ಯ ಯಾತ್ರೆ’ ವಾಹನ ರ‍್ಯಾಲಿ ಬಳಿಕ ಇಲ್ಲಿನ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಸಮಾವೇಶದಲ್ಲಿ ಅವರು ಮಾತನಾಡಿದರು.

‘ವ್ಯಕ್ತಿಯೊಬ್ಬನ ದೂರು ಆಧರಿಸಿ ಎಸ್‌ಐಟಿ ರಚಿಸಿದ್ದು ಖಂಡನೀಯ. ಷಡ್ಯಂತ್ರ ನಡೆದಿದೆ ಎಂಬುದನ್ನು ರಾಜ್ಯದ ಉಪಮುಖ್ಯಮಂತ್ರಿಯೇ ಹೇಳಿದ್ದಾರೆ. ಸತ್ಯವನ್ನು ಹೊರಗೆಳೆಯಲು ನಾವು ನೈತಿಕ ಬೆಂಬಲ ನೀಡುತ್ತೇವೆ’ ಎಂದರು.

ಭಕ್ತರೇ ಕ್ಷೇತ್ರದ ಸಂಪತ್ತು: ‘ದೇಶ- ವಿದೇಶಗಳಲ್ಲಿರುವ ಕೋಟ್ಯಂತರ ಭಕ್ತರೇ ಕ್ಷೇತ್ರದ ಸಂಪತ್ತು. ಇಲ್ಲಿ ಯಾವುದೇ ತಪ್ಪು ಅಥವಾ ಅಹಿತಕರ ಘಟನೆ ನಡೆಯದಂತೆ ಮುಂಜಾಗರೂಕತೆ ವಹಿಸುತ್ತಿದ್ದೇವೆ. ಅಂತಹ ಘಟನೆ ನಡೆದಿಲ್ಲ, ನಡೆಯಲು ಸಾಧ್ಯವೂ ಇಲ್ಲ’ ಎಂದು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಸ್ಪಷ್ಟಪಡಿಸಿದರು.

ಡಿ. ಸುರೇಂದ್ರ ಕುಮಾರ್, ಶಾಸಕರಾದ ಜಿ.ಡಿ. ಹರೀಶ್ ಗೌಡ ಹುಣಸೂರು, ಎ. ಮಂಜು ಅರಕಲಗೂಡು, ಸ್ವರೂಪ್ ಹಾಸನ, ಮಲ್ಲೇಶ್ ಬಾಬು ಕೋಲಾರ, ವಿಧಾನಪರಿಷತ್ ಸದಸ್ಯ ಎಸ್.ಎಲ್. ಬೋಜೇಗೌಡ ಮತ್ತಿತರರು ಇದ್ದರು.



ಜೆಡಿಎಸ್ ವತಿಯಿಂದ ಹಮ್ಮಿಕೊಳ್ಳಲಾದ ‘ಧರ್ಮಸ್ಥಳ ಸತ್ಯ ಯಾತ್ರೆ’ ವಾಹನ ರ‍್ಯಾಲಿ ಬಳಿಕ ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಸಮಾವೇಶದಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು

‘ಬಿಜೆಪಿಯವರು ಸಮಾವೇಶ ಮಾಡಲು ಹೊರಟಿರುವುದು ರಾಜಕೀಯ ದುರುದ್ದೇಶವೇ ಹೊರತು ಬೇರೇನೂ ಅಲ್ಲ. ಮಂಜುನಾಥ ಸ್ವಾಮಿಗೆ ಯಾವ ಸಮಾವೇಶದ ಅಗತ್ಯವೂ ಇಲ್ಲ
ದಿನೇಶ್ ಗುಂಡೂರಾವ್ ಸಚಿವ

‘ಧರ್ಮಸ್ಥಳ ಚಲೊ- ಧರ್ಮದೆಡೆಗೆ ನಮ್ಮ ನಡಿಗೆ’ ಧ್ಯೇಯವಾಕ್ಯದೊಂದಿಗೆ ಸೆ. 1ರ ಮಧ್ಯಾಹ್ನ 2 ಗಂಟೆಯಿಂದ ಬಿಜೆಪಿ ನೇತೃತ್ವದಲ್ಲಿ ಧರ್ಮಸ್ಥಳದಲ್ಲಿ ಸಮಾವೇಶ ನಡೆಯಲಿದೆ
ಕ್ಯಾ.ಬ್ರಿಜೇಶ್ ಚೌಟ ಸಂಸದ

ಧರ್ಮಸ್ಥಳದ ವಿಷಯ ಹುಡುಗಾಟದ್ದಲ್ಲ. ಬಿಜೆಪಿ ರಾಜಕೀಯ ಮಾಡುತ್ತಿಲ್ಲ. ಸೋಮವಾರ ನಡೆಯಲಿರುವ ಧರ್ಮಸ್ಥಳ ಚಲೊ ಪಕ್ಷಾತೀತವಾದುದು
ಬಿ.ವೈ ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ದಕ್ಷಿಣ ಕನ್ನಡ, ಕರಾವಳಿಯಲ್ಲಿ ಜನರು ಕಾಂಗ್ರೆಸ್‌ಗೆ ಮಣೆ ಹಾಕುತ್ತಿಲ್ಲ. ಈ ಭಾಗದ ಜನರ ಒಲವು ಗಳಿಸಲು ರಾಜ್ಯ ಸರ್ಕಾರವೇ ಧರ್ಮಸ್ಥಳ ಪ್ರಕರಣದಲ್ಲಿ ಹುನ್ನಾರ ನಡೆಸಿದೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

‘ಎನ್‌ಐಎ ತನಿಖೆ ಅನಗತ್ಯ’

ಮೈಸೂರು: ‘ಧರ್ಮಸ್ಥಳ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸುವ ಅಗತ್ಯವಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಎಸ್‌ಐಟಿ ರಚಿಸಿರುವುದನ್ನು ವೀರೇಂದ್ರ ಹೆಗ್ಗಡೆಯವರೇ ಸ್ವಾಗತಿಸಿದ್ದಾರೆ. ದೂರುದಾರ ಕೋರ್ಟ್‌ಗೆ ಹೇಳಿಕೆ ನೀಡಿದ್ದ. ಸಂಘ–ಸಂಸ್ಥೆಗಳೂ ಒತ್ತಾಯಿಸಿದ್ದವು’ ಎಂದರು.

ಹಸ್ತಕ್ಷೇಪ ಮಾಡದೆ, ತನಿಖೆಗೆ ಎಸ್‌ಐಟಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇವೆ. ದೂರಿಗೆ ಉತ್ತರ ಸಿಗದಿದ್ದರೆ, ಸತ್ಯ ಗೊತ್ತಾಗದಿದ್ದರೆ ಧರ್ಮಸ್ಥಳದ ಬಗ್ಗೆ ತೂಗುಗತ್ತಿ ಇದ್ದೇ ಇರುತ್ತದೆ’ ಎಂದರು.

‘ಬಿಜೆಪಿಯವರೂ ಎಸ್‌ಐಟಿ ಸ್ವಾಗತಿಸಿದ್ದರು. ಈಗ, ರಾಜಕೀಯಕ್ಕಾಗಿ ಮಾತನಾಡುತ್ತಿದ್ದಾರೆ. ಅವರು ಧರ್ಮಸ್ಥಳಕ್ಕೆ ಧರ್ಮಯಾತ್ರೆ ಹೋಗಲಿ. ಧರ್ಮಯಾತ್ರೆ ಮಾಡುವ ಅವರು, ರಾಜ್ಯಕ್ಕೆ ಆಗಿರುವ ತೆರಿಗೆ ಅನ್ಯಾಯದ ಬಗ್ಗೆ ಬಗ್ಗೆ ಚಕಾರ ಎತ್ತುತ್ತಿಲ್ಲವೇಕೆ’ ಎಂದು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

‘ಪರಿಶಿಷ್ಟ ಪಂಗಡಕ್ಕೆ ಉಪ್ಪಾರ: ಕೇಂದ್ರ ಸರ್ಕಾರಕ್ಕೆ ಶಿಫಾರಸು’

ನಂಜನಗೂಡು (ಮೈಸೂರು ಜಿಲ್ಲೆ): ‘ಉಪ್ಪಾರ ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ‘ಭಗೀರಥ ಜಯಂತ್ಯುತ್ಸವ’ದಲ್ಲಿ ಉಪ್ಪಾರ ಸಮುದಾಯ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಅವರು, ‘ಉಪ್ಪಾರ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಸಚಿವ ಸಂಪುಟದಲ್ಲಿ ಚರ್ಚಿಸಿ ಅನುಮೋದನೆ ನೀಡಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದು ಅವರು ತಿಳಿಸಿದರು.

‘ಸಮುದಾಯ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದೆ. ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಬೇಡಿಕೆಗಳಿಗೆ ಸ್ಪಂದಿಸಲಾಗುವುದು ಎಂದರು.



ಚಿತ್ರದುರ್ಗ ಭಗೀರಥ ಮಹಾಸಂಸ್ಥಾನ ಮಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ, ‘ಮೈಸೂರು, ಚಾಮರಾಜನಗರ ಭಾಗದಲ್ಲಿ ಶಾಖಾ ಮಠ ಹಾಗೂ ಶಿಕ್ಷಣ ಸಂಸ್ಥೆ ಸ್ಥಾಪಿಸಲು 5 ಎಕರೆ ಭೂಮಿ ನೀಡಬೇಕು. ಮಠದಲ್ಲಿ ನಿರ್ಮಿಸಲು ಉದ್ದೇಶಿಸಿರುವ 60 ಅಡಿ ಎತ್ತರದ ಭಗೀರಥ ಏಕಶಿಲಾ ಮೂರ್ತಿಗೆ ಅನುದಾನ ಬಿಡುಗಡೆ ಮಾಡಬೇಕು’ ಎಂದು ಕೋರಿದರು.

ತಲೆಮರೆಸಿಕೊಂಡ ತಹಶೀಲ್ದಾರ್

ಪುತ್ತೂರು (ದಕ್ಷಿಣ ಕನ್ನಡ): ಮಂಗಳೂರು ಲೋಕಾಯುಕ್ತ ಪೊಲೀಸ್ ಕಚೇರಿಯಲ್ಲಿ ಸೆ. 1ರಂದು ವಿಚಾರಣೆಗೆ ಬರುವಂತೆ ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ ಅವರಿಗೆ ನೋಟಿಸ್ ನೀಡಲಾಗಿದೆ. ತಹಶೀಲ್ದಾರ್ ಕಚೇರಿಗೂ ಹಾಜರಾಗದೆ ತಲೆಮರೆಸಿಕೊಂಡಿದ್ದಾರೆ.

ಅಕ್ರಮ- ಸಕ್ರಮ ಜಮೀನು ಪರಭಾರೆಗೆ ಎನ್‌ಒಸಿ ನೀಡಲು ಲಂಚ ಪಡೆದಿದ್ದ ಪುತ್ತೂರು ತಾಲ್ಲೂಕು ಕಚೇರಿ ಭೂಸುಧಾರಣೆ ಶಾಖೆ ಕೇಸ್ ವರ್ಕರ್ ಸುನಿಲ್ ಅವರನ್ನು ಲೋಕಾಯುಕ್ತ ಪೊಲೀಸರು ಈಚೆಗೆ ಬಂಧಿಸಿದ್ದರು. ಆ ನಂತರ ತಹಶೀಲ್ದಾರ್ ತಲೆಮರೆಸಿಕೊಂಡಿದ್ದಾರೆ.

ಎನ್‌ಒಸಿಗೆ ತಹಶೀಲ್ದಾರ್ ಸಹಿ ಬಾಕಿ ಇತ್ತು. ಸಹಿ ಹಾಕಲು ತಹಶೀಲ್ದಾರ್‌ಗೆ ₹10 ಸಾವಿರ ಹಾಗೂ ನನಗೂ ಹಣ ಕೊಡಬೇಕು’ ಎಂದು ಸುನಿಲ್ ಹೇಳಿದ್ದರು. ಗುರುವಾರ ಅಜಿತ್ ಎಂಬುವರಿಂದ ₹12 ಸಾವಿರ ಲಂಚ ಪಡೆಯುವಾಗ ಸುನಿಲ್ ಅವರನ್ನು ಬಂಧಿಸಲಾಗಿತ್ತು.

‘ತಹಶೀಲ್ದಾರ್‌ಗೆ ರಜೆ ಪಡೆದಿಲ್ಲ. ರಜೆ ಮಂಜೂರಾತಿಗೆ ಅರ್ಜಿ ಸಲ್ಲಿಸಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ’ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

ಸೂಕ್ತ ಆಯ್ಕೆ, ವಿರೋಧಿಸುವವರು ಢೋಂಗಿಗಳು: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: ‘ದಸರಾ ಉದ್ಘಾಟನೆಗೆ ಲೇಖಕಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ್ದು ಸೂಕ್ತವಾಗಿದೆ. ಇದನ್ನು ವಿರೋಧಿಸುತ್ತಿರುವವರು ಢೋಂಗಿಗಳು, ಧರ್ಮಾಂಧರು ಹಾಗೂ ಇತಿಹಾಸದ ಅರಿವಿಲ್ಲದವರು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಅವರು ಬುಕರ್ ಪ್ರಶಸ್ತಿ ಪುರಸ್ಕೃತರು. ಹೀಗಾಗಿ, ಅವಕಾಶ ಕೊಟ್ಟಿದ್ದೇವೆ. ಆಯ್ಕೆಯನ್ನು ವಿರೋಧಿಸುತ್ತಿರುವವರು ಇತಿಹಾಸವನ್ನು ತಿಳಿದುಕೊಳ್ಳಲಿ’ ಎಂದರು.

‘ಹಿಂದೆ ಕವಿ ಕೆ.ಎಸ್. ನಿಸಾರ್ ಅಹಮದ್ ಉದ್ಘಾಟಿಸಿದ್ದರು. ನಾಡಹಬ್ಬ, ಸಾಂಸ್ಕೃತಿಕ ಹಬ್ಬವನ್ನು ಇಂಥ ಧರ್ಮದವರೇ ಉದ್ಘಾಟಿಸಬೇಕೆಂದಿಲ್ಲ. ಹಿಂದೆ ಮಹಾರಾಜರ ಆಳ್ವಿಕೆ ಇಲ್ಲದಿರುವಾಗ ಹೈದರ್ ಅಲಿ, ಟಿಪ್ಪು ಸುಲ್ತಾನ್ ನಡೆಸಿರಲಿಲ್ಲವೇ? ಇದು ಧರ್ಮಾತೀತ, ಜಾತ್ಯತೀತ ಹಬ್ಬ. ಎಲ್ಲ ಧರ್ಮದವರೂ ಆಚರಿಸುತ್ತಾರೆ’ ಎಂದು ಪ್ರತಿಪಾದಿಸಿದರು.

ದಸರಾ ಉತ್ಸವ

ಕನ್ನಡದಲ್ಲೇ ಬರೆದಿದ್ದಾರಲ್ಲವೇ?: ‘ಅವರು ಹಿಂದೆ ಮಾಡಿದ್ದ ಭಾಷಣಕ್ಕೂ- ಈಗ ಆಹ್ವಾನಿಸಿದ್ದಕ್ಕೂ ಏನು ಸಂಬಂಧ? ‘ಎದೆಯ ಹಣತೆ’ ಯಾವ ಭಾಷೆಯಲ್ಲಿದೆ? ಭಾಷೆ ಬಗ್ಗೆ ಗೌರವ, ಪ್ರೀತಿ ಇಲ್ಲದಿದ್ದರೆ ಕನ್ನಡದಲ್ಲಿ ಬರೆಯಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

ಕನ್ನಡಕ್ಕೆ ಅಗೌರವ ತೋರಿದವರನ್ನೇ ಕರೆಯಬೇಕಿತ್ತಾ?: ಅಶೋಕ

ಮೈಸೂರು: ‘ಕನ್ನಡ ಭಾಷೆಗೆ ಅಗೌರವ ತೋರಿದವರನ್ನೇ ಈಗ ಕರೆಯಬೇಕಿತ್ತಾ? ಆರು ಕೋಟಿ ಹಿಂದೂಗಳಲ್ಲಿ ಒಬ್ಬ ಸಾಧಕ ಸಿಗುವುದಿಲ್ಲವೇ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಕೇಳಿದರು.

ಚಾಮುಂಡಿಬೆಟ್ಟದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ, ‘ದಸರೆಗೆ ದೊಡ್ಡ ಸಂಪ್ರದಾಯವಿದೆ. ಚಾಮುಂಡೇಶ್ವರಿ ತಾಯಿ ಬಗ್ಗೆ ನನಗೆ ಭಕ್ತಿ ಇದೆ ಎಂದು ಬಾನು ಮುಷ್ತಾಕ್ ಒಪ್ಪಿಕೊಳ್ಳಬೇಕು’ ಎಂದರು.

ವಾರದಲ್ಲಿ ₹25 ಕೋಟಿಗೂ ಅಧಿಕ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ಶೇಕಡ 50ರಷ್ಟು ರಿಯಾಯಿತಿ ಘೋಷಿಸಿದ ಮೊದಲ ವಾರವೇ ರಾಜಧಾನಿಯಲ್ಲಿ ₹25 ಕೋಟಿ ದಂಡ ಸಂಗ್ರಹವಾಗಿದೆ.

ಆಗಸ್ಟ್ 31ರ ಅಂತ್ಯಕ್ಕೆ ಒಟ್ಟು 9,06,707 ಪ್ರಕರಣಗಳು ಇತ್ಯರ್ಥವಾಗಿದ್ದು, ₹25,52,60,250 ದಂಡ ಸಂಗ್ರಹಣೆಯಾಗಿದೆ. ಸೆಪ್ಟೆಂಬರ್ 12ರವರೆಗೆ ದಂಡ ಪಾವತಿಗೆ ಅವಕಾಶ ಇದೆ. 2023ರ ಫೆಬ್ರವರಿ 11 ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಈ ರಿಯಾಯಿತಿ ಅನ್ವಯವಾಗಲಿದೆ.

ಪಾವತಿ ಹೇಗೆ? : ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆಯನ್ನು ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಳ್ಳಬಹುದು. ಬಳಿಕ ಪಾವತಿಸಲು ಇಚ್ಛಿಸುವ ದಂಡದ ಮೊತ್ತ ಆಯ್ಕೆ ಮಾಡಿದರೆ, ರಿಯಾಯಿತಿ ಮೊತ್ತದ ಪಾವತಿಯ ಆಯ್ಕೆ ಲಭ್ಯವಾಗು ತ್ತದೆ. ನಂತರ ದಂಡದ ಮೊತ್ತ ಪಾವತಿಸಬಹುದು.



ಇದಲ್ಲದೆ, ಹತ್ತಿರದ ಸಂಚಾರ ಪೊಲೀಸ್ ಠಾಣೆಗಳು, ಇನ್‌ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರಕ್ಕೆ ತೆರಳಿ ವಾಹನದ ನೋಂದಣಿ ಸಂಖ್ಯೆಯ ವಿವರಗಳನ್ನು ನೀಡುವ ಮೂಲಕ ದಂಡ ಪಾವತಿಸಬಹುದು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಒಂದು ವೇಳೆ ತಪ್ಪಾಗಿ ದಂಡ ವಿಧಿಸಲಾಗಿದ್ದರೆ, ಮರುಪರಿಶೀಲನೆಯ ದೂರನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಅಥವಾ ಸಂಚಾರ ನಿರ್ವಹಣಾ ಕೇಂದ್ರಕ್ಕೆ ತೆರಳಿ ದೂರು ಸಲ್ಲಿಸುವ ಮೂಲಕವೂ ಸರಿಪಡಿಸಿ ಕೊಳ್ಳಬಹುದಾಗಿದೆ.

ದೆಹಲಿಯಲ್ಲಿ ಕಾಂಗ್ರೆಸ್ ನಾಯಕರ ಭೇಟಿಗೆ ಮಠಾಧೀಶರ ಸಿದ್ಧತೆ

ರಾಜಣ್ಣ ಮನೆಯಲ್ಲಿ ಮಠಾಧೀಶರ ಸಭೆ

ಪ್ರಜಾವಾಣಿ ವಾರ್ತೆ

ತುಮಕೂರು: ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರ ನಗರದ ಕ್ಯಾತ್ಸಂದ್ರ ಮನೆಗೆ ಭಾನುವಾರ ಹಿಂದುಳಿದ, ದಲಿತ ಸಮುದಾಯದ ಮಠಾಧೀಶರ ಒಕ್ಕೂಟದ ನಿಯೋಗದ 15ಕ್ಕೂ ಹೆಚ್ಚು ಮಠಾಧೀಶರು ಭೇಟಿ ನೀಡಿದ್ದರು.

ಸಂಪುಟದಿಂದ ಕೈಬಿಟ್ಟ ಬೆಳವಣಿಗೆಗಳ ಕುರಿತು ಮಠಾಧೀಶರು ಸುಮಾರು ಎರಡು ತಾಸು ರಾಜಣ್ಣ ಅವರೊಂದಿಗೆ ಚರ್ಚಿಸಿದರು. ಶೀಘ್ರದಲ್ಲಿ ದೆಹಲಿಗೆ ತೆರಳಿ ಕಾಂಗ್ರೆಸ್ ಮುಖಂಡರನ್ನು ಕಂಡು ಪುನಃ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಒತ್ತಡ ಹೇರಲು ನಿರ್ಣಯಿಸಿದರು. ಶಾಸಕ ಎಚ್. ವಿ.ವೆಂಕಟೇಶ್, ಮೇಲ್ಮನೆ ಸದಸ್ಯ ಆರ್. ರಾಜೇಂದ್ರ ಸಭೆಯಲ್ಲಿ ಭಾಗವಹಿಸಿದ್ದರು.

‘ದೆಹಲಿಗೆ ತೆರಳಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಲಾಗುವುದು’ ಎಂದು ಸಭೆ ನಂತರ ಮಠಾಧೀಶರು ಸುದ್ದಿಗಾರರಿಗೆ ತಿಳಿಸಿದರು.

‘ರಾಜಣ್ಣ ಅವರಿಗೆ ಒಂದು ಅವಕಾಶ ನೀಡಬಹುದಿತ್ತು. ಏಕಾಏಕಿ ಕೈಬಿಟ್ಟಿದ್ದು, ನೋವಾಗಿದೆ. ಇದನ್ನು ಸರಿ ಮಾಡಬೇಕು ಎಂದು ಮನವರಿಕೆ ಮಾಡಿಕೊಡಲಾಗುವುದು’ ಎಂದು ಹೊಸದುರ್ಗದ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

‘ರಾಜಣ್ಣ ಶೋಷಿತ ಸಮುದಾಯಗಳ ಧ್ವನಿ. ಜಾತ್ಯತೀತ ನಾಯಕರಾಗಿ ಒಂದು ವ್ಯಕ್ತಿತ್ವ ಬೆಳೆಸಿಕೊಂಡಿದ್ದಾರೆ. ತಪ್ಪು ಗ್ರಹಿಕೆಯಿಂದ ಅವರನ್ನು ಕೈಬಿಟ್ಟಿರುವುದು ಖಂಡನೀಯ’ ಎಂದು ರಾಜನಹಳ್ಳಿ ಗುರುಪೀಠದ ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ ಹೇಳಿದರು.

ಚಿತ್ರದುರ್ಗದ ಕುಂಚಿಟಗ ಮಠದ ಶಾಂತವೀರ ಸ್ವಾಮೀಜಿ, ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ, ಮಾಚಿದೇವ ಮಠದ ಬಸವ ಮಾಚಿದೇವ ಸ್ವಾಮೀಜಿ, ಮೇದಾರ ಕೇತೇಶ್ವರ ಮಠದ ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಕೃಷ್ಣ ಯಾದವಾನಂದ ಸ್ವಾಮೀಜಿ, ನಿಟ್ಟೂರಿನ ನಾರಾಯಣ ಗುರು ಮಠದ ರೇಣುಕಾನಂದ ಸ್ವಾಮೀಜಿ, ತಂಗನಹಳ್ಳಿ ಕಾಶಿ ಅನ್ನಪೂರ್ಣೇಶ್ವರಿ ಮಠದ ಬಸವ ಮಹಾಲಿಂಗ ಸ್ವಾಮೀಜಿ, ಬೆಳ್ಳಾವಿ ಕಾರದ ಮಠದ ಕಾರದ ವೀರ ಬಸವ ಸ್ವಾಮೀಜಿ, ಕೆಂಕೆರೆಯ ಚನ್ನಬಸವ ಸ್ವಾಮೀಜಿ ಈ ನಿಯೋಗದಲ್ಲಿದ್ದರು.



ವಿವಿಧ ಮಠಾಧೀಶರು ತುಮಕೂರಿನಲ್ಲಿ ಕೆ.ಎನ್.ರಾಜಣ್ಣ ಅವರ ನಿವಾಸದಲ್ಲಿ ಸಭೆ ನಡೆಸಿದರು. ಶಾಸಕ ಎಚ್.ವಿ.ವೆಂಕಟೇಶ್, ಮೇಲ್ಮನೆ ಸದಸ್ಯ ಆರ್.ರಾಜೇಂದ್ರ ಉಪಸ್ಥಿತರಿದ್ದರು

ಮಠಾಧೀಶರು ಸತ್ಯದ ಪರ ಹೋರಾಡುವುದಕ್ಕೆ ಹೆಚ್ಚಿನ ಶಕ್ತಿ ಕೊಟ್ಟಿದ್ದಾರೆ. ರಾಜಕೀಯದ ಏರುಪೇರು, ಸ್ಥಿತ್ಯಂತರದ ಬಗ್ಗೆ ಅವರ ಜತೆ ಚರ್ಚಿಸಿದ್ದೇನೆ
ಕೆ.ಎನ್.ರಾಜಣ್ಣ, ಮಾಜಿ ಸಚಿವ

‘ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆಗೆ ಮುಂದಾಗಿದ್ದ ಡಿಕೆಶಿ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ಸಹಕಾರದಿಂದ ಸರ್ಕಾರ ರಚಿಸಲು ಮುಂದಾಗಿದ್ದರು. ದೆಹಲಿಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಜೊತೆ ರಹಸ್ಯ ಸಭೆ ನಡೆದಿತ್ತು’ ಎಂದು ಶಾಸಕ ಬಸನಗೌಡ ಪಾಟೀಲ ಇಲ್ಲಿ ಹೇಳಿದರು.



ಬಸನಗೌಡ ಪಾಟೀಲ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶಿವಕುಮಾರ್ ಮುಖ್ಯಮಂತ್ರಿ, ವಿಜಯೇಂದ್ರ ಉಪ ಮುಖ್ಯಮಂತ್ರಿ ಆಗುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ಶಿವಕುಮಾರ್ ಅವರ ಹಿಂದೆ ಹೆಚ್ಚಿನ ಸಂಖ್ಯೆಯ ಶಾಸಕರಿರಲಿಲ್ಲ. ಹೀಗಾಗಿ, ಸುಮ್ಮನಾದರು’ ಎಂದರು.

'60ರಿಂದ 70 ಕಾಂಗ್ರೆಸ್ ಶಾಸಕರ ಬೆಂಬಲವಿದೆ ಎಂದು ಡಿಕೆಶಿ ಹೇಳಿದ್ದರು. ಬಿಜೆಪಿ ಆಂತರಿಕ ವರದಿ ಪ್ರಕಾರ 10ರಿಂದ 12 ಶಾಸಕರೂ ಇಲ್ಲದಿರುವ ಮಾಹಿತಿ ಸಿಕ್ಕಿತ್ತು’ ಎಂದು ಹೇಳಿದರು.

‘ಮುಸ್ಲಿಮರ ಪರ ನಿಲುವುಳ್ಳ ಸಿದ್ದರಾಮಯ್ಯ ಇನ್ನೊಂದೆರಡು ವರ್ಷ ಇದ್ದರೂ ಚಿಂತೆ ಇಲ್ಲ. ಶಿವಕುಮಾರ್ ಅವರಂತಹ ಭ್ರಷ್ಟ ಸಿ.ಎಂ ಆಗಬಾರದು. ಶಿವಕುಮಾರ್ ಹಾಗೂ ವಿಜಯೇಂದ್ರ ಇಬ್ಬರೂ ಭ್ರಷ್ಟರು. ಒಂದಾದರೆ ಕರ್ನಾಟಕವನ್ನೇ ಮಾರಿಬಿಡುತ್ತಾರೆ’ ಎಂದು ವಾಗ್ದಾಳಿ ನಡೆಸಿದರು.



ಕಸ, ಸಗಣಿ ಮೇಲೆ ಕಲ್ಲು ಹಾಕುವುದಕ್ಕೆ ನಾನು ಇಷ್ಟಪಡುವುದಿಲ್ಲ
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಮುಸ್ಲಿಂ ಯುವಕರಿಂದಲೇ ಪೂಜೆ, ಗಣೇಶ ಸ್ತೋತ್ರ ಪಠಣ • ಭಾವೈಕ್ಯ ಮೆರೆದ ಸಂದಿಗವಾಡ ಗ್ರಾಮ

ಮಸೀದಿಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ

• ಉಮೇಶ ಬಸನಗೌಡರ

ರೋಣ (ಗದಗ ಜಿಲ್ಲೆ): ತಾಲ್ಲೂಕಿನ ಸಂದಿಗವಾಡ ಗ್ರಾಮದಲ್ಲಿ ಮಸೀದಿಯಲ್ಲಿಯೇ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ್ದು, ನಿತ್ಯವೂ ಮುಸ್ಲಿಂ ಯುವಕರೇ ಮೂರ್ತಿ ಪೂಜೆ ನಡೆಸುವ ಮೂಲಕ ಗಮನಸೆಳೆದಿದ್ದಾರೆ.

‘ಗ್ರಾಮದಲ್ಲಿ ಹಬ್ಬ, ಜಾತ್ರೆ, ಉತ್ಸವಗಳ ಆಚರಣೆಗೆ ಜಾತಿ ಭೇದವಿಲ್ಲ. ಇಡೀ ಗ್ರಾಮ ಒಗ್ಗಟ್ಟಿನಿಂದ ಇದ್ದು, ಒಂದೇ ಮನೆಯವರಂತೆ ಬದುಕುತ್ತಿದ್ದೇವೆ’ ಎನ್ನುತ್ತಾರೆ ಗ್ರಾಮಸ್ಥರು.

ಗಣೇಶ ಚತುರ್ಥಿಯಂದು ಅದ್ದೂರಿ ಮೆರವಣಿಗೆಯಲ್ಲಿ ಮುಸ್ಲಿಂ ಯುವಕರೇ ಗಣೇಶನ ಮೂರ್ತಿ ತಂದು ಮಸೀದಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಮುಸ್ಲಿಂ ಯುವಕರೇ ನಿತ್ಯವೂ ಪೂಜೆ, ಪ್ರಾರ್ಥನೆ ಮಾಡುವುದು ವಿಶೇಷ. ಗಣೇಶ ಸ್ತೋತ್ರಗಳನ್ನು ನಿರರ್ಗಳವಾಗಿ ಹೇಳುತ್ತಾರೆ.



ಸಂದಿಗವಾಡ ಗ್ರಾಮದ ಮಸೀದಿಯಲ್ಲಿ ಗಣೇಶನ ಪೂಜೆಯಲ್ಲಿ ನಿರತ ಮುಸ್ಲಿಂ ಯುವಕರು

ಮುಸ್ಲಿಂ ಯುವಕರ ಜೊತೆಗೆ ಹಿಂದೂ ಯುವಕರು, ಹಿರಿಯರು ಗಣೇಶ ಪೂಜೆಯಲ್ಲಿ ಪಾಲ್ಗೊಳ್ಳುವ ಮೂಲಕ ಭಾವೈಕ್ಯತೆಯಿಂದ ಹಬ್ಬ ಆಚರಿಸುತ್ತಾರೆ.

‘3 ವರ್ಷದಿಂದ ಗ್ರಾಮದ ಮಸೀದಿಯಲ್ಲಿ ಮೂರ್ತಿ ಪ್ರತಿಷ್ಠಾಪಿಸಲಾಗುತ್ತಿದೆ. ಇದಕ್ಕೆ ಯಾರದ್ದು ವಿರೋಧವಿಲ್ಲ. ಇದು ಸೌಹಾರ್ದಕ್ಕೆ ಸಾಕ್ಷಿಯಾಗಿದೆ ಎನ್ನುತ್ತಾರೆ’ ಗ್ರಾಮಸ್ಥರು.

ಕೇವಲ ಗಣೇಶೋತ್ಸವ ಮಾತ್ರವಲ್ಲ ಶ್ರಾವಣ ಮಾಸದಲ್ಲಿ ಜರುಗುವ ಭಜನೆಯಲ್ಲಿ ರಾಜೇಸಾಬ ಗಂಗೂರ ಎಂಬುವ ಮುಸ್ಲಿಂ ಯುವಕ ತಬಲಾ ಬಾರಿಸುತ್ತಾ ಭಕ್ತಿ ಗೀತೆಗಳನ್ನು ಹಾಡುತ್ತಾನೆ.

ದೀಪಾವಳಿ, ದಸರಾ, ಯುಗಾದಿ, ಮೊಹರಂ, ರಂಜಾನ್, ಈದ್ ಮಿಲಾದ್, ಗಣೇಶ ಹಬ್ಬ ಹೀಗೆ ಗ್ರಾಮದಲ್ಲಿ ಜರುಗುವ ಪ್ರತಿಯೊಂದು ಹಬ್ಬ ಹರಿದಿನ, ಜಾತ್ರೆ, ಉತ್ಸವಗಳನ್ನು ಯಾವುದೇ ಜಾತಿ ಭೇದವಿಲ್ಲದೇ ಎಲ್ಲರೂ ಪಾಲ್ಗೊಳ್ಳುತ್ತಾರೆ.

‘ಗ್ರಾಮದಲ್ಲಿ ಎಲ್ಲ ಹಬ್ಬಗಳನ್ನು ಭಾವೈಕ್ಯದಿಂದ ಆಚರಿಸುತ್ತೇವೆ’ ಎನ್ನುತ್ತಾರೆ ಮುಸ್ಲಿಂ ಯುವಕರಾದ ಮುನ್ನಾ ನದಾಫ, ಹಸನ್‌ಸಾಬ ನದಾಫ, ದಾವಲಸಾಬ ನದಾಫ, ಲಾಡಸಾಬ ನದಾಫ.

ಮೂರ್ತಿ ಪ್ರತಿಷ್ಠಾಪಿಸಿರುವ ಮಸೀದಿಗೆ ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ರೋಣ ಸಿಪಿಐ ಎಸ್.ಎಸ್.ಬೀಳಗಿ, ರೋಣ ಠಾಣೆ ಪಿಎಸ್‌ಐ ಪ್ರಕಾಶ ಬಣಕಾರ ಕೂಡ ಭೇಟಿ ನೀಡಿದ್ದು ಗ್ರಾಮದ ಕೋಮು ಸೌಹಾರ್ದದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಮ್ಮ ಗ್ರಾಮದಲ್ಲಿ ಜಾತಿ, ಧರ್ಮದ ಭೇದವಿಲ್ಲ. ಎಲ್ಲ ಹಬ್ಬಗಳನ್ನು ಹಿಂದೂ, ಮುಸ್ಲಿಮರು ಸೇರಿ ಆಚರಿಸುತ್ತೇವೆ. ಇದಕ್ಕೆ ಮಸೀದಿಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾದರಿಯಾಗಿದೆ
ತಿಪ್ಪನಗೌಡ ಹುಲ್ಲೂರ
ಸಂದಿಗವಾಡ ಗ್ರಾಮದ ಯುವಕ

ಮಸೀದಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ, ಪೂಜೆಗೆ ಗ್ರಾಮಸ್ಥರೆಲ್ಲರ ಸಹಕಾರವಿದೆ. ನಿತ್ಯವೂ ಗಣೇಶ ಪೂಜೆಯನ್ನು ನಾವೇ ಮಾಡುತ್ತೇವೆ. ಪೂಜೆಯಲ್ಲಿ ಗ್ರಾಮದ ಎಲ್ಲರೂ ಪಾಲ್ಗೊಳ್ಳುತ್ತಾರೆ
ಲಾಡಸಾಬ ನದಾಫ, ಮುನ್ನಾ ನದಾಫ
ಸಂದಿಗವಾಡ ಗ್ರಾಮದ ಮುಸ್ಲಿಂ ಯುವಕರು

ಸಹೋದರರನಿಂದಲೇ ಅತ್ಯಾಚಾರ, ಪೋಷಕರ ದೂರು

ಶೌಚಾಲಯದಲ್ಲಿ ಬಾಲಕಿಗೆ ಹೆರಿಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಹೋದರನಿಂದ ಅತ್ಯಾಚಾರಕ್ಕೆ ಒಳಗಾದ 15 ವರ್ಷದ ಬಾಲಕಿಗೆ ಶುಕ್ರವಾರ ಮನೆಯಲ್ಲೇ ಹೆರಿಗೆ ಆಗಿದೆ. ಜಿಲ್ಲೆಯ ಪ್ರೌಢಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದಾಳೆ. ಆಕೆಯು ಮನೆಯ ಶೌಚಾಲಯದಲ್ಲಿ ಗಂಡು ಮಗುವಿಗೆ ಜನ್ಮನೀಡಿದ್ದಾಳೆ.

ಏಳೂವರೆ ತಿಂಗಳಿಗೆ ಪ್ರಸವವಾಗಿದ್ದು, ಮೆಗ್ಗಾನ್ ಆಸ್ಪತ್ರೆಯ ಇನ್‌ಕ್ಯುಬೇಟರ್‌ನಲ್ಲಿ ಇಟ್ಟು ಶಿಶುವಿಗೆ ಚಿಕಿತ್ಸೆ ನೀಡಲಾಗುತ್ತಿದೆ. ತಾಯಿ ಆರೋಗ್ಯವಾಗಿದ್ದಾಳೆ.

‘ಸ್ವಂತ ಸಹೋದರನೇ ಅತ್ಯಾಚಾರ ಎಸಗಿದ್ದಾನೆ’ ಎಂದು ಪಾಲಕರು ಕಾನೂನು ಸಂಘರ್ಷಕ್ಕೆ ಒಳಗಾದ 16 ವರ್ಷದ ಬಾಲಕನ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದು, ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವೂ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ ಎಂದು ಆಯೋಗದ ಸದಸ್ಯ ಶಶಿಧರ ಕೋಸಂಬೆ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ 9ನೇ ತರಗತಿವರೆಗೆ ಓದಿದ್ದು, ಶಾಲೆ ಬಿಟ್ಟಿದ್ದಾನೆ.

‘ಪಾಲಕರು ಕೆಲಸಕ್ಕೆ ಹೋದಾಗ ಅಣ್ಣ ಅತ್ಯಾಚಾರ ಎಸಗಿದ್ದಾನೆ. ಪಾಲಕರಿಗೆ ಹೇಳದಂತೆ ತಿಳಿಸಿದ್ದ. ಹೀಗಾಗಿ ಹೇಳಿರಲಿಲ್ಲ. ಒಮ್ಮೆ ಹೊಟ್ಟೆ ನೋವು ಬಂದಿದ್ದು, ಅಮ್ಮ ಮಾತ್ರೆ ತಂದು ಕೊಟ್ಟಿದ್ದರು. ಶಾಲೆ ಸಮವಸ್ತ್ರದ ಮೇಲೆ ಕೋಟ್ ಹಾಕುತ್ತಿದ್ದ ಕಾರಣ ಹೊಟ್ಟೆ ಬಂದಿರುವುದು ಯಾರಿಗೂ ಗೊತ್ತಾಗಿರಲಿಲ್ಲ’ ಎಂದು ಬಾಲಕಿಯು ಹೇಳಿಕೆಯಲ್ಲಿ ತಿಳಿಸಿದ್ದಾಳೆ.

ಮುಖ್ಯಾಂಶಗಳು

- ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ವಿರುದ್ಧ ಪ್ರಕರಣ

ವಿದ್ಯಾರ್ಥಿನಿ ಗರ್ಭಿಣಿ: ಪೋಕ್ಸೊ ಪ್ರಕರಣ

ಇಳಕಲ್ (ಬಾಗಲಕೋಟೆ): ಜಿಲ್ಲೆಯ ವಸತಿ ಶಾಲೆಯೊಂದರ 7ನೇ ತರಗತಿ ವಿದ್ಯಾರ್ಥಿನಿ 2 ತಿಂಗಳ ಗರ್ಭಿಣಿ ಎಂದು ಗೊತ್ತಾಗಿದ್ದು, ಗ್ರಾಮೀಣ ಠಾಣೆಯಲ್ಲಿ ಶನಿವಾರ ರಾತ್ರಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ಅದೇ ವಸತಿ ಶಾಲೆಯಲ್ಲಿ ಹಿಂದಿನ ವರ್ಷ 8ನೇ ತರಗತಿ ಓದಿದ್ದ ಮುಧೋಳ ತಾಲ್ಲೂಕಿನ ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಬಾಲಕ ವಿದ್ಯಾರ್ಥಿನಿಗೆ ಪುಸಲಾಯಿಸಿ, ಹಾಸ್ಟೆಲ್, ಹೊಲದಲ್ಲಿ ದೈಹಿಕ ಸಂಪರ್ಕ ಮಾಡಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪಿಎಸ್‌ಐ ಮಲ್ಲಿಕಾರ್ಜುನ ಸತ್ತಿಗೌಡರ ತನಿಖೆ ನಡೆಸಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಈ ಬಗ್ಗೆ ಸ್ವಯಂ ಪ್ರೇರಿತ ಪ್ರಕರಣ ದಾಖಲು ಮಾಡಿಕೊಳ್ಳಲು ನಿರ್ಧರಿಸಿದೆ ಎಂದು ಆಯೋಗದ ಸದಸ್ಯ ಶಶಿಧರ ಕೋಸಂಬೆ ತಿಳಿಸಿದ್ದಾರೆ

ಸೋಮವಾರ, ಸೆಪ್ಟೆಂಬರ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 242 | ಪುಟ 12

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

16ರ ಘಟ್ಟಕ್ಕೆ ಕೊಕೊ

ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ಅಮೆರಿಕ ಓಪನ್ ಟೆನಿಸ್ ಟೂರ್ನಿಯ 16ರ ಘಟ್ಟಕ್ಕೆ ಲಗ್ಗೆ ಇಟ್ಟ ಅಮೆರಿಕದ ಆಟಗಾರ್ತಿ ಕೊಕೊ ಗಾಫ್ ಸಂಭ್ರಮ



ರಾಹುಲ್ ಹೈಕೋರ್ಟ್ ಮೊರೆ

ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಗೆ ವಾರಾಣಸಿಯ ನ್ಯಾಯಾಲಯ ನಿರ್ದೇಶನ ನೀಡಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದಾರೆ



ಜಿಎಸ್‌ಟಿ ವರಮಾನ ರಕ್ಷಿಸಲು ಆಗ್ರಹ 8 | ವಿವಿಧೆಡೆ ಮಳೆ ಮುಂದುವರಿಕೆ ಸಾಧ್ಯತೆ 5

ಗಡಿ ವಿವಾದ ಇತ್ಯರ್ಥಕ್ಕೆ ಸಹಮತ

ಮುಕ್ತ, ನ್ಯಾಯಯುತ ಪರಿಹಾರಕ್ಕೆ ಬದ್ಧತೆ ವ್ಯಕ್ತಪಡಿಸಿದ ಮೋದಿ, ಜಿನ್‌ಪಿಂಗ್

ತಿಯಾನ್‌ಜಿನ್ (ಚೀನಾ) (ಪಿಟಿಐ/ರಾಯಿಟರ್ಸ್): ಉಭಯ ದೇಶಗಳ ನಡುವೆ ಉದ್ವಿಗ್ನ ಸ್ಥಿತಿಗೆ ಕಾರಣವಾಗಿರುವ ಗಡಿ ವಿವಾದವನ್ನು 'ಮುಕ್ತ, ನ್ಯಾಯಯುತ ಮತ್ತು ಪರಸ್ಪರರಿಗೆ ಒಪ್ಪಿತವಾಗಬಹುದಾದ ಮಾರ್ಗ'ದಲ್ಲಿ ಇತ್ಯರ್ಥಪಡಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಬದ್ಧತೆ ವ್ಯಕ್ತಪಡಿಸಿದರು.

ತಿಯಾನ್‌ಜಿನ್‌ನಲ್ಲಿ ಭಾನುವಾರ ಆರಂಭವಾದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆ ವೇಳೆ ಮೋದಿ ಹಾಗೂ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಜಾಗತಿಕ ವ್ಯಾಪಾರದಲ್ಲಿ ಸ್ಥಿರತೆ ತರುವ ದಿಸೆಯಲ್ಲಿ ಜತೆಯಾಗಿ ಕೆಲಸ ಮಾಡುವ ಪ್ರತಿಜ್ಞೆಯನ್ನೂ ಉಭಯ ನಾಯಕರು ಕೈಗೊಂಡರು. ಅಭಿವೃದ್ಧಿಯ ವಿಚಾರದಲ್ಲಿ ಎರಡೂ ದೇಶಗಳು ಪಾಲುದಾರರೇ ಹೊರತು ಪ್ರತಿಸ್ಪರ್ಧಿಗಳಲ್ಲ; ಉಭಯ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳು ವಿವಾದಗಳಾಗಿ ಬದಲಾಗಬಾರದು ಎಂಬುದನ್ನು ಒಪ್ಪಿಕೊಂಡರು. ▶8



ಪ್ರಧಾನಿ ಮೋದಿ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ —ಪಿಟಿಐ ಚಿತ್ರ

ಒಗ್ಗಟ್ಟಿನ ಹೋರಾಟದ ಸೂಚನೆ

ಭಾರತದಿಂದ ಆಮದು ಮಾಡಿಕೊಳ್ಳುತ್ತಿರುವ ಸರಕುಗಳ ಮೇಲೆ ಅಮೆರಿಕವು ಶೇಕಡ 50ರಷ್ಟು ಸುಂಕ ವಿಧಿಸಿದ ಐದು ದಿನಗಳ ಬಳಿಕ ಮೋದಿ–ಜಿನ್‌ಪಿಂಗ್ ಮಾತುಕತೆ ನಡೆದಿದೆ. ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕೆ ಪ್ರತಿಯಾಗಿ ಅಮೆರಿಕವು ಸುಂಕ ಹೆಚ್ಚಿಸುವ ನಿರ್ಧಾರ ತೆಗೆದುಕೊಂಡಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಒತ್ತಡದ ವಿರುದ್ಧ ಷಿ ಮತ್ತು ಮೋದಿ ಅವರು ಒಗ್ಗಟ್ಟಿನ ಹೋರಾಟ ನಡೆಸಲು ನೋಡುತ್ತಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮೋದಿ ಹೇಳಿದ್ದು...

- ಭಾರತವು ಪರಸ್ಪರ ನಂಬಿಕೆ, ಗೌರವ ಮತ್ತು ಸೂಕ್ಷ್ಮ ವಿಚಾರಗಳ ಆಧಾರದ ಮೇಲೆ ಚೀನಾದೊಂದಿಗಿನ ಬಾಂಧವ್ಯ ಮುಂದುವರಿಸಲು ಬದ್ಧವಾಗಿದೆ
- ಭಾರತ–ಚೀನಾ ನಡುವಣ ಸಹಕಾರವು ಎರಡೂ ದೇಶಗಳ 280 ಕೋಟಿ ಜನರ ಹಿತಾಸಕ್ತಿಗೆ ಸಂಬಂಧಿಸಿದ್ದು
- ಪೂರ್ವ ಲಡಾಖ್‌ನಲ್ಲಿ ನಿಯೋಜಿಸಿದ್ದ ಸೇನೆಯನ್ನು ಕಳೆದ ವರ್ಷ ಉಭಯ ದೇಶಗಳು ವಾಪಸ್ ಕರೆಸಿಕೊಂಡಿರುವುದು ಗಡಿಯಲ್ಲಿ ಶಾಂತಿ ಮತ್ತು ಸ್ಥಿರತೆಯ ವಾತಾವರಣ ಸೃಷ್ಟಿಸಿದೆ
- ಕಳೆದ ವರ್ಷ ಕಜಾನ್‌ನಲ್ಲಿ ನಡೆದ ಚರ್ಚೆ ನಮ್ಮ ಸಂಬಂಧ ಸಕಾರಾತ್ಮಕ ಹಾದಿಯಲ್ಲಿ ಮುನ್ನಡೆಯಲು ನೆರವಾಗಿದೆ
- ಕೈಲಾಸ ಮಾನಸ ಸರೋವರ ಯಾತ್ರೆ ಪುನರಾರಂಭವಾಗಿದೆ. ಉಭಯ ದೇಶಗಳ ನಡುವೆ ನೇರ ವಿಮಾನ ಸಂಚಾರ ಕೂಡಾ ಪುನರಾರಂಭಿಸಲಾಗುತ್ತದೆ

ಜಿನ್‌ಪಿಂಗ್ ಹೇಳಿದ್ದು...

- ಪರಸ್ಪರ 'ಸ್ನೇಹಿತ'ರಾಗಿರುವುದೇ ಭಾರತ ಹಾಗೂ ಚೀನಾದ ಮುಂದಿರುವ ಒಳ್ಳೆಯ ಆಯ್ಕೆ
- ಗಡಿಯಲ್ಲಿ ಶಾಂತಿ ಸ್ಥಾಪನೆ ಖಚಿತಪಡಿಸಿಕೊಳ್ಳಲು ಎರಡೂ ದೇಶಗಳು ಜತೆಯಾಗಿ ಕೆಲಸ ಮಾಡಬೇಕು
- ಭಾರತ–ಚೀನಾ ಸಂಬಂಧವನ್ನು ಗಡಿ ವಿವಾದದ ಆಧಾರದಲ್ಲಿ ವ್ಯಾಖ್ಯಾನಿಸಲು ಅವಕಾಶ ನೀಡಬಾರದು
- ಎರಡೂ ದೇಶಗಳು ಪರಸ್ಪರರ ಯಶಸ್ಸಿನಲ್ಲಿ ಪಾಲುದಾರರಾಗಬೇಕು. ಡ್ರ್ಯಾಗನ್ (ಚೀನಾ) ಮತ್ತು ಆನೆ (ಭಾರತ) ಜತೆಯಾಗಿ ನೃತ್ಯ ಮಾಡುವಂತಾಗಬೇಕು
- ಅಭಿವೃದ್ಧಿ ಹಾದಿಯಲ್ಲಿ ಪರಸ್ಪರ ಜತೆಗಾರರಾಗಬೇಕೇ ಹೊರತು, ಬೆದರಿಕೆಯಾಗಿ ಪರಿಣಮಿಸಬಾರದು
- ಬಹುಪಕ್ಷೀಯತೆ ಎತ್ತಿಹಿಡಿಯುವ, ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ತರುವ ನಮ್ಮ ಐತಿಹಾಸಿಕ ಜವಾಬ್ದಾರಿಯನ್ನು ನಿರ್ವಹಿಸಲು ಒಟ್ಟಾಗಿ ಕೆಲಸ ಮಾಡಬೇಕು

ಸಾತ್ವಿಕ್–ಚಿರಾಗ್ ಜೋಡಿಗೆ ಕಂಚು

ವಿಶ್ವ ಬ್ಯಾಡ್ಮಿಂಟನ್

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಪಡೆದರು. ಸೆಮಿಫೈನಲ್‌ನಲ್ಲಿ ಭಾರತದ ಜೋಡಿಯು ಚೀನಾದ ಚೆನ್ ಬೋ ಯಾಂಗ್ ಮತ್ತು ಲೀ ಯೀ ಜೋಡಿ ಎದುರು ಮಣಿಯಿತು

ಸೆಮಿಫೈನಲ್ ಸ್ಕೋರ್

ಚೆನ್ ಯಾಂಗ್–ಲೀ ಯಿ (ಚೀನಾ)	21	18	21
ಸಾತ್ವಿಕ್–ಚಿರಾಗ್ (ಭಾರತ)	19	21	12

* ಸಾತ್ವಿಕ್–ಚಿರಾಗ್ ಅವರಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಲಿದ ಎರಡನೇ ಕಂಚು. 2022ರಲ್ಲಿ ಜಯಿಸಿದ್ದರು

* ಈ ಸಲದ ಟೂರ್ನಿಯಲ್ಲಿ ಭಾರತಕ್ಕೆ ಲಭಿಸಿದ ಏಕೈಕ ಪದಕ



'ಎಜುಕೇಟ್ ಗರ್ಲ್ಸ್'ಗೆ ಮ್ಯಾಗ್ಸೆಸೆ

ಶಿಕ್ಷಣದ ಮೂಲಕ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಸಂದ ಗೌರವ


ಮುಂಬೈ (ಪಿಟಿಐ): ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿ, ವಿವಿಧ ರೀತಿಯ ಶೋಷಣೆಯಿಂದ ಅವರನ್ನು ವಿಮೋಚನೆಗೊಳಿಸುವಲ್ಲಿ ನಿರತವಾಗಿರುವ ಸ್ವಯಂ ಸೇವಾ ಸಂಸ್ಥೆ 'ಎಜುಕೇಟ್ ಗರ್ಲ್ಸ್'ಗೆ ಈ ಬಾರಿಯ ಪ್ರತಿಷ್ಠಿತ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ.

'ಎಜುಕೇಟ್ ಗರ್ಲ್ಸ್' ಸಂಸ್ಥೆಯು ರೇಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಆಯ್ಕೆಯಾಗಿರುವ ಭಾರತದ ಮೊದಲ ಸಂಘಟನೆಯಾಗಿದೆ. 'ಇದೊಂದು ಐತಿಹಾಸಿಕ ಕ್ಷಣ' ಎಂದು ರೇಮನ್ ಮ್ಯಾಗ್ಸೆಸೆ ಅವಾರ್ಡ್ ಫೌಂಡೇಷನ್ (ಆರ್‌ಎಂಎಎಫ್) ಪ್ರಕಟಣೆಯಲ್ಲಿ ಭಾನುವಾರ ತಿಳಿಸಿದೆ.

'ದಿ ಫೌಂಡೇಷನ್ ಟು ಎಜುಕೇಟ್ ಗರ್ಲ್ಸ್ ಗ್ಲೋಬಲಿ' ಎಂಬುದು ಸಂಸ್ಥೆಯ ಮೂಲ ಹೆಸರಾಗಿದ್ದು, ಇದು 'ಎಜುಕೇಟ್ ಗರ್ಲ್ಸ್' ಎಂದೇ ಪ್ರಸಿದ್ಧ. ಸಫೀನಾ ಹುಸೇನ್ ಅವರು ಸಂಘಟನೆಯನ್ನು 2007ರಲ್ಲಿ ಸ್ಥಾಪಿಸಿದ್ದಾರೆ.

ಫಿಲಿಪ್ಪೀನ್ಸ್ ರಾಜಧಾನಿ ಮನಿಲಾದಲ್ಲಿ ನವೆಂಬರ್ 7ರಂದು ನಡೆಯುವ ಸಮಾರಂಭದಲ್ಲಿ 67ನೇ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿನ ಕಾರ್ಯಕ್ಕಾಗಿ ಮಾಲ್ದೀವ್ಸ್‌ನ ಶಾಹಿನಾ ಅಲಿ ಹಾಗೂ ಫಿಲಿಪ್ಪೀನ್ಸ್‌ನ ಫ್ಲಾವಿಯಾನೊ ಆಂಟೊನಿಯೊ ಎಲ್ ವಿಲ್ಲಾನುಯೆವಾ ಅವರಿಗೂ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದೆ. ▶9



ಐತಿಹಾಸಿಕ ಕ್ಷಣ: ಸಫೀನಾ

'ಸಂಸ್ಥೆಗೆ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿರುವುದು ಭಾರತದ ಪಾಲಿಗೆ ಐತಿಹಾಸಿಕ ಕ್ಷಣ. ದೇಶದ ಮೂಲೆಯೊಂದರಲ್ಲಿ ಒಬ್ಬ ಬಾಲಕಿಯಿಂದ ಈ ಶಿಕ್ಷಣ ಅಭಿಯಾನ ಆರಂಭಗೊಂಡಿತು. ಜನರೇ ಮುನ್ನಡೆಸುತ್ತಿರುವ ಚಳವಳಿಯೊಂದು ಈಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿರುವುದು ಖುಷಿ ತಂದಿದೆ' ಎಂದು 'ಎಜುಕೇಟ್ ಗರ್ಲ್ಸ್'ನ ಸಂಸ್ಥಾಪಕಿ ಸಫೀನಾ ಹುಸೇನ್ ಭಾನುವಾರ ಹೇಳಿದರು.

'ಸಂಘಟನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಟೀಮ್ ಬಾಲಿಕಾ'ದ ಸ್ವಯಂ ಸೇವಕರು, ಪಾಲುದಾರರು, ಬೆಂಬಲ ನೀಡುತ್ತಿರುವವರಿಗೆ ಈ ಪ್ರಶಸ್ತಿಯಿಂದ ಗೌರವ ಸಿಕ್ಕಂತಾಗಿದೆ. ಅಲ್ಲದೇ, ಲಕ್ಷಾಂತರ ಬಾಲಕಿಯರು ತಮ್ಮ ಶಿಕ್ಷಣದ ಹಕ್ಕನ್ನು ಮರಳಿ ಪಡೆದಿರುವುದನ್ನು ಸಹ ಈ ಪ್ರಶಸ್ತಿ ದೃಢೀಕರಿಸುತ್ತದೆ' ಎಂದರು.

> **ಮುಂದಿನ ದಶಕದಲ್ಲಿ 1 ಕೋಟಿ ಬಾಲಕಿಯರನ್ನು ತಲುಪುವ ಗುರಿ ಇದೆ. ಉದ್ದೇಶಿತ ಕಾರ್ಯಕ್ರಮವನ್ನು ಇತರ ದೇಶಗಳೊಂದಿಗೆ ಹಂಚಿಕೊಳ್ಳಲಾಗುವುದು**
>
> **ಸಫೀನಾ ಹುಸೇನ್,** 'ಎಜುಕೇಟ್ ಗರ್ಲ್ಸ್' ಸಂಸ್ಥಾಪಕಿ

> **ಶಿಕ್ಷಣವು ಪ್ರತಿಯೊಬ್ಬ ಬಾಲಕಿಯ ಮೂಲಭೂತ ಹಕ್ಕು ಎಂಬುದು ಸಂಸ್ಥೆಯ ನಂಬಿಕೆ. ಹಲವರ ಸಹಕಾರದಿಂದ ಪರಿವರ್ತನೆ ಸಾಧ್ಯವಾಗಿದ್ದನ್ನು ಈ ಪ್ರಶಸ್ತಿ ಗುರುತಿಸಿದೆ**
>
> **ಗಾಯತ್ರಿ ನಾಯರ್ ಲೋಬೊ,** 'ಎಜುಕೇಟ್ ಗರ್ಲ್ಸ್' ಸಿಇಒ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಂಡೂರಿನಲ್ಲಿ ಗಣಿಗಾರಿಕೆ: ಕೆಐಒಸಿಎಲ್ ನಿರ್ಧಾರಕ್ಕೆ ಸ್ಥಳೀಯರ ವಿರೋಧ

ಕುದುರೆಮುಖ ಟೌನ್‌ಶಿಪ್ ಅರಣ್ಯ ಇಲಾಖೆಗೆ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ದೇವದಾರಿ ಕಬ್ಬಿಣದ ಅದಿರು ಗಣಿಯ ಅರಣ್ಯ ಗುತ್ತಿಗೆ ಒಪ್ಪಂದ ಕಾರ್ಯಗತಗೊಳಿಸಲು ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ತನ್ನ ಒಡೆತನದಲ್ಲಿರುವ ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಟೌನ್‌ಶಿಪ್ ಸಹಿತ 282 ಎಕರೆ ಜಾಗವನ್ನು ಅರಣ್ಯ ಇಲಾಖೆಗೆ ಒಪ್ಪಿಸಲು ಮುಂದಾಗಿದೆ.


ಕುದುರೆಮುಖದಲ್ಲಿ 1977ರಲ್ಲಿ ಗಣಿಗಾರಿಕೆ ಆರಂಭವಾಗಿದ್ದು, ಉದ್ಯೋಗಿಗಳಿಗೆ ನಿರ್ಮಿಸಿದ್ದ ಟೌನ್‌ಶಿಪ್‌ನಲ್ಲಿ 6,000ಕ್ಕೂ ಹೆಚ್ಚು ಉದ್ಯೋಗಿಗಳು, ಅವರ ಕುಟುಂಬಗಳು ನೆಲಸಿದ್ದವು. ವಸತಿ ಗೃಹ, ಸರ್ಕಾರಿ ಶಾಲೆ, ಕೇಂದ್ರೀಯ ವಿದ್ಯಾಲಯ, ಆಸ್ಪತ್ರೆ, ಆಟದ ಮೈದಾನ, ಮಾರುಕಟ್ಟೆ, ಸಿನಿಮಾ ಮಂದಿರ, ಕ್ರೀಡಾಂಗಣ, ಕ್ಲಬ್‌ಹೌಸ್ ಸೇರಿ ಎಲ್ಲಾ ಸೌಲಭ್ಯಗಳಿದ್ದವು. ▶5



ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಟೌನ್‌ಶಿಪ್

ಸ್ಥಳೀಯರಿಗೆ ಕಂಪನಿ ಬಗೆಯುತ್ತಿರುವ ದ್ರೋಹ

'ಕೆಐಒಸಿಎಲ್ ನಿರ್ಧಾರವು ಕುದುರೆಮುಖದ ಸುತ್ತಮುತ್ತಲಿನ ಜನರಿಗೆ ಕಂಪನಿಯು ಬಗೆಯುತ್ತಿರುವ ದ್ರೋಹ ಮಾತ್ರವಲ್ಲ, ಕಂಪನಿ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಳ್ಳುತ್ತಿರುವ ಕ್ರಮ' ಎಂದು ಪರಿಸರ ಹೋರಾಟಗಾರ ಕಲ್ಕುಳಿ ವಿಠ್ಠಲ ಹೆಗ್ಗಡೆ ಹೇಳಿದರು.



ಕಲ್ಕುಳಿ ವಿಠ್ಠಲ ಹೆಗ್ಗಡೆ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ.

ನಗರದಲ್ಲಿ ಹಸಿರು ಹೊದಿಕೆ ಇಳಿಕೆ

ವಾಯುಮಾಲಿನ್ಯದ ಗಾಯಕ್ಕೆ ಮರ ಕಡಿದು ಉಪ್ಪು ಸವರಲು ಮುಂದಾದ ಜಿಬಿಎ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 50 ವರ್ಷಗಳ ಹಿಂದೆ ಶೇ 68.2ರಷ್ಟು ಇದ್ದ ಹಸಿರು ಹೊದಿಕೆ ಈಗ ಶೇ 3ಕ್ಕೆ ಇಳಿದಿದೆ. ಪರಿಸ್ಥಿತಿ ಹೀಗಿರುವಾಗಲೇ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಮರಗಳನ್ನು ಕಡಿಯಲು ಮುಂದಾಗಿರುವುದು ಪರಿಸರಕ್ಕೆ ಇನ್ನಷ್ಟು ಹಾನಿ ಉಂಟು ಮಾಡಲಿದೆ ಎಂದು 'ಪರಿಸರಕ್ಕಾಗಿ ನಾವು' ಸಂಘಟನೆ ತಿಳಿಸಿದೆ.

ಭಾರತೀಯ ವಿಜ್ಞಾನ ಸಂಸ್ಥೆಯು 1973ರಿಂದ 2023ರ ನಡುವೆ ಬೆಂಗಳೂರಿನ ಪರಿಸರದಲ್ಲಿ ಆಗಿರುವ ಬದಲಾವಣೆಗಳಿಗೆ ಸಂಬಂಧಿಸಿದಂತೆ ಪ್ರಕಟಿಸಿರುವ ಸಂಶೋಧನಾ ವರದಿಯಲ್ಲಿ ಹಸಿರು ಹೊದಿಕೆಯ ಪ್ರಮಾಣ ದಾಖಲಾಗಿದೆ. ವಾಯುಮಾಲಿನ್ಯಕ್ಕೆ ದೂಳಿನ ಕಣಗಳ ಕೊಡುಗೆ ಶೇ 51ರಷ್ಟು ಇದೆ. ಮರಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ದೂಳಿನ ಕಣಗಳು ಅಧಿಕಗೊಳ್ಳಲು ಕಾರಣವಾಗಿದೆ. ಒಬ್ಬ ವ್ಯಕ್ತಿಗೆ ಏಳು ಮರ ಇರಬೇಕು. ಆದರೆ,

ಮುಖ್ಯಾಂಶಗಳು
- ಮರಗಳಿಗೆ ಪೋಸ್ಟರ್ ಅಂಟಿಸಿದ ಪರಿಸರ ಕಾರ್ಯಕರ್ತರು
- 368 ಮರ ಉಳಿಸಲು ಜಾಗೃತಿ ಕಾರ್ಯಕ್ರಮ
- ಪರಿಸರದ ಅರಿವಿಗಾಗಿ ವಿವಿಧ ಘೋಷಣೆಗಳ ಭಿತ್ತಿಪತ್ರ ಪ್ರದರ್ಶನ

ಬೆಂಗಳೂರಿನ ಜನಸಂಖ್ಯೆ 1.5 ಕೋಟಿ ಇದ್ದರೆ, ಮರಗಳ ಸಂಖ್ಯೆ ಕೇವಲ 75 ಲಕ್ಷ ಇದೆ. ಬೆಂಗಳೂರಿನ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಸಂಘಟನೆ ಕಳವಳ ವ್ಯಕ್ತಪಡಿಸಿದೆ.

ಜಾಗತಿಕ ತಾಪಮಾನ ಏರಿಕೆಯ ಪರಿಣಾಮಗಳು ಜಗತ್ತಿನ ಜೀವ ಸಂಕುಲವನ್ನು ತೀವ್ರವಾಗಿ ಬಾಧಿಸುತ್ತಿವೆ. ಇದರ ಪರಿಣಾಮ ಬೆಂಗಳೂರಿನಲ್ಲಿಯೂ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇರುವ ಗಿಡ, ಮರಗಳನ್ನು ಉಳಿಸಿಕೊಂಡು ಇನ್ನೂ ಹೆಚ್ಚಿನ ಗಿಡಗಳನ್ನು ಬೆಳೆಸುವುದು ಅನಿವಾರ್ಯ. ಆದರೆ, ನಗರದಲ್ಲಿ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ನೂರಾರು ವರ್ಷಗಳ ಇತಿಹಾಸ ಇರುವ 368 ಮರಗಳನ್ನು ಕಡಿದು ಕಟ್ಟಡ ಕಟ್ಟಲು ಮುಂದಾಗಿರುವುದು ವಿಪರ್ಯಾಸ. ನೂರಾರು ವರ್ಷಗಳ ಹಳೆಯ ಮರಗಳನ್ನು ಕಡಿದು ಕಟ್ಟಡ ಕಟ್ಟುವ ಬದಲಿಗೆ ಮರಗಳನ್ನು ಉಳಿಸಿ ಬೇರೆ ಜಾಗದಲ್ಲಿ ಕಟ್ಟಡ ಕಟ್ಟುವುದು ಸರಿಯಾದ ನಿರ್ಧಾರ ಎಂದು ಹೇಳಿದೆ.

ಮರಗಳನ್ನು ಕಡಿಯುವ ನೈರುತ್ಯ ರೈಲ್ವೆಯ ತೀರ್ಮಾನ ವಿರೋಧಿಸಿ ಆನ್‌ಲೈನ್‌ನಲ್ಲಿ ಸಾರ್ವಜನಿಕರಿಂದ 10,700 ಆಕ್ಷೇಪಣೆಗಳು ಬಂದಿವೆ. 'ಪರಿಸರಕ್ಕಾಗಿ ನಾವು' ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎ.ಟಿ. ರಾಮಸ್ವಾಮಿ ನೇತೃತ್ವದಲ್ಲಿ, ಇದೇ ಜಾಗದಲ್ಲಿ ವೃಕ್ಷ ರಕ್ಷಾ ಅಭಿಯಾನ ಆಯೋಜಿಸಲಾಗಿತ್ತು. ಸುಪ್ರೀಂ ಕೋರ್ಟ್‌ನ ಇಬ್ಬರು ನಿವೃತ್ತ ನ್ಯಾಯಮೂರ್ತಿಗಳು, ಐವರು ಮಠಾಧೀಶರು, ಎಸ್. ಆರ್. ಹಿರೇಮಠ, ನಾಗೇಶ ಹೆಗಡೆ, ಹಂಪ ನಾಗರಾಜಯ್ಯ, ಕಾಳೇಗೌಡ ನಾಗವಾರ, ಇಂದೂಧರ ಹೊನ್ನಾಪುರ, ಚಂದ್ರಕಾಂತ ವಡ್ಡು, ಆಂಜನಪ್ಪ, ವಿ. ನಾಗರಾಜ್, ರವೀಂದ್ರನಾಥ ಸಿರಿವರ, ಗುಂಡಣ್ಣ ಸೇರಿದಂತೆ ಪರಿಸರ ಕಾಳಜಿಯುಳ್ಳ ನೂರಾರು ಜನರು ಭಾಗಿಯಾಗಿದ್ದರು. ಪ್ರಧಾನಿ, ರೈಲ್ವೆ ಸಚಿವರು, ಅರಣ್ಯ ಸಚಿವರು, ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆಯಲಾಗಿತ್ತು ಎಂದು ಸಂಘಟನೆಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಇದರ ಪರಿಣಾಮ ಅರಣ್ಯ ಸಚಿವರು ಈ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ರಾಜ್ಯ ಜೀವವೈವಿಧ್ಯ ಮಂಡಳಿಯ ಸಭೆಯಲ್ಲಿ ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ಕಾಲೊನಿ ಪ್ರದೇಶವನ್ನು 'ಜೀವವೈವಿಧ್ಯ ತಾಣ' ಎಂದು ಘೋಷಿಸಿ, ಅದಕ್ಕೆ ಬೇಕಾದ ಪ್ರಕ್ರಿಯೆ ನಡೆಸಲು ಸಚಿವರು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು. ಅಲ್ಲಿಯವರೆಗೆ ಮರ ಕಡಿಯಲು ಅನುಮತಿ ನೀಡಬಾರದು ಎಂದು ನಿರ್ದೇಶಿಸಿದ್ದರು. ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇದಕ್ಕೆ ವಿರುದ್ಧವಾಗಿ ನಿರ್ಧಾರ ಕೈಗೊಳ್ಳಲು ಮುಂದಾಗಿದೆ ಎಂದು ಆರೋಪಿಸಿದ್ದಾರೆ.



ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ 368 ಮರಗಳನ್ನು ಉಳಿಸಲು ಪರಿಸರ ಕಾರ್ಯಕರ್ತರು ಭಾನುವಾರ ಮರಗಳಿಗೆ ಪೋಸ್ಟರ್ ಅಂಟಿಸಿ ಅಭಿಯಾನ ನಡೆಸಿದರು

ಚುಟುಕೆ ಸುದ್ದಿ

ಯೋಗಾಸನ ಇಂದಿನಿಂದ

ಬೆಂಗಳೂರು: ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಯೋಗ ವಿಭಾಗದಿಂದ ಸೆಪ್ಟೆಂಬರ್ 1ರಿಂದ 30ರವರೆಗೆ ಉಚಿತ ಯೋಗಾಸನ ಹಾಗೂ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿದೆ.

ಇಲ್ಲಿರುವ ರೋಗಿಗಳು ಹಾಗೂ ಸಾರ್ವಜನಿಕರು ಇದರಲ್ಲಿ ಪಾಲ್ಗೊಳ್ಳಬಹುದು. ಬೆಳಿಗ್ಗೆ 7.30ರಿಂದ 8.30ರವರೆಗೆ ಯೋಗಾಸನ, ಪ್ರಾಣಾಯಾಮ, ಧ್ಯಾನ ತರಗತಿಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 98459 86119

ಅಂಚೆ ಅದಾಲತ್ 8ಕ್ಕೆ

ಬೆಂಗಳೂರು: ಬೆಂಗಳೂರು ದಕ್ಷಿಣ ವಿಭಾಗದ ಅಂಚೆ ಅದಾಲತ್ ಸೆಪ್ಟೆಂಬರ್ 8ರಂದು ಬೆಳಿಗ್ಗೆ 11 ಗಂಟೆಗೆ ಜಯನಗರದ ನಾಲ್ಕನೇ ಟಿ ಬ್ಲಾಕ್‌ನಲ್ಲಿರುವ ಕೇಂದ್ರ ಅಂಚೆ ಕಚೇರಿಯಲ್ಲಿ ನಡೆಯಲಿದೆ.

ಬೆಂಗಳೂರು ದಕ್ಷಿಣ ವಿಭಾಗಕ್ಕೆ ಸಂಬಂಧಿಸಿದ ಅಂಚೆ ಸೇವೆಗಳಿಗೆ ಸಂಬಂಧಿಸಿದ ಕುಂದು-ಕೊರತೆಗಳ ಅಥವಾ ದೂರುಗಳ ಬಗ್ಗೆ ಮೇಲ್‌ಗಳ ವಿತರಣೆ, ಸ್ಪೀಡ್ ಪೋಸ್ಟ್, ಲೇಖನಗಳು, ಪಾರ್ಸೆಲ್‌ಗಳು, ಮನಿ ಆರ್ಡರ್, ಉಳಿತಾಯ ಖಾತೆ, ನಗದು ಪ್ರಮಾಣ ಪತ್ರಗಳು ಮತ್ತು ಕೌಂಟರ್ ಸೇವೆಗಳ ದೂರುಗಳು ಇದ್ದರೆ ಸೆಪ್ಟೆಂಬರ್ 4 ರಂದು ಸಂಜೆ 4 ಗಂಟೆಯೊಳಗಾಗಿ ಹಿರಿಯ ಅಧೀಕ್ಷಕರಿಗೆ ನೀಡಬಹುದು ಅಥವಾ dobangaloresourth.ka@indiapost.gov.in ಮೂಲಕ ದೂರುಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ನಾಯಿಗಳಿಗೆ ಆಹಾರ ನೀಡಿದ ಮಹಿಳೆಗೆ ಜೀವ ಬೆದರಿಕೆ

ಬೆಂಗಳೂರು: ನಗರದಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುತ್ತಿದ್ದ ಮಹಿಳೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚೂಡಸಂದ್ರ ನಿವಾಸಿ ನೇಹಾ ಪರ್ವೀನ್ ಅವರ ದೂರಿನ ಮೇರೆಗೆ ಸಲೀಂ, ಸುಧಾ, ಕವಿತಾ ಕೌಶಿಕ, ಅಮಿನುಲ್ ರೆಹಮಾನ್, ವಿನೋದ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಖಾಸಗಿ ಕಂಪನಿ ಉದ್ಯೋಗಿಯಾಗಿರುವ ನೇಹಾ ಅವರು ನಾಲ್ಕು ವರ್ಷಗಳಿಂದ ಅಹದ್ ಸೆರಿನಿಟಿ ಅಪಾರ್ಟ್‌ಮೆಂಟ್‌ನಲ್ಲಿ ನಾಯಿಗಳಿಗೆ ಆಹಾರ ನೀಡುತ್ತಿದ್ದಾರೆ. ಸ್ಥಳೀಯ ನಿವಾಸಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿ, ಹಲವು ಬಾರಿ ಅವರೊಂದಿಗೆ ಜಗಳವಾಡಿದ್ದಾರೆ. ಆಗಸ್ಟ್ 27ರಂದು ನಾಯಿಗಳಿಗೆ ಆಹಾರ ನೀಡಲು ತೆರಳಿದ ನೇಹಾ ಹಾಗೂ ಅವರ ತಂದೆಗೆ, ಅಪಾರ್ಟ್‌ಮೆಂಟ್ ನಿವಾಸಿಗಳಾದ ಸಲೀಂ, ಸುಧಾ, ಕವಿತಾ, ಅಮಿನುಲ್, ವಿನೋದ್ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ. ಅಲ್ಲದೇ ನಾಯಿಗಳಿಗೂ ಹೊಡೆದು ಹಿಂಸೆ ನೀಡಿದ್ದಾರೆ' ಎಂದು ಪೊಲೀಸರಿಗೆ ತಿಳಿಸಿದ್ದಾರೆ.



ನೇಹಾ ಅವರ ದೂರಿನ ಮೇರೆಗೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಪಟಾಕಿ ಸ್ಫೋಟ: ಮೂವರ ಸೆರೆ

ದೊಡ್ಡಬಳ್ಳಾಪುರ: ಮುತ್ತೂರಿನಲ್ಲಿ ಶುಕ್ರವಾರ ಸಂಜೆ ಗಣೇಶ ಮೂರ್ತಿ ವಿಸರ್ಜನೆ ವೇಳೆ ನಡೆದ ಪಟಾಕಿ ಸ್ಫೋಟದಲ್ಲಿ ಬಾಲಕ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ್ದ ಮೂವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗಣೇಶೋತ್ಸವ ಆಯೋಜಕರಾದ ಮಾರುತಿ, ಕಿಶೋರ್ ಹಾಗೂ ಮಂಜುನಾಥ್ ಬಂಧಿತರು.

ಸಾರ್ವಜನಿಕ ಗಣೇಶ ಮೂರ್ತಿ ಪ್ರತಿಷ್ಠಾಪನೆಗೂ ಮುನ್ನ ಅನುಮತಿ ಪಡೆಯುವುದು ಕಡ್ಡಾಯ. ಗಣೇಶ ಮೂರ್ತಿ ಪ್ರತಿಷ್ಠಾಪನೆ, ವಿಸರ್ಜನೆ ಸೇರಿದಂತೆ ಯಾವುದೇ ಹಂತದಲ್ಲೂ ಗಲಾಟೆ, ಅವಘಡ ನಡೆದರೆ ತಾವೇ ಜವಾಬ್ದಾರಿ ಎಂದು ಅನುಮತಿ ನೀಡುವ ವೇಳೆ ಸಂಘಟಕರಿಂದ ಮುಚ್ಚಳಿಕೆ ಪತ್ರ ಬರೆಸಿಕೊಳ್ಳಲಾಗಿತ್ತು.

ಅದರ ಆಧಾರದ ಮೇಲೆಯೇ ಸಂಘಟಕರನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅಮರೇಶ್‌ಗೌಡ ಅವರು ತಿಳಿಸಿದ್ದಾರೆ.

ಪ್ರಾಣಿ ತ್ಯಾಜ್ಯ ಘಟಕ ಸ್ಥಗಿತಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹೊಸೂರು ಬಂಡೆ ಗ್ರಾಮದಲ್ಲಿ ಬಾನಾ ಇಕೋ ವರ್ಕ್ಸ್ ಪ್ರಾಣಿ ತ್ಯಾಜ್ಯ ಘಟಕವನ್ನು ಸ್ಥಗಿತಗೊಳಿಸಿ, ಬೇರೆಡೆಗೆ ಸ್ಥಳಾಂತರಿಸುವಂತೆ ಒತ್ತಾಯಿಸಿ ಬಿದರಹಳ್ಳಿ ಹೋಬಳಿ ಬ್ಲಾಕ್ ಕಾಂಗ್ರೆಸ್ ಘಟಕದ ಕಾರ್ಯಕರ್ತರು, ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯರು, ಮಹಿಳಾ ಶ್ರೀಶಕ್ತಿ ಸಂಘದ ಸದಸ್ಯರು ಕಣ್ಣೂರು ಗ್ರಾಮ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

'ಗ್ರಾಮ ಪಂಚಾಯಿತಿ ಅನುಮತಿ ಇಲ್ಲದೆ, ಹೊಸೂರು ಬಂಡೆ ಗ್ರಾಮದ ಸರ್ವೆ ನಂಬರ್ 50ರಲ್ಲಿ ಪ್ರಾಣಿ ತ್ಯಾಜ್ಯ ಘಟಕ ಕಾರ್ಯಾರಂಭ ಮಾಡಿದೆ. ಈಗಾಗಲೇ ಪಕ್ಕದಲ್ಲಿ ಇರುವಂತಹ ಕಣ್ಣೂರು-ಮಿಟ್ಟಗಾನಹಳ್ಳಿ ಬಿಬಿಎಂಪಿಯ ಘನತ್ಯಾಜ್ಯ ಘಟಕದಿಂದ ಸಂಕಷ್ಟ ಎದುರಿಸಿದ್ದೇವೆ. ಇದನ್ನು ಸ್ಥಳಾಂತರಿಸದೇ ಇದ್ದರೆ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಬಿದರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಣ್ಣೂರು ನಾರಾಯಣಸ್ವಾಮಿ ಎಚ್ಚರಿಸಿದರು.

ಭೂ ನ್ಯಾಯ ಮಂಡಳಿ ಸದಸ್ಯ ಬಿ.ವಿ.ವರುಣ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಪ್ರಶಾಂತ್, ಗ್ರಾ.ಪಂ. ಸದಸ್ಯ ಡಾ.ಮಧು, ನಂಜೇಗೌಡ, ಬಿಳಿಶಿವಾಲೆ ಆನಂದ್ ಇದ್ದರು.

ಬಿಟಿಎಂ ಲೇಔಟ್‌ನಲ್ಲಿ ಕೃತ್ಯ, ನಗದು ಕಸಿದುಕೊಂಡು ಪರಾರಿ

ಪಿ.ಜಿ.ಗೆ ನುಗ್ಗಿ ಯುವತಿಗೆ ಲೈಂಗಿಕ ಕಿರುಕುಳ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಳ್ಳತನ ಮಾಡಲು ಮಹಿಳಾ ಪೇಯಿಂಗ್ ಗೆಸ್ಟ್‌ಗೆ ಮಧ್ಯರಾತ್ರಿ ನುಗ್ಗಿದ್ದ ವ್ಯಕ್ತಿಯೊಬ್ಬ ಯುವತಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿ, ನಗದು ಕಸಿದುಕೊಂಡು ಪರಾರಿಯಾಗಿರುವ ಘಟನೆ ಸುದ್ದಗುಂಟೆ ಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ನಗರದ ಬಿಟಿಎಂ ಲೇಔಟ್ ಗಂಗೋತ್ರಿ ಸರ್ಕಲ್ ಹತ್ತಿರದ ಪಿ.ಜಿ.ಯಲ್ಲಿ ಆಗಸ್ಟ್ 29ರ ನಸುಕಿನ 3.30ರ ಸುಮಾರಿಗೆ ಈ ಘಟನೆ ನಡೆದಿದೆ. ಪಿ.ಜಿ.ಯ ಎಲ್ಲ ಕೊಠಡಿಗಳನ್ನು ಹೊರಗಿನಿಂದ ಲಾಕ್ ಮಾಡಿದ ಆರೋಪಿ, ಯುವತಿ ಮಲಗಿದ್ದ ಕೊಠಡಿಗೆ ನುಗ್ಗಿ ಕೈ, ಕಾಲುಗಳನ್ನು ಮುಟ್ಟಿ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾನೆ.

ಎಚ್ಚೆತ್ತ ಯುವತಿ ಜೋರಾಗಿ ಕೂಗಿಕೊಂಡಿದ್ದಾಳೆ. ಆದರೆ, ಪಕ್ಕದ ಕೊಠಡಿಗಳನ್ನು ಹೊರಗಿನಿಂದ ಲಾಕ್ ಮಾಡಿದ್ದರ ಪರಿಣಾಮ ಸಹಾಯಕ್ಕೆ ಬರಲು ಯಾರಿಗೂ ಸಾಧ್ಯವಾಗಿಲ್ಲ. ಪ್ರತಿರೋಧ ವ್ಯಕ್ತಪಡಿಸಿದ್ದ ಯುವತಿಗೆ ಚಾಕು ತೋರಿಸಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ಅಷ್ಟರಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದು, ಆತನನ್ನು ಹಿಡಿಯಲು ಯತ್ನಿಸಿದ್ದಾಳೆ. ಆದರೆ, ಆರೋಪಿ ಆಕೆ ಮೇಲೆಯೇ ಹಲ್ಲೆ ನಡೆಸಿ, ತಳ್ಳಿ ಪರಾರಿಯಾಗಿದ್ದಾನೆ.

ಈ ದೃಶ್ಯ ಪಿ.ಜಿ.ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೊಠಡಿಯಲ್ಲಿದ್ದ ₹2,500 ಹಣದೊಂದಿಗೆ ಆರೋಪಿ ಪರಾರಿಯಾಗಿದ್ದಾನೆ. ಯುವತಿ ಹೇಳಿಕೆ ಆಧರಿಸಿ ಸುದ್ದಗುಂಟೆ ಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಪತ್ತೆ ಕಾರ್ಯ ನಡೆದಿದೆ.

ಅನಾರೋಗ್ಯ: ಗೃಹಿಣಿ ಆತ್ಮಹತ್ಯೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಗೃಹಿಣಿಯೊಬ್ಬರು ತಾವರೆಕೆರೆಯಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಭುವನೇಶ್ವರಿ (26) ಮೃತ ಮಹಿಳೆ. ಗೋವರ್ಧನ್ ಎಂಬುವವರನ್ನು ಐದು ವರ್ಷದ ಹಿಂದೆ ಮದುವೆಯಾಗಿದ್ದರು. ಭುವನೇಶ್ವರಿ ದಂಪತಿ ತಾವರೆಕೆರೆಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅನಾರೋಗ್ಯ ದಿಂದ ಬಳಲುತ್ತಿದ್ದ ಕಾರಣ ಮನ ನೊಂದಿದ್ದರು.

ಪತಿಯು ಹೊರಗೆ ಹೋಗಿದ್ದಾಗ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಗೋವರ್ಧನ್, ಗಾರೆ ಕೆಲಸ ಮಾಡುತ್ತಾರೆ. ಸುದ್ದಗುಂಟೆ ಪಾಳ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಿಯಲ್ ಎಸ್ಟೇಟ್ ಏಜೆಂಟ್ ಸಾವು

ಬೆಂಗಳೂರು: ತುಮಕೂರು ರಸ್ತೆಯ ಎಂಇಐ ಜಂಕ್ಷನ್‌ನಲ್ಲಿ ಶನಿವಾರ ರಾತ್ರಿ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಏಜೆಂಟ್ ಮೃತಪಟ್ಟಿದ್ದಾರೆ.

ಟಿ.ದಾಸರಹಳ್ಳಿ ನಿವಾಸಿಯಾದ ಸುರೇಶ್ (40) ಮೃತ ವ್ಯಕ್ತಿ. ವೈಯಕ್ತಿಕ ಕೆಲಸದ ನಿಮಿತ್ತ ಮಲ್ಲೇಶ್ವರಕ್ಕೆ ಬಂದಿದ್ದ ಅವರು ಬೈಕ್‌ನಲ್ಲಿ ರಾತ್ರಿ ಮನೆಗೆ ವಾಪಸ್ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟ್ರಾವೆಲ್ಸ್ ಬಸ್, ಸುರೇಶ್ ಅವರ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಆಗ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಅವರ ಮೇಲೆ ಬಸ್ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಯಶವಂತಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

1105–ರೆಡ್ಡಿ ಎಂದೇ ನಮೂದಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಡ್ಡಿ ಸಮುದಾಯದವರು ಜಾತಿ ಜನಗಣತಿಯ ಸಮೀಕ್ಷೆಯಲ್ಲಿ '1105 ರೆಡ್ಡಿ' ಎಂದೇ ನಮೂದಿಸಬೇಕು ಎಂದು ಕರ್ನಾಟಕ ರೆಡ್ಡಿ ಜನ ಸಂಘ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಸ್. ಜಯರಾಮ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಎನ್. ಶೇಖರ ರೆಡ್ಡಿ ಅವರು, 'ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ಪ್ರಕಟಿಸಿರುವ ಪಟ್ಟಿಯಲ್ಲಿ ರೆಡ್ಡಿ ಸಮುದಾಯಕ್ಕೆ ಅನೇಕ ಸಮುದಾಯಗಳನ್ನು ಸೇರಿಸಿರುವುದು ಸರಿಯಲ್ಲ' ಎಂದು ಹೇಳಿದರು. 'ಆಯೋಗ ಪ್ರಕಟಿಸಿರುವ ಪಟ್ಟಿಯಲ್ಲಿ 1105–ರೆಡ್ಡಿ, 1106–ರೆಡ್ಡಿ ಕ್ರಿಶ್ಚಿಯನ್, 1107–ರೆಡ್ಡಿ ಲಿಂಗಾಯತ, 1079–ರಡ್ಡಿ ಲಿಂಗಾಯತ, 1109–ರೆಡ್ಡಿ ಬಲಜ, 1110–ರೆಡ್ಡಿ ದಾಸರ, 1111–ರೆಡ್ಡಿ ಗೌಂಡರ್ ಹಾಗೂ 1078–ರಡ್ಡಿ ಅಥವಾ ಶೈವರಡ್ಡಿ ಎಂಬ ಹಲವು ಹೆಸರುಗಳನ್ನು ಸೇರಿಸಲಾಗಿದೆ' ಎಂದು ತಿಳಿಸಿದರು.

'ನಮ್ಮ ಸಮುದಾಯದಲ್ಲಿ ರೆಡ್ಡಿ ಎಂಬ ಶಬ್ದವನ್ನು ಹೊರತುಪಡಿಸಿ ಬೇರೆ ಯಾವುದೇ ಉಪ ಪಂಗಡಗಳು ಇರುವುದಿಲ್ಲ. ನಮ್ಮ ಸಮುದಾಯವನ್ನು ಈ ರೀತಿ ವಿಂಗಡಿಸುವುದರಿಂದ ನಮ್ಮ ಜನಸಂಖ್ಯೆ ಕಡಿಮೆ ಆಗುವ ಸಾಧ್ಯತೆ ಇದ್ದು, ನಮಗೆ ಅನ್ಯಾಯವಾಗಲಿದೆ. 1105–ರೆಡ್ಡಿ ಸಮುದಾಯದಲ್ಲಿ ಬೇರೆ ಯಾವುದೇ ಪಂಗಡಗಳನ್ನು ಸೇರಿಸಬಾರದು' ಎಂದು ಆಗ್ರಹಿಸಿದರು.

ನೃತ್ಯ ಮಾಡುತ್ತಲೇ ಕುಸಿದು ಬಿದ್ದು ಸಾವು

ಶಿಡ್ಲಘಟ್ಟ: ತಾಲ್ಲೂಕಿನ ಬೋದಗೂರು ಗ್ರಾಮದಲ್ಲಿ ಶನಿವಾರ ರಾತ್ರಿ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ನೃತ್ಯ ಮಾಡುತ್ತಿದ್ದ ಲಕ್ಷ್ಮೀಪತಿ (40) ಎಂಬುವರು ಕುಸಿದುಬಿದ್ದು ಮೃತಪಟ್ಟಿದ್ದಾರೆ.



ಶ್ರೀಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ 16ನೇ ದಿನದ ಪುಣ್ಯಾರಾಧನೆ ಮತ್ತು ಧಾರ್ಮಿಕ ಸಭೆಯಲ್ಲಿ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಮಾತನಾಡಿದರು

ರಾಜ್ಯಕ್ಕೆ ಅನ್ಯಾಯವಾದರೆ ಪ್ರತಿಭಟಿಸುವೆ

ಧಾರ್ಮಿಕ ಸಭೆಯಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ದೇಹಕ್ಕಷ್ಟೇ ದಣಿವಾಗಿದೆ. ಮನಸ್ಸು, ತಲೆ ಈಗಲೂ ಸದೃಢವಾಗಿದೆ. ರಾಜ್ಯಕ್ಕೆ ಅನ್ಯಾಯವಾದರೆ ಮೇಜು ಕುಟ್ಟಿ ಪ್ರತಿಭಟಿಸುವೆ. ನನಗೆ ಯಾರ ಭಯವೂ ಇಲ್ಲ, ದಾಕ್ಷಿಣ್ಯವೂ ಇಲ್ಲ' ಎಂದು ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ ಹೇಳಿದರು.

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಶ್ರೀಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ 16ನೇ ದಿನದ ಪುಣ್ಯಾರಾಧನೆ ಮತ್ತು ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

'ಒಕ್ಕಲಿಗ ಸಮಾಜಕ್ಕೆ ಕೈ ಚಾಚುವುದು ಗೊತ್ತಿಲ್ಲ. ಒಕ್ಕಲಿಗರ ಮತ್ತು ಬಡ, ದಲಿತ ಸಮಾಜದ ಏಳಿಗೆಗೆ ಆದಿ ಚುಂಚನಗಿರಿ ಮಠದ ಪೀಠಾಧಿಪತಿ ಬಾಲ ಗಂಗಾಧರನಾಥ ಸ್ವಾಮೀಜಿ ಶ್ರಮಿಸಿದ್ದರು. ನನ್ನ ಕಾಲಾವಧಿ ಮುಗಿಯುತ್ತಾ ಬಂದಿದೆ. ಆದಿ ಚುಂಚನಗಿರಿ ಮಠ ಹಾಗೂ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠಗಳು ಜಂಟಿಯಾಗಿ ದೀನ ದಲಿತರ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಬೇಕು' ಎಂದು ಮನವಿ ಮಾಡಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಸುಮಾರು ನಾಲ್ಕು ದಶಕಗಳ ಕಾಲ ಸಮುದಾಯದ ಮಠವೊಂದನ್ನು ಯಾವುದೇ ಗೊಂದಲಗಳಿಲ್ಲದೆ, ಆಪಾದನೆಗಳಿಲ್ಲದೆ ಮುನ್ನಡೆಸಿದ ಕೀರ್ತಿ ಚಂದ್ರಶೇಖರ ಸ್ವಾಮೀಜಿಗೆ ಸಲ್ಲುತ್ತದೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಪೀಠಾಧಿಪತಿ ನಿಶ್ಚಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ. ಗೋಪಾಲ ಗೌಡ, ಹೈಕೋರ್ಟ್ ನ್ಯಾಯಮೂರ್ತಿ ಚಂದ್ರಶೇಖರಯ್ಯ, ಶಾಸಕ ಎಂ.ಕೃಷ್ಣಪ್ಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.

20 ನವಿಲು ಸಾವು ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಮಧುಗಿರಿ ತಾಲ್ಲೂಕಿನ ಹನುಮಂತಪುರದಲ್ಲಿ 20ಕ್ಕೂ ಹೆಚ್ಚು ನವಿಲುಗಳು ಅನುಮಾನಾಸ್ಪದವಾಗಿ ಮೃತಪಟ್ಟ ಬಗ್ಗೆ ವರದಿ ಸಲ್ಲಿಕೆಯಾಗಿದೆ. ವರದಿ ಅಧ್ಯಯನ ಮಾಡಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.



ಈಶ್ವರ ಖಂಡ್ರೆ

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ವಿರೋಧ ಪಕ್ಷದವರಿಗೆ ಬರೀ ನಾಟಕ ಮಾಡುವುದು, ಸುಳ್ಳು ಹೇಳುವುದೇ ಕೆಲಸವಾಗಿದೆ. ಯಾವುದೇ ವಿಚಾರ ಇಲ್ಲದೆ ಜನರ ದಾರಿ ತಪ್ಪಿಸುತ್ತಿದ್ದಾರೆ ಎಂದರು.

ಧರ್ಮಸ್ಥಳದಲ್ಲಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿರುವ ಸಮಾರಂಭದ ಕುರಿತು ಪ್ರತಿಕ್ರಿಯಿಸಿ, ಜಾತಿ, ಧರ್ಮಗಳ ಮಧ್ಯೆ ಒಡೆದಾಳುವ ನೀತಿ ಅನುಸರಿಸುತ್ತಿ ದ್ದಾರೆ. ಭಾವನಾತ್ಮಕವಾಗಿ ಜನರನ್ನು ಕೆರಳಿಸಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

'ಪಾದಚಾರಿ ಮಾರ್ಗ ಸರಿಪಡಿಸಿ'



ಜೆ.ಪಿ. ನಗರದ ಆರನೇ ಹಂತದ 29ನೇ ಮುಖ್ಯರಸ್ತೆಯ 15ನೇ ಕ್ರಾಸ್‌ನ ತಿರುವಿನಲ್ಲಿರುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕಿತ್ತು ಹೋಗಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ರಾತ್ರಿ ಸಮಯದಲ್ಲಿ ಈ ಮಾರ್ಗದಲ್ಲಿ ಬರುವ ಸಾರ್ವಜನಿಕರು ಮೋರಿಯಲ್ಲಿ ಬಿದ್ದು, ಕಾಲು ಮುರಿದುಕೊಳ್ಳುವ ಅಪಾಯವಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ಸಾಗರ್, ಜೆ.ಪಿ.ನಗರ


'ವಾಲಿದ ಸಿ.ಸಿ.ಟಿ.ವಿ. ಕ್ಯಾಮೆರಾ ಕಂಬ'



ನಾಗಸಂದ್ರದ ವಿನಾಯಕ-ನಗರದ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ಕಂಬ ತುಕ್ಕು ಹಿಡಿದು ವಾಲಿಕೊಂಡಿದೆ. ಸದ್ಯ ಟೊಂಗೆಯೊಂದರ ಆಶ್ರಯದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾದ ಕಂಬ ನಿಂತಿದೆ. ಈಗ ಸಿ.ಸಿ.ಟಿ.ವಿ. ಕ್ಯಾಮೆರಾ ಕೆಲಸ ಮಾಡುತ್ತಿಲ್ಲ. ಇದರಿಂದ ಈ ಭಾಗದಲ್ಲಿ ಕಳ್ಳತನ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ಜೊತೆಗೆ ಅನೈತಿಕ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕಂಬ ಸರಿಪಡಿಸಿ, ಸಿ.ಸಿ.ಟಿ.ವಿ ಕ್ಯಾಮೆರಾ ದುರಸ್ತಿಗೊಳಿಸಬೇಕು.

ಆರ್. ಗೋವಿಂದರಾವ್, ವಿನಾಯಕನಗರ

'ಬೊಮ್ಮನಹಳ್ಳಿ ಮೆಟ್ರೊ ನಿಲ್ದಾಣದ ಕೆಳಗಡೆ ಕಸದ ರಾಶಿ'



ಬೊಮ್ಮನಹಳ್ಳಿ ಮೆಟ್ರೊ ನಿಲ್ದಾಣದ ಕೆಳಗಡೆಯ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದ್ದು, ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಗಳಲ್ಲಿ ಉತ್ಪತ್ತಿ ಆಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು, ಮೆಟ್ರೊ ನಿಲ್ದಾಣದ ಕೆಳಗಡೆ ರಸ್ತೆಯಲ್ಲಿ ಎಸೆದು ಹೋಗುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿ ಆ್ಯಪ್‌ನಲ್ಲಿ ಹಾಗೂ ಮಡಿವಾಳ ಸಂಚಾರ ಪೊಲೀಸ್ ಠಾಣೆಗೂ ದೂರು ನೀಡಲಾಗಿದೆ. ಆದರೆ ಯಾರೂ ಸ್ಪಂದಿಸುತ್ತಿಲ್ಲ. ಕೂಡಲೇ ಇಲ್ಲಿ ಹಾಕಿರುವ ತ್ಯಾಜ್ಯದ ರಾಶಿಯನ್ನು ತೆರವುಗೊಳಿಸಿ, ನಗರದ ಸೌಂದರ್ಯವನ್ನು ಕಾಪಾಡಬೇಕು.

ಜೋಸೆಫ್ ಮಾರ್ಟಿನ್

'ಗುಂಡಿಮಯ ರಸ್ತೆ ದುರಸ್ತಿಗೊಳಿಸಿ'



ಹೆಬ್ಬಾಳದ ಚೋಳನಗರದಲ್ಲಿರುವ ಜಿ.ಆರ್. ಬಡಾವಣೆಯ ಎರಡನೇ ಕ್ರಾಸ್‌ನ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಇಡೀ ರಸ್ತೆಯೇ ಹದಗೆಟ್ಟು ಹೋಗಿದೆ. ಆರ್.ಟಿ. ನಗರದಿಂದ ನಾಗವಾರಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಗುಂಡಿ ಬಿದ್ದಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಮಳೆಗಾಲದಲ್ಲಿ ರಸ್ತೆ ಗುಂಡಿಗಳಲ್ಲಿ ಮಳೆ ನೀರು ತುಂಬಿಕೊಂಡು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಜಿ.ಎಸ್. ಮಂಜುನಾಥ್, ಚೋಳನಗರ

ಘಮ ಘಮಿಸಿದ 'ಕರುನಾಡ ಸವಿಯೂಟ'



'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ನಡೆದ ಅಡುಗೆ ಸ್ಪರ್ಧೆ

- ಮನೆಯಲ್ಲೇ ತಯಾರಿಸಿ ತಂದ ವಿವಿಧ ಖಾದ್ಯಗಳು
- ರುಚಿ ಸವಿದು ಸಂಭ್ರಮಿಸಿದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಿಧ್ಯಮಯ ತಿಂಡಿಗಳ ಘಮ, ರುಚಿಯು ಬಾಯಲ್ಲಿ ನೀರೂರುವಂತೆ ಮಾಡಿತು. ಚಿಟಿಕೆಯಷ್ಟು ಬಾಯಿಗೆ ಹಾಕಿಕೊಂಡು ರುಚಿ ಸವಿದು ನೋಡುಗರು ಸಂಭ್ರಮಿಸಿದರು.

'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ಭಾನುವಾರ ನಡೆದ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆಯ ಝಲಕ್ ಇದು.

ಮನೆಯಲ್ಲೇ ಸಿದ್ಧಪಡಿಸಿಕೊಂಡು ತಂದಿದ್ದ ಖಾದ್ಯಗಳನ್ನು ಸ್ಪರ್ಧಿಗಳು ವ್ಯವಸ್ಥಿತವಾಗಿ ಜೋಡಿಸಿಟ್ಟಿದ್ದರು. ಖಾದ್ಯವನ್ನು ಹೂವು, ಗೊಂಬೆ ಹಾಗೂ ಕಲಾಕೃತಿಗಳನ್ನು ಇಟ್ಟು ಆಕರ್ಷಕವಾಗಿ ಅಲಂಕರಿಸಿದ್ದರು. ಪ್ರತಿಯೊಬ್ಬರ ಬಳಿಗೂ ಹೋದ ತೀರ್ಪುಗಾರರಾದ 'ಒಗ್ಗರಣೆ ಡಬ್ಬಿ' ಮುರಳಿ ಮತ್ತು ನಿರೂಪಕಿ ಸುಚಿತ್ರಾ ಪ್ರತಿ ತಿನಿಸುಗಳ ರುಚಿ ಸವಿದು ಮೌಲ್ಯಮಾಪನ ಮಾಡಿದರು.

ಉದ್ದಿನ ಉಂಡೆ, ಅಂಟಿನ ಉಂಡೆ, ಎಳ್ಳುಪುಡಿ, ಕರಕಳವಿ (ಸಿಹಿ), ಜೋಳದ ರೊಟ್ಟಿ, ಪೂರಿ ಸಾಗು, ಎಲ್ಲ ಹಿಟ್ಟುಗಳ ಮಿಶ್ರಣದ ಮಸಾಲ ರೊಟ್ಟಿ, ಬಿಳಿ ಹೋಳಿಗೆ, ಬದನೆಕಾಯಿ ಪಲ್ಯ, ಗೋಧಿ ಪುಟ್ಟು, ಅವಲಕ್ಕಿ, ಅಕ್ಕಿವಡೆ, ಪುಂಡಿಪಲ್ಯ, ಅವಲಕ್ಕಿ ಪುಲಾವ್, ಮಲ್ನಾಡ್ ಗೀರೈಸ್, ಸಿಹಿ ಹೋಳಿಗೆ, ಖಾರದ ಹೋಳಿಗೆ, ಮಾದ್ಲಿ, ಬ್ರೌನ್ ಚನ್ನಾ, ಹಾಲುಬಾಯಿ (ರಾಗಿ ಹಲ್ವಾ), ರಾಗಿ ಡೆಸಾರ್ಟ್, ಹಲಸಂದೆ ವಡಾ, ಮಂಡಕ್ಕಿ ಒಗ್ಗರಣೆ, ಮೋದಕ, ವೀಳ್ಯದೆಲೆ ರಸಂ, ಸ್ವೀಟ್ ಸಮೋಸ, ಸ್ವೀಟ್ ಪಪ್ಪಡಿ ಚಾಟ್, ಕ್ಯಾರೆಟ್ ಹಲ್ವಾ, ಹಾಗಲಕಾಯಿ ಚಿತ್ರಾನ್ನ, ಸಬ್ಬಕ್ಕಿ ಕೀರ್, ಅಕ್ಕಿ ಪಾಯಸ, ತರಕಾರಿ ಪಾಯಸ, ಮೆಂತ್ಯೆ ಕಡುಬು, ಉಂಡ್ಲುಗಾಯಿ ಕಡುಬು, ಕೊಟ್ಟೆ ಕಡುಬು, ಚೊಲ್ಲುಕಡುಬು, ಸಿಹಿಗೆಣಸು ಒತ್ತು ಶಾವಿಗೆ, ಅಕ್ಕಿ ಶಾವಿಗೆ, ರಾಗಿ ಶಾವಿಗೆ, ಶೇಂಗಾ ಚಟ್ನಿ, ಈರುಳ್ಳಿ ಚಟ್ನಿ, ಟೊಮೆಟೊ ಕಾಯಿ ಚಟ್ನಿ, ಮೆಣಸಿನ ಕಾಯಿ ಚಟ್ನಿ, ಹುಣಸೆಕಾಯಿ ಚಟ್ನಿ, ತೆಂಗಿನಕಾಯಿ ಚಟ್ನಿ, ಹುಚ್ಚೆಳ್ಳು ಪುಡಿ, ಕುಚಲಕ್ಕಿ ಕೋಡುಬಳೆ ಹೀಗೆ ನಾನಾ ತರಹದ ತಿಂಡಿಗಳು ಬಾಯಲ್ಲಿ ನೀರೂರಿಸಿದವು.



ಪ್ರಜಾವಾಣಿ, 'ಡೆಕ್ಕನ್ ಹೆರಾಲ್ಡ್ ಮತ್ತು ಫ್ರೀಡಂ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಕರುನಾಡ ಸವಿಯೂಟ' ಸ್ಪರ್ಧೆಯಲ್ಲಿ ಜನರು ಖಾದ್ಯಗಳ ರುಚಿ ಸವಿದರು ಪ್ರಜಾವಾಣಿ ಚಿತ್ರ





78 ವರ್ಷದ ಅಜ್ಜಿ ಬಿ.ಆರ್. ಗೌರಮ್ಮ ಖಾರದ ಕಡುಬು, 19 ವರ್ಷದ ಶ್ರೇಯಾ ರವೆ ಕೋಡುಬಳೆ ತಂದಿದ್ದರು. ಸ್ಪರ್ಧೆಯಲ್ಲಿದ್ದ ಹಳೆ ಬೇರು ಹೊಸ ಚಿಗುರುಗಳಿಗೆ ಇವರಿಬ್ಬರು ಸಾಕ್ಷಿಗಳಂತಿದ್ದರು .

ಚಿಕನ್ ಉಪ್ಪಿನಕಾಯಿ ಕುತೂಹಲಕ್ಕೆ ಕಾರಣವಾಯಿತು. ತೀರ್ಪುಗಾರರು ಪರೀಕ್ಷಿಸಿ ಅತ್ತ ಹೋದ ಕೂಡಲೇ ನೀರುದೋಸೆ–ಚಿಕನ್ ಸುಕ್ಕ ಖಾಲಿಯಾಯಿತು. ಚಿಕನ್ ಗ್ರೇವಿ, ದೊನ್ನೆ ಬಿರಿಯಾನಿ, ಚಿಕನ್ ಕೈಮಾ, ಚಿಕನ್ ಪಕೋಡ, ಗಂಗಮ್ಮ ಬಿರಿಯಾನಿ, ಕೋಳಿ ರವಾ ಬಾತ್, ಶಾದಿಕಾ ಬಿರಿಯಾನಿ ರುಚಿ ನೋಡುವವರ ಸಂಖ್ಯೆ ಹೆಚ್ಚಾಗಿತ್ತು.

ಒಂದೊಂದೇ ಆಹಾರದ ಸಾಂಪ್ರದಾಯಿಕ ಹಿನ್ನೆಲೆ, ಆರೋಗ್ಯಕ್ಕೆ ಹೇಗೆ ಒಳ್ಳೆಯದು? ಅದನ್ನು ಹೇಗೆ ಮಾಡುವುದು ಎಂಬ ವಿವರಗಳನ್ನು 'ಒಗ್ಗರಣೆ ಡಬ್ಬಿ' ಮುರಳಿ ನೀಡುತ್ತಿರುವಾಗ ಅದಕ್ಕೆ ಸಂಬಂಧಪಟ್ಟ ಸ್ಪರ್ಧಿಗಳ ಮುಖದಲ್ಲಿ ಸಂತೋಷದ ನಗು ಅರಳಿತು.

'ನನ್ನ ಮನೆಯಲ್ಲಿ ಸೇವಿಸಿದ ಆಹಾರವನ್ನು ಹೊರತುಪಡಿಸಿ ಇಲ್ಲಿಯವರೆಗೆ 18 ಸಾವಿರಕ್ಕೂ ಅಧಿಕ ವೈವಿಧ್ಯ ತಿನಿಸುಗಳನ್ನು ಸೇವಿಸಿದ್ದೇನೆ. ಹಾಗಾಗಿ ಯಾವುದೇ ಆಹಾರವನ್ನು ಒಂದು ಚಮಚದಷ್ಟು ಬಾಯಿಗೆ ಹಾಕಿಕೊಂಡರೆ ಇದರಲ್ಲೇನಿದೆ ಎಂಬುದು ಗೊತ್ತಾಗಿ ಬಿಡುತ್ತದೆ. ಇಲ್ಲಿ ಎಲ್ಲರೂ ಸಾಂಪ್ರದಾಯಿಕ ಪದ್ಧತಿಯನ್ನು ಇಟ್ಟುಕೊಂಡೇ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ' ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

'ಎಲ್ಲರೂ ರುಚಿಕಟ್ಟಾದ ಅಡುಗೆಗಳನ್ನು ತಯಾರಿಸಿ ತಂದಿದ್ದಾರೆ. ಒಂದಕ್ಕಿಂತ ಒಂದು ಮಿಗಿಲು ಎಂಬಂತೆ ಸವಿಯಾಗಿವೆ' ಎಂದು ನಿರೂಪಕಿ ಸುಚಿತ್ರಾ ಅವರು ಹೊಗಳಿದರು.ಸ್ಪರ್ಧೆಯಲ್ಲಿ ಇಬ್ಬರಷ್ಟೇ ಪುರುಷರು. ಉಳಿದವರೆಲ್ಲ ಮಹಿಳೆಯರು. ಎಲ್ಲ ಸ್ಪರ್ಧಿಗಳಿಗೆ ಪ್ರಮಾಣಪತ್ರ ವಿತರಿಸ ಲಾಯಿತು. 'ಒಗ್ಗರಣೆ ಡಬ್ಬಿ' ಮುರಳಿ, ನಿರೂಪಕಿ ಸುಚಿತ್ರಾ ಅಡುಗೆಯ ಪ್ರಾತ್ಯಕ್ಷಿಕೆ ನೀಡಿದರು 'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್' ಬ್ರ್ಯಾಂಡ್ ಮ್ಯಾನೇಜರ್ ಹರ್ಷ ರತ್ತೋಗಿ ಉಪಸ್ಥಿತರಿದ್ದರು.

'ರಾಗಿ ಡೆಸಾರ್ಟ್' ಪ್ರಥಮ

'ಕೋಳಿ ರವಾ ಬಾತ್' ದ್ವಿತೀಯ, 'ಕೊಟ್ಟೆಕಡುಬು'ಗೆ ತೃತೀಯ ಬಹುಮಾನ

ಚಿಕನ್ ಉಪ್ಪಿನಕಾಯಿ

ಬೆಂಗಳೂರು: 'ಕರುನಾಡ ಸವಿಯೂಟ' 4ನೇ ಆವೃತ್ತಿಯ ಅಡುಗೆ ಸ್ಪರ್ಧೆಯಲ್ಲಿ ರಾಮಮೂರ್ತಿನಗರದ ಎಲಿಜಬೆತ್ ಅವರು ಪ್ರಥಮ ಸ್ಥಾನದೊಂದಿಗೆ ₹10 ಸಾವಿರ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು.

ಎಲಿಜಬೆತ್ ಅವರು ತಯಾರಿಸಿ ತಂದಿದ್ದ 'ರಾಗಿ ಡೆಸಾರ್ಟ್' ಎಂಬ ಹೊಸ ಪ್ರಯೋಗದ ತಿನಿಸು ಅವರನ್ನು ಮೊದಲ ಸ್ಥಾನಕ್ಕೆ ತಂದು ಕೂರಿಸಿತು. 'ನನಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಿದ್ದಕ್ಕೆ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್'ಗೆ ಋಣಿಯಾಗಿದ್ದೇನೆ. ಮತ್ತೆ ಸ್ಪರ್ಧೆ ಮಾಡಿದರೆ ಸಸ್ಯಾಹಾರ ಮತ್ತು ಮಾಂಸಾಹಾರದಲ್ಲಿ ವಿಭಿನ್ನ ಆಹಾರ ತಯಾರಿಸಿ ತರುತ್ತೇನೆ' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಾಶಿವನಗರದ ಉಮಾ ಜಗನ್ನಾಥ್ ಅವರು ತಯಾರಿಸಿದ್ದ ಕೋಳಿ ರವಾ ಬಾತ್ ಮಾಂಸಾಹಾರದಲ್ಲಿಯೇ ಹೊಸ ಪ್ರಯೋಗವಾಗಿ ಕಣ್ಮನ–ನಾಲಿಗೆ ಸೆಳೆಯಿತು. ಇದಕ್ಕೆ ದ್ವಿತೀಯ ಸ್ಥಾನ ಪಡೆದ ಅವರು ₹5,000 ನಗದು ಅನ್ನು ತಮ್ಮದಾಗಿಸಿಕೊಂಡರು. 'ಚಿಕನ್ ಪುಲಾವ್ ಮಾಡುತ್ತಾರೆ. ರವಾ ಬಾತ್ ಮಾಡುತ್ತಾರೆ. ನಾನು ಆ ರೆಸಿಪಿಗಳನ್ನು ಇಟ್ಟುಕೊಂಡು ಚಿಕನ್ ರವಾ ಬಾತ್ ಮಾಡಿದೆ' ಎಂದರು.

ಕರಾವಳಿ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿರುವ ಕೊಟ್ಟೆ ಕಡುಬನ್ನು ತಯಾರಿಸಿದ್ದ ವಿಜಯನಗರದ ಸವಿತಾ ಜಿ. ಮಯ್ಯ ತೃತೀಯ ಸ್ಥಾನದೊಂದಿಗೆ ₹3,000 ನಗದು ಪಡೆದರು. 'ನನಗೆ ಪ್ರಶಸ್ತಿ ಬಂದಿರುವುದು ಅಚ್ಚರಿ ಮತ್ತು ಸಂತೋಷ ಒಟ್ಟಿಗೆ ಉಂಟು ಮಾಡಿದೆ' ಎಂದು ಖುಷಿ ಹಂಚಿಕೊಂಡರು.

ಶಾದಿ ಕ ಬಿರಿಯಾನಿ, ಅಕ್ಕಿ ಪಾಯಸ, ಚಪಾತಿ –ಚಿಕನ್ ಗ್ರೇವಿ ತಯಾರಿಸಿದ್ದ ಲಿಂಗರಾಜಪುರದ ಮೀನಾ ಮತ್ತು ಹಲ್ವಾ ಸಮೋಸ ತಯಾರಿಸಿದ್ದ ಲತಾ ಅವರು ಮೆಚ್ಚುಗೆ ಪಡೆದ ಸ್ಪರ್ಧಿಗಳಾಗಿ ಸಮಾಧಾನಕರ ಬಹುಮಾನ ಪಡೆದರು. ಕಾರ್ಯಕ್ರಮದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡವರಲ್ಲಿ ಒಬ್ಬರನ್ನು ಲಕ್ಕಿಡಿಪ್ ಮೂಲಕ ಆಯ್ಕೆ ಮಾಡಿ ಬಹುಮಾನ ನೀಡಲಾಯಿತು. ಕರುನಾಡ ಸವಿಯೂಟದ ಬಗ್ಗೆ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡ ಅತ್ಯುತ್ತಮ 'ಪೋಸ್ಟ್'ಗೂ ಬಹುಮಾನ ವಿತರಿಸಲಾಯಿತು.

'ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಬಹಳ ಖುಷಿಯಾಗಿದೆ. ಇಲ್ಲಿಗೆ ಬರುವವರೆಗೆ ಸ್ಪರ್ಧೆ ಹೇಗಿರುತ್ತದೆ ಎಂಬ ಕಲ್ಪನೆ ನನಗಿರಲಿಲ್ಲ. ಇಲ್ಲಿ ಬಂದು ತಿಳಿದುಕೊಂಡೆ. ಮುಂದಿನ ಬಾರಿ ಮೀನಿನ ಖಾದ್ಯಗಳನ್ನು ತರುತ್ತೇನೆ' ಎಂದು ವಿಜಯನಗರದ ನಿವಾಸಿ, ಕೆನರಾ ಬ್ಯಾಂಕ್ ಉದ್ಯೋಗಿ ಭಾಗ್ಯಶ್ರೀ ತಿಳಿಸಿದರು.

'ಮೊದಲ ಬಾರಿ ಭಾಗವಹಿಸಿದ್ದೇನೆ. ಇಲ್ಲಿ ಅನೇಕರು ಪರಿಚಯವಾದರು. ಮುಂದೆ ಬೆಂಗಳೂರಿನಲ್ಲಿ ಎಲ್ಲೇ ಅಡುಗೆ ಸ್ಪರ್ಧೆ ಇದ್ದರೂ ಭಾಗವಹಿಸುತ್ತೇನೆ' ಎಂದು ತೇಜಸ್ವಿನಿ ತಿಳಿಸಿದರೆ, 'ನನ್ನ ಅಮ್ಮ ಗಂಗಮ್ಮ ಮಟನ್ ಬಿರಿಯಾನಿ ಮಾಡುವುದರಲ್ಲಿ ಎತ್ತಿದ ಕೈ. ಅವರಿಂದ ನಾನೂ ಕಲಿತು ಇವತ್ತು ಮಟನ್ ಬಿರಿಯಾನಿ ತಂದಿದ್ದೇನೆ' ಎಂದು ರುಕ್ಮಿಣಿ ಹೇಳಿದರು.

ಸ್ಪರ್ಧಿಗಳಲ್ಲಿ ಒಬ್ಬರಾದ ವಿದ್ಯಾಶ್ರೀ ಅವರು 'ಬೆಳಗನ್ನು ನಾಷ್ಟ ನುಂಗಿತ್ತಾ..' ಎಂದು ಹಾಡಿ ರಂಜಿಸಿದರು. ಜರ್ಮನಿಯಿಂದ ಯಾತ್ರಾರ್ಥಿಯಾಗಿ ಭಾನುವಾರವಷ್ಟೇ ಬೆಂಗಳೂರಿಗೆ ಬಂದಿದ್ದ ಲೂಸ್ ಅವರು ಇಲ್ಲಿನ ಆಹಾರ ಸವಿದು 'ವೆರಿನೈಸ್' ಎಂದು ಉದ್ಗರಿಸಿದರು.



'ಕರುನಾಡ ಸವಿಯೂಟ' ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದ ಸವಿತಾ ಜಿ. ಮಯ್ಯ, ದ್ವಿತೀಯ ಪ್ರಶಸ್ತಿ ಪಡೆದ ಉಮಾ ಜಗನ್ನಾಥ್, ಪ್ರಥಮ ಸ್ಥಾನ ಪಡೆದ ಎಲಿಜಬೆತ್ ಎಚ್. ಅವರಿಗೆ 'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್' ಬ್ರ್ಯಾಂಡ್ ಮ್ಯಾನೇಜರ್ ಹರ್ಷ ರತ್ತೋಗಿ (ಎಡದಿಂದ ಮೊದಲನೆಯವರು), ನಿರೂಪಕಿ ಸುಚಿತ್ರಾ ಮತ್ತು 'ಒಗ್ಗರಣೆ ಡಬ್ಬಿ' ಮುರಳಿ ಪ್ರಶಸ್ತಿ ಪ್ರದಾನ ಮಾಡಿದರು ಪ್ರಜಾವಾಣಿ ಚಿತ್ರ



ಬೆಂಗಳೂರಿನ ದಂಡು ಪ್ರದೇಶದ ಸಾರ್ವಜನಿಕ ಗಣೇಶೋತ್ಸವ ಸಮಿತಿ ಭಾನುವಾರ ಆಯೋಜಿಸಿದ್ದ ಮೆರವಣಿಗೆಯಲ್ಲಿ ವಿವಿಧ ಸಂಘಟನೆಗಳು ಪ್ರತಿಷ್ಠಾಪಿಸಿದ್ದ ಬೃಹತ್ ಗಣೇಶ ಮೂರ್ತಿಗಳು ತಿಮ್ಮಯ್ಯ ರಸ್ತೆಯಲ್ಲಿ ಸಾಗಿದವು ಚಿತ್ರ: ರಂಜು ಪಿ.

'ಸಂಸ್ಕಾರೋತ್ಸವ' ಸಮಾರಂಭದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಮತ

'ಸನಾತನ ಧರ್ಮ ಘಾಸಿಗೊಳಿಸುವ ಶಕ್ತಿಗಳ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರದ ಉದ್ದಗಲಕ್ಕೂ ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಘಾಸಿಗೊಳಿಸುವ ಶಕ್ತಿಗಳು ಹೆಚ್ಚುತ್ತಿವೆ. ಭಾರತಕ್ಕೆ ಇದು ಹೊಸತಲ್ಲವಾದರೂ, ಇದನ್ನು ತಡೆಯದಿದ್ದರೆ ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ಅಖಿಲ ಹವ್ಯಕ ಮಹಾಸಭಾವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಸಂಸ್ಕಾರೋತ್ಸವ' ಸಮಾರಂಭ ಉದ್ಘಾಟಿಸಿದ ಅವರು, ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಸ್ಮರಣ ಸಂಚಿಕೆ 'ಸಹಸ್ರಚಂದ್ರ' ಬಿಡುಗಡೆಮಾಡಿದರು. ಬಳಿಕ ಮಾತನಾಡಿದ ಅವರು, 'ಪುನರ್ಜನ್ಮ ಮತ್ತು ಕರ್ಮದ ಫಲದ ಮೇಲೆ ನಂಬಿಕೆ ಇದ್ದರೆ ಸಂಸ್ಕಾರಯುತ ಜೀವನ ಸಹಜವಾಗಿ ಬರುತ್ತದೆ. ಸನಾತನ ಸಂಸ್ಕೃತಿಯಲ್ಲಿ ಇದು ಅಂತರ್ಗತವಾಗಿ ಬೆಳೆದು ಬಂದಿದೆ. ಮುಂದಿನ ಜನಾಂಗಕ್ಕೂ ಸಂಸ್ಕಾರದ ತಿಳಿವಳಿಕೆ ಮೂಡಿಸುವ ನಿಟ್ಟಿನಲ್ಲಿ ಸಂಸ್ಕಾರೋತ್ಸವ ಮಾದರಿ ಕಾರ್ಯ' ಎಂದು ಶ್ಲಾಘಿಸಿದರು.

> ಹವ್ಯಕ ಸಮಾಜದ ಸಂಸ್ಕಾರ ಶಕ್ತಿ ಎಲ್ಲ ಸಮುದಾಯಕ್ಕೆ ಮಾದರಿಯಾಗಿದೆ. ಸಂಸ್ಕಾರೋತ್ಸವದ ಮೂಲಕ ಹವ್ಯಕರಲ್ಲಿನ ಸಂಸ್ಕಾರ ಪುನಶ್ಚೇತನಗೊಳಿಸುವ ಕೆಲಸ ಶ್ಲಾಘನೀಯ
>
> **ವಿನಾಯಕ ತೊರವಿ,** ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ

'ಹರಿದು ಹಂಚಿಹೋಗಿದ್ದ ಪುಟ್ಟ ದೇಶ ಇಸ್ರೇಲ್, ಮತ್ತೆ ಸಂಘಟನೆಗೊಂಡು ಜಗತ್ತಿನಲ್ಲಿ ಶಕ್ತಿಶಾಲಿಯಾಗಿ ಪುಟಿದೆದ್ದಿದೆ. ಅದೇ ರೀತಿ, ಹವ್ಯಕರು ಎಲ್ಲೇ ಇದ್ದರೂ ಸಂಘಟನೆಯನ್ನು ಬೆಳೆಸಬೇಕು. ಜಗತ್ತು ಜ್ಞಾನಾಧಾರಿತವಾಗಿ ವೇಗವಾಗಿ ಬೆಳೆಯುತ್ತಿದೆ. ಹವ್ಯಕ ಸಮಾಜ ಜ್ಞಾನದ ಮೂಲಕವೇ ಸಮಾಜದಲ್ಲಿ ಗುರುತಿಸಿಕೊಂಡಿದ್ದು, ಈ ಸಮಾಜವು ಇನ್ನಷ್ಟು ಸಂಘಟನೆಯಾಗಬೇಕು. ದೇಶ ಹಾಗೂ ರಾಜ್ಯದಲ್ಲಿ ಯಾವ ಸಮುದಾಯದ ಸಂಖ್ಯೆ ಎಷ್ಟು ಎಂಬ ಚರ್ಚೆ ನಡೆದಿದೆ. ಹವ್ಯಕ ಸಮುದಾಯದ ಸಂಖ್ಯೆಯು ಕೆಲವೇ ಲಕ್ಷದಷ್ಟಿದೆ. ಆದ್ದರಿಂದ ಅಲ್ಪಸಂಖ್ಯಾತರ ಸ್ಥಾನಮಾನ ನಿಜವಾಗಿಯೂ ಲಭಿಸಬೇಕಿರುವುದು ಹವ್ಯಕರಿಗೆ' ಎಂದು ಪ್ರತಿಪಾದಿಸಿದರು.

'ಸಂಸ್ಕಾರಗಳ ಮಹತ್ವ ಹಾಗೂ ಪ್ರಸ್ತುತತೆ' ಕುರಿತು ಮಾತನಾಡಿದ ವಿದ್ವಾಂಸ ಆರ್. ಗಣೇಶ್, 'ಸನಾತನ ಧರ್ಮದ ಕುರಿತಾದ ಶ್ರದ್ಧೆ ಹಾಗೂ ರಾಷ್ಟ್ರಭಕ್ತಿಯ ವಿಚಾರದಲ್ಲಿ ಹವ್ಯಕ ಸಮುದಾಯ ಬೇರೆಲ್ಲರಿಗಿಂತ ದೊಡ್ಡ ಮಟ್ಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ. ಕಾಲದ ಪ್ರಭಾವ ಎಲ್ಲರ ಮೇಲೂ ಇದ್ದು, ನಾವು ನಿಂತ ನೀರಾಗಿರದೆ ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಉಳಿಸಿಕೊಳ್ಳಬೇಕು' ಎಂದು ಹೇಳಿದರು.

'ಜಪ ತಪಗಳೊಂದಿಗೆ ಆಧುನಿಕ ಜೀವನ' ವಿಷಯದ ಬಗ್ಗೆ ಮಾತನಾಡಿದ ವಾಗ್ಮಿ ಚಕ್ರವರ್ತಿ ಸೂಲಿಬೆಲೆ, 'ಇಂದು ನಮ್ಮ ಶ್ರದ್ಧಾಸ್ಥಾನಗಳ ಮೇಲೆ ಆಕ್ರಮಣಗಳು ನಡೆಯುತ್ತಿದ್ದು, ನಮ್ಮ ನಂಬಿಕೆಯನ್ನು ಅಳಿಸುವ ಕೆಲಸಗಳು ನಡೆಯುತ್ತಿವೆ. ತಲೆಮಾರುಗಳಿಂದ ಬಂದ ನಂಬಿಕೆಯನ್ನು ಅಳಿಸುವುದು ಸುಲಭವಲ್ಲ' ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ 108 ಮಾತೆಯರಿಂದ ಕುಂಕುಮಾರ್ಚನೆ, 108 ವೈದಿಕರಿಂದ ರುದ್ರಾಭಿಷೇಕ, ಶಂಕರ ಪಲ್ಲಕ್ಕಿ ಉತ್ಸವ, ಸಿದ್ಧಿ ವಿನಾಯಕ ದೇವರಿಗೆ ರಂಗಪೂಜೆ ಸೇರಿದ ಧಾರ್ಮಿಕ ಕಾರ್ಯಕ್ರಮಗಳು ನಡೆದವು.



ಸಮಾರಂಭದಲ್ಲಿ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಗೌರವಿಸಿದರು. ಹರಿಪ್ರಸಾದ್ ಪೆರಿಯಪ್ಪು, ವಿನಾಯಕ ತೊರವಿ ಹಾಗೂ ಶ್ರೀಧರ ಜೆ. ಭಟ್ ಕೆಕ್ಕಾರು ಉಪಸ್ಥಿತರಿದ್ದರು

ಜಿಬಿಎಗೆ ಐಎಎಸ್, ಕೆಎಎಸ್ ಹುದ್ದೆಗಳ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ನಗರ ಪಾಲಿಕೆಗಳಿಗೆ ಐಎಎಸ್, ಕೆಎಎಸ್ ಮತ್ತು ಐಪಿಎಸ್, ಕೆಎಸ್‌ಪಿಎಸ್ ಹುದ್ದೆಗಳನ್ನು ಹಂಚಿಕೆ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಮುಖ್ಯ ಆಯುಕ್ತರ ಒಂದು ಹುದ್ದೆ ಇರಲಿದ್ದು ಪ್ರಧಾನ ಕಾರ್ಯದರ್ಶಿ ಅಥವಾ ಅದಕ್ಕಿಂತ ಉನ್ನತ ಶ್ರೇಣಿ ಹೊಂದಿದವರಾಗಿರಬೇಕು. ಆಡಳಿತ, ಕಂದಾಯ ಮತ್ತು ಮಾಹಿತಿ ತಂತ್ರಜ್ಞಾನ ವಿಶೇಷ ಆಯುಕ್ತ, ಆರೋಗ್ಯ ಮತ್ತು ಶಿಕ್ಷಣ ವಿಶೇಷ ಆಯುಕ್ತ, ಚುನಾವಣೆ, ವಿಪತ್ತು ನಿರ್ವಹಣೆ, ಸಾರ್ವಜನಿಕ ಸಂಪರ್ಕ ವಿಶೇಷ ಆಯುಕ್ತ, ಹಣಕಾಸು ಮುಖ್ಯ ಆಯುಕ್ತ ಹುದ್ದೆಗೆ ಐಎಎಸ್ ಅಧಿಕಾರಿಗಳು ಇರಲಿದ್ದಾರೆ. ಒಂದು ಎಡಿಜಿಪಿ, ಒಂದು ಎಸ್‌ಪಿ ಹುದ್ದೆ ಇರಲಿದೆ.

ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಗರ ಪಾಲಿಕೆಗಳಿಗೆ ಕಾರ್ಯದರ್ಶಿ ಶ್ರೇಣಿಯ ಐಎಎಸ್ ಅಧಿಕಾರಿಗಳು ಆಯುಕ್ತ ರಾಗಲಿದ್ದಾರೆ. ಹಿರಿಯ ಐಎಎಸ್ ಅಧಿಕಾರಿಗಳು ಹೆಚ್ಚುವರಿ ಆಯುಕ್ತರಾಗಲಿದ್ದಾರೆ.

ಈ ಐದು ನಗರಪಾಲಿಕೆಗಳಿಗೆ ಕೆಎಎಸ್ ಶ್ರೇಣಿಯ ಹೆಚ್ಚುವರಿ ಆಯುಕ್ತರು ತಲಾ ಒಬ್ಬರಂತೆ ಇರುವರು. ಹಿರಿಯ ಶ್ರೇಣಿಯ ಅಧಿಕಾರಿಗಳು ತಲಾ ಇಬ್ಬರಂತೆ ವಲಯ ಜಂಟಿ ಆಯುಕ್ತರಾಗಿರುವರು. ಒಂದು ಡಿವೈಎಸ್‌ಪಿ ಹುದ್ದೆ ಇರಲಿದೆ ಎಂದು ತಿಳಿಸಲಾಗಿದೆ.

ಹಾಲಿ ವಾರ್ಡ್‌ಗಳ ಮುಂದುವರಿಕೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳ ಆಧಾರದಲ್ಲಿಯೇ ಕಾರ್ಯನಿರ್ವಹಿಸುತ್ತಿವೆ. ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಹೊಸದಾಗಿ 5 ನಗರ ಪಾಲಿಕೆಗಳನ್ನು ಸರ್ಕಾರ ಅಧಿಸೂಚಿಸಿದರೂ, ಹಾಲಿ ಇರುವ ವಾರ್ಡ್‌ಗಳೇ ಮುಂದುವರಿಯಲಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದ್ದಾರೆ.



ಹೈದರಾಬಾದ್‌ನಲ್ಲಿ ಆಗಸ್ಟ್ 30 ಹಾಗೂ 31ರಂದು ನಡೆದ ಅಮೆರಿಕನ್ ಫ್ಲಾಗ್ ಫುಟ್‌ಬಾಲ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ಪುರುಷರ ತಂಡವು ಪ್ರಶಸ್ತಿ ಗೆದ್ದರೆ, ಮಹಿಳಾ ತಂಡವು ರನ್ನರ್‌ಅಪ್ ಆಯಿತು. ಕೋಚ್ ಸತೀಶ್ ಎಂ., ಕೆಎಫ್‌ಎಫ್‌ಎ ರಾಜ್ಯ ಕಾರ್ಯದರ್ಶಿ ಮೊಹಮದ್ ಸೀಬಗತುಲ್ಲ ಹಾಗೂ ಖಜಾಂಚಿ ತೇಜಸ್ ಎನ್. ಚಿತ್ರದಲ್ಲಿದ್ದಾರೆ

ನಗರದಲ್ಲಿ ಇಂದು

ಅಮೀಶ್ ಅವರ 'ದಿ ಚೋಳ ಟೈಗರ್ಸ್–ಅವೆಂಜರ್ಸ್ ಆಫ್ ಸೋಮನಾಥ' ಪುಸ್ತಕ ಬಿಡುಗಡೆ: ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಕೋರಮಂಗಲ, ಸಂಜೆ 4

ಸತ್ಸಂಗ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 5

ಗಣೇಶೋತ್ಸವ ವಿಶೇಷ: ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ ನೃತ್ಯ ಪ್ರದರ್ಶನ: ಸಾಯಿ ಸಾಂಸ್ಕೃತಿಕ ಅಕಾಡೆಮಿಯ ವಿದ್ಯಾರ್ಥಿಗಳಿಂದ, ಡೊಳ್ಳು ಕುಣಿತ, ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1

ಸಂಗೀತ ಕಛೇರಿ: ಬೆಳಿಗ್ಗೆ 9ಕ್ಕೆ ಸತ್ಯನಾರಾಯಣಸ್ವಾಮಿ ಪೂಜೆ, ಲಕ್ಷ್ಮೀನಾರಾಯಣ ಹೋಮ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ, ಎರಡನೇ ಹಂತ

63ನೇ ಗಣೇಶೋತ್ಸವ: ಸಂಗೀತ ಕಛೇರಿ: ಪ್ರವೀಣ್ ಗೋಡ್ಖಿಂಡಿ, ಕೃಷ್ಣ ಫ್ಯೂಶನ್ ಬ್ಯಾಂಡ್, ಫ್ಲ್ಯುಟ್ ರಾಕ್ಸ್, ಆಯೋಜನೆ: ಶ್ರೀವಿದ್ಯಾರಣ್ಯ ಯುವಕ ಸಂಘ, ಸ್ಥಳ: ಎಪಿಎಸ್ ಕಾಲೇಜಿನ ಮೈದಾನ, ಬಸವನಗುಡಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ.. nagaradalli_indu@prajavani.co.in

ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರ ಮಹಾ ಸಂಗಮದಲ್ಲಿ ಡಾ. ನಾಗಲಕ್ಷ್ಮಿ ಚೌಧರಿ ಸಲಹೆ

'ಸೌಲಭ್ಯ ಕಲ್ಪಿಸದವರ ವಿರುದ್ಧ ದೂರು ನೀಡಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಲೈಂಗಿಕ ದೌರ್ಜನ್ಯ ತಡೆಗಟ್ಟಲು ಆಂತರಿಕ ದೂರು ಸಮಿತಿ ರಚಿಸಿ
- ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಗೆ ಪರಿಹಾರ ಒದಗಿಸುವ ಭರವಸೆ
- ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಲು ಸಲಹೆ

ಬೆಂಗಳೂರು: 'ಗಾರ್ಮೆಂಟ್ಸ್‌ಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರಿಗೆ ಶುದ್ಧ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು. ಈ ಸೌಲಭ್ಯಗಳನ್ನು ನೀಡದ ಗಾರ್ಮೆಂಟ್ಸ್‌ಗಳ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಭರವಸೆ ನೀಡಿದರು.

ಸಿವಿಡೆಪ್ ಇಂಡಿಯಾ, ಮುನ್ನಡೆ ಸಾಮಾಜಿಕ ಸಂಸ್ಥೆ, ಸಾಧನಾ ಟ್ರಸ್ಟ್, ಸಮೃದ್ಧಿ ಟ್ರಸ್ಟ್, ರಾಜ್ಯ ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಭಾನುವಾರ ಆಯೋಜಿಸಿದ್ದ ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರ ಮಹಾ ಸಂಗಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ನಿಯಂತ್ರಿಸಲು ಸರ್ಕಾರಿ, ಖಾಸಗಿ ಕಚೇರಿಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ. ಯಾವುದಾದರೂ ಗಾರ್ಮೆಂಟ್ಸ್‌ಗಳಲ್ಲಿ ಆಂತರಿಕ ದೂರು ಸಮಿತಿಗಳು ರಚಿಸದಿದ್ದರೆ, ಅದನ್ನು ಮಹಿಳಾ ಆಯೋಗದ ಗಮನಕ್ಕೆ ತರಬೇಕು. ಅಂತಹ ಗಾರ್ಮೆಂಟ್ಸ್‌ಗಳಿಗೆ ಆಯೋಗದ ಮೂಲಕ ನೋಟಿಸ್ ನೀಡಲಾಗುವುದು' ಎಂದು ಹೇಳಿದರು.

'ಗಾರ್ಮೆಂಟ್ಸ್ ಕಾರ್ಮಿಕರ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಜೊತೆಗೆ ಚರ್ಚಿಸಿ ಪರಿಹಾರ ಕಲ್ಪಿಸುವ ಕೆಲಸವನ್ನು ಮಹಿಳಾ ಆಯೋಗ ಮಾಡಲಿದೆ. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪ್ರತಿಯೊಬ್ಬರು ಬಳಸಿಕೊಳ್ಳಬೇಕು' ಎಂದರು.

ಲೇಖಕಿ ಕೆ. ಷರೀಫಾ ಮಾತನಾಡಿ, 'ಗಾರ್ಮೆಂಟ್ಸ್ ಉದ್ಯಮದಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ಈ ಉದ್ಯಮವು ಮಹಿಳೆಯರನ್ನು ಅವಲಂಬಿಸಿದ್ದು, ಅಧಿಕಾರ ಮಾತ್ರ ಪುರುಷರ ಬಳಿ ಇದೆ. ಇಲ್ಲಿ ಮಹಿಳೆಯರನ್ನು ಶೋಷಣೆ ಮಾಡಲಾಗುತ್ತಿದ್ದು, ಇದರ ವಿರುದ್ಧ ಸಂಘಟಿತರಾಗಿ ಹೋರಾಟ ಮಾಡಬೇಕು' ಎಂದು ಹೇಳಿದರು.

ನಿವೃತ್ತ ಕುಲಪತಿ ಸಬಿಹಾ ಭೂಮಿಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಮರ್ಶಕಿ ಎಂ.ಎಸ್. ಆಶಾದೇವಿ, ಸಮೃದ್ಧಿ ಟ್ರಸ್ಟ್ ನಿರ್ದೇಶಕ ಬಿ. ಶಿವರಾಜೇಗೌಡ, ಸಿವಿಡೆಪ್ ಇಂಡಿಯಾದ ಕಾರ್ಯನಿರ್ವಾಹಕ ನಿರ್ದೇಶಕಿ ದೀಪಿಕಾ ರಾವ್ ಇದ್ದರು.



ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರ ಮಹಾ ಸಂಗಮ ಕಾರ್ಯಕ್ರಮದಲ್ಲಿ (ಎಡದಿಂದ) ದೀಪಿಕಾ ರಾವ್, ಕೆ.ಷರೀಫಾ, ಸಬಿಹಾ ಭೂಮಿಗೌಡ, ಎಂ.ಎಸ್ ಆಶಾದೇವಿ, ಬಿ. ಶಿವರಾಜೇಗೌಡ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿ'

ಪಿಇಎಸ್ ವಿ.ವಿ ಘಟಿಕೋತ್ಸವ: 4,607 ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನಸ್ಸನ್ನು ಸ್ಥಿರವಾಗಿಟ್ಟುಕೊಳ್ಳುವ ಮೂಲಕ ಯುವ ಪೀಳಿಗೆ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬೇಕು' ಎಂದು ಆಸ್ಟ್ರೇಲಿಯಾದ ಮೆಲ್ಬರ್ನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಪ್ಯೂಟಿಂಗ್ ಆ್ಯಂಡ್ ಇನ್ಫರ್ಮೇಷನ್ ಸಿಸ್ಟಮ್ಸ್‌ನ ಪ್ರಾಧ್ಯಾಪಕ ಪ್ರೊ. ರಾಜ್‌ಕುಮಾರ್ ಬುಯ್ಯಾ ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಘಟಿಕೋತ್ಸವ ಭಾಷಣ ಮಾಡಿದರು.

ಭಗವದ್ಗೀತೆಯ ಶ್ಲೋಕಗಳನ್ನು ಉಲ್ಲೇಖಿಸಿದ ಅವರು, 'ಮನಸ್ಸನ್ನು ಸ್ಥಿರವಾಗಿ ಇಟ್ಟುಕೊಳ್ಳಲು ಭಗವದ್ಗೀತೆಯಂತಹ ಆಧ್ಯಾತ್ಮಿಕ ಪುಸ್ತಕಗಳು ಸಹಕಾರಿ. ಐನ್‌ಸ್ಟೈನ್, ಸ್ಟೀವ್ ಜಾಬ್ಸ್, ಎಂ.ಕೆ. ಗಾಂಧಿ ಮೊದಲಾದ ಮಹಾನ್ ವ್ಯಕ್ತಿಗಳು ಗೀತೆಯಲ್ಲಿ ಸ್ಫೂರ್ತಿಯನ್ನು ಹುಡುಕುತ್ತಿದ್ದರು' ಎಂದರು.

ಪಿಎಚ್.ಡಿ ಮತ್ತು ಶ್ರೇಯಾಂಕ ಪಡೆದವರಿಗೆ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ, 'ವಿಶ್ವವಿದ್ಯಾಲಯದ ಸಂಸ್ಥಾಪಕರಾದ ಎಂ.ಆರ್. ದೊರೆಸ್ವಾಮಿ ಅವರು ಪರಿಶ್ರಮ, ಶ್ರೇಷ್ಠತೆ ಮತ್ತು ಸೇವೆಯ ಮೌಲ್ಯಗಳೊಂದಿಗೆ ಬದುಕಿದರು. ವಿದ್ಯಾರ್ಥಿಗಳಿಗೆ ಪರಿಶ್ರಮವು ಆಧಾರ ಸ್ತಂಭ ಆಗಿದ್ದರೆ, ಶ್ರೇಷ್ಠತೆಯು ದಿಕ್ಸೂಚಿಯಾಗಿರುತ್ತದೆ' ಎಂದು ಹೇಳಿದರು.

ಒಂಬತ್ತು ಮಂದಿಗೆ ಪಿಎಚ್.ಡಿ, ಒಬ್ಬರಿಗೆ ಎಂ.ಟೆಕ್ ಸಂಶೋಧನಾ ಪ್ರಶಸ್ತಿ, 1,128 ಮಂದಿಗೆ ಸ್ನಾತಕೋತ್ತರ ಪದವಿ ಸೇರಿ 4,607 ವಿದ್ಯಾರ್ಥಿಗಳು ಪದವಿ ಪಡೆದರು. ವಿ.ವಿ ಕುಲಪತಿ ಜೆ. ಸೂರ್ಯ ಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್, ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಪ್ರೊ. ಅಜಯ್ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಕಾರ್ತಿಕ್ ಎಸ್. ಉಪಸ್ಥಿತರಿದ್ದರು.



ಪ್ರೊ. ಜವಾಹರ್ ದೊರೆಸ್ವಾಮಿ ಅವರು ಪದವಿ ಪ್ರದಾನ ಮಾಡಿದರು. ಪ್ರೊ. ರಾಜ್‌ಕುಮಾರ್ ಬುಯ್ಯಾ, ಪ್ರೊ. ಅಜಯ್ ಕುಮಾರ್ ಉಪಸ್ಥಿತರಿದ್ದರು



ನಿಜವಾದ ವಿದ್ಯೆಯು ಆಲೋಚಿಸುವುದನ್ನು ನಮಗೆ ಕಲಿಸುತ್ತದೆ.
-ಹಾ.ಮಾ.ನಾಯಕ

ಮೌಲ್ಯ ಬೋಧನೆ ಸಿದ್ಧವಾಗುತ್ತಿದೆ ಪಠ್ಯ

ಮಕ್ಕಳಲ್ಲಿ ನೈತಿಕ ಮೌಲ್ಯ ಬೆಳೆಸಬೇಕೆಂಬ ಒತ್ತಾಸೆಗೆ ಪೂರಕವಾಗಿ, ಅದಕ್ಕೆ ಅಗತ್ಯವಾದ ಚಟುವಟಿಕೆಗಳನ್ನು ಒಳಗೊಂಡ ಪುಸ್ತಕ ರಚನೆಗೆ ರಾಜ್ಯ ಶಿಕ್ಷಣ ಇಲಾಖೆ ಮುಂದಾಗಿದೆ. ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಕಥೆಗಳು, ವಿವಿಧ ರೀತಿಯ ಚಟುವಟಿಕೆಗಳನ್ನು ಈ ಪುಸ್ತಕ ಒಳಗೊಂಡಿರಲಿದೆ

• ಎಚ್.ಬಿ.ಚಂದ್ರಶೇಖರ್

ಆಧುನಿಕ ಸಮಾಜವು ಸಂಕೀರ್ಣ ಮತ್ತು ಸವಾಲಿನಿಂದ ಕೂಡಿದ್ದು, ಮಕ್ಕಳು ಹೆಚ್ಚು ಹೆಚ್ಚು ಸ್ವಕೇಂದ್ರಿತರಾಗುತ್ತಿದ್ದಾರೆ. ಅವರಲ್ಲಿ ಕರುಣೆ, ಅನುಭೂತಿ, ಪ್ರೀತಿ, ಇತರರ ಕಷ್ಟಗಳಿಗೆ ಸ್ಪಂದಿಸುವುದು, ಹಿರಿಯರಿಗೆ ಗೌರವ ಕೊಡುವುದು, ಸಹನೆಯಂತಹ ಗುಣಗಳು ಕಡಿಮೆಯಾಗುತ್ತಿವೆಯೇನೋ ಎಂಬ ಆತಂಕ ಎಲ್ಲರಲ್ಲೂ ಉಂಟಾಗುತ್ತಿದೆ. ಕುಟುಂಬದ ಸದಸ್ಯರು ಹಾಗೂ ಇತರರೊಂದಿಗೆ ಬೆರೆಯುವ ಗುಣ ಇಲ್ಲವಾಗುತ್ತಿರುವುದು ದುಗುಡಕ್ಕೆ ಕಾರಣವಾಗಿದೆ. ತಾವಾಯಿತು ತಮ್ಮ ಮೊಬೈಲ್ ಫೋನಾಯಿತು ಎಂಬಂತೆ ಕೊಠಡಿಯ ಒಳಗೆ ಸ್ವಯಂ ಬಂದಿಗಳಾಗಿ ಕಾಲ ಕಳೆಯುವ ಪ್ರವೃತ್ತಿಯು ಪೋಷಕರನ್ನು ಚಿಂತೆಗೀಡುಮಾಡುತ್ತಿದೆ. ಇದರ ಜೊತೆಗೆ, ಕಾನೂನಿನೊಂದಿಗೆ ಸಂಘರ್ಷ ಎದುರಿಸುತ್ತಿರುವ ಮಕ್ಕಳ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಇವೆಲ್ಲಕ್ಕೂ ಪರಿಹಾರ ಎಂಬಂತೆ, ಮಕ್ಕಳಿಗೆ ನೀತಿ ಶಿಕ್ಷಣ, ಮೌಲ್ಯ ಶಿಕ್ಷಣ ನೀಡಬೇಕು ಎಂಬ ಕೂಗು ಹೆಚ್ಚಾಗಿ ಕೇಳಿಬರುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಶಿಕ್ಷಣ ಇಲಾಖೆ, ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಒಳಗೊಂಡ ಪುಸ್ತಕ ರಚನೆಗೆ ಮುಂದಾಗಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಈ ಉದ್ದೇಶಕ್ಕಾಗಿ, ಮಕ್ಕಳ ತರಗತಿಗೆ ಅನುಗುಣವಾಗಿ 10 ಪ್ರಧಾನ ಮೌಲ್ಯಗಳನ್ನು ಗುರುತಿಸಲಾಗಿದೆ. ಪ್ರತಿ ಮೌಲ್ಯಕ್ಕೆ ಉಪಮೌಲ್ಯಗಳನ್ನು ವಿಷದೀಕರಿಸಿ, ಅದಕ್ಕೆ ತಕ್ಕಂತೆ ಸೂಕ್ತವಾದ ಚಟುವಟಿಕೆಗಳನ್ನು ರೂಪಿಸುವ ಕಾರ್ಯ ಪ್ರಗತಿಯಲ್ಲಿದೆ.

ಹಲವು ವರ್ಷಗಳ ಹಿಂದೆ ಶಾಲೆಗಳಲ್ಲಿ ನೀತಿ ಶಿಕ್ಷಣದ ಬೋಧನೆಗಾಗಿಯೇ ಪ್ರತ್ಯೇಕವಾದ ಒಂದು ಅವಧಿ ಇರುತ್ತಿತ್ತು. ಆ ಸಮಯದಲ್ಲಿ, ನಿರ್ದಿಷ್ಟ ಪುಸ್ತಕದಲ್ಲಿ ಅಳವಡಿಸಲಾದ ಕಥೆಗಳ ಮೂಲಕ ಶಿಕ್ಷಕರು ನೀತಿಯನ್ನು ಬೋಧಿಸುತ್ತಿದ್ದರು. ಕೆಲ ವರ್ಷಗಳ ನಂತರ ಈ ಅವಧಿಯನ್ನು ಮೌಲ್ಯ ಶಿಕ್ಷಣ ಎಂದು ಬದಲಾಯಿಸಲಾಯಿತು. ನೀತಿ ಶಿಕ್ಷಣ, ಮೌಲ್ಯ ಶಿಕ್ಷಣ ಮತ್ತು ಜೀವನ ಕೌಶಲ ಶಿಕ್ಷಣವನ್ನು ಸಮಾನ ಅರ್ಥದಲ್ಲಿ ಬಳಸಿದರೂ ಇವುಗಳ ನಡುವೆ ವ್ಯತ್ಯಾಸವಿದೆ. ಒಳ್ಳೆಯ ಅಥವಾ ಕೆಟ್ಟ ವರ್ತನೆಗಳು ಯಾವುವು ಎಂಬ ಬಗ್ಗೆ ಬೋಧಿಸುವುದು ಮತ್ತು ಸ್ಥಾಪಿತ ಸಾಮಾಜಿಕ ಆದರ್ಶಗಳ ಬಗ್ಗೆ ತಿಳಿಸುವುದನ್ನು ನೀತಿ ಶಿಕ್ಷಣ ಎನ್ನುತ್ತಾರೆ. ಮೌಲ್ಯ ಶಿಕ್ಷಣವು ವಿಶಾಲವಾದ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾದ ಪರಿಕಲ್ಪನೆಯಾಗಿದೆ. ನೈತಿಕ ಶಿಕ್ಷಣವು ಮೌಲ್ಯ ಶಿಕ್ಷಣದ ಭಾಗವಾಗಿದ್ದು, ಪರಿಸರ ಜಾಗೃತಿ, ಸಹಿಷ್ಣುತೆ, ಸಾಮಾಜಿಕ ನ್ಯಾಯದಂತಹ ಗುಣಗಳನ್ನು ಮೈಗೂಡಿಸಿಕೊಳ್ಳುವುದಕ್ಕೆ ಅಗತ್ಯವಾದ ವಿಶಾಲ ತಳಹದಿಯ ನಂಬಿಕೆಗಳು, ತತ್ವಗಳು ಹಾಗೂ ಮನೋಭಾವವನ್ನು ರೂಪಿಸುವುದಾಗಿದೆ. ವ್ಯಕ್ತಿಯೊಬ್ಬನಲ್ಲಿ ಅಂತರ್ಗತವಾದ ನಂಬಿಕೆ, ತತ್ವ ಮತ್ತು ಮನೋಭಾವವನ್ನು ಅವಶ್ಯಕತೆಗೆ ಅನುಸಾರವಾಗಿ ಪ್ರಕಟಿಸುವ ಸಾಮರ್ಥ್ಯವು ಜೀವನ ಕೌಶಲ ಎನಿಸಿಕೊಳ್ಳುತ್ತದೆ. ಉದಾಹರಣೆಗೆ, ಇತರರು ತನ್ನ ಮನಸ್ಸನ್ನು ನೋಯಿಸಿದರೂ ತಾನು ಸಹನೆಯಿಂದ ಪ್ರತಿಕ್ರಿಯಿಸಬೇಕು ಎಂಬ ನಂಬಿಕೆ ಹಾಗೂ ತತ್ವವನ್ನು ಹೊಂದಿರುವುದು ಮೌಲ್ಯವಾದರೆ, ಅಂತಹ ಸನ್ನಿವೇಶವನ್ನು ನಿಭಾಯಿಸಿ, ಸಹನೆಯನ್ನು ಕಾಯ್ದುಕೊಳ್ಳುವ ಸಾಮರ್ಥ್ಯವು ಜೀವನ ಕೌಶಲ ಎನಿಸಿಕೊಳ್ಳುತ್ತದೆ.

ಮೌಲ್ಯ ಶಿಕ್ಷಣವನ್ನು ಶಾಲೆಗಳಲ್ಲಿ ಯಾವ ರೀತಿ ಅಳವಡಿಸಬಹುದು ಎಂಬ ಬಗ್ಗೆ ಎನ್‌ಸಿಇಆರ್‌ಟಿ ವಿಶಾಲವಾದ ಚೌಕಟ್ಟನ್ನು ಸಿದ್ಧಪಡಿಸಿ, ಎಲ್ಲರಿಗೂ ಲಭ್ಯವಾಗುವಂತೆ ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ.



ಪ್ರಧಾನ ಮೌಲ್ಯಗಳು

ಅನುಭೂತಿ ಮತ್ತು ಕರುಣೆ, ಗೌರವ, ಪ್ರಾಮಾಣಿಕತೆ, ಸುಸ್ಥಿರ ಜೀವನ ಮತ್ತು ಪರಿಸರ ಜಾಗೃತಿ, ನಾಗರಿಕ ಜವಾಬ್ದಾರಿ, ವಿವಿಧತೆ, ಸಮತೆ ಮತ್ತು ಒಳಗೊಳ್ಳುವಿಕೆ, ಭಾವನಾತ್ಮಕ ಬುದ್ಧಿಶಕ್ತಿ ಮತ್ತು ಪುಟಿದೇಳುವುದು, ವೈಜ್ಞಾನಿಕ ಮನೋಭಾವ ಮತ್ತು ಕುತೂಹಲ, ಸುರಕ್ಷತೆ, ಲಿಂಗತ್ವ ಸಮಾನತೆಯನ್ನು ಪ್ರಧಾನ ವಿಷಯಗಳನ್ನಾಗಿ ಮೌಲ್ಯ ಶಿಕ್ಷಣಕ್ಕೆ ಪರಿಗಣಿಸಲಾಗಿದೆ.

ಅದರಂತೆ, ವಿದ್ಯಾರ್ಥಿಗಳ ಮೇಲೆ ಮೌಲ್ಯಗಳನ್ನು ಹೇರದೆ ಅವರು ಅವುಗಳನ್ನು ಹೊಂದಲು ಸಾಧ್ಯವಾಗುವಂತಹ ವಾತಾವರಣವನ್ನು ಶಾಲೆಗಳಲ್ಲಿ ಸೃಷ್ಟಿಸಬೇಕು. ವಿವಿಧ ಸವಾಲು ಮತ್ತು ಸಂಕಷ್ಟದ ಸನ್ನಿವೇಶಗಳಲ್ಲಿ ಸ್ವಯಂ ಅರಿವು ಮತ್ತು ಸ್ವಯಂ ನಿರ್ದೇಶನದ ಮೂಲಕ ತನ್ನೊಳಗಿನ ಮೌಲ್ಯಗಳಿಗೆ ಅನುಸಾರವಾಗಿ ಜವಾಬ್ದಾರಿಯುತವಾದ ಆಯ್ಕೆಗಳನ್ನು ಮಾಡುವಂತೆ ಅವರನ್ನು ಸಜ್ಜುಗೊಳಿಸಬೇಕು. ಮೌಲ್ಯ ಶಿಕ್ಷಣವನ್ನು ವಾರಕ್ಕೊಂದು ಅವಧಿಯಲ್ಲಿ ಬೋಧಿಸುವುದಷ್ಟೇ ಅಲ್ಲ, ಸಂದರ್ಭಾನುಸಾರ ಶಿಕ್ಷಕರು ಮೌಲ್ಯಗಳನ್ನು ಬೋಧಿಸಬೇಕು. ವಿದ್ಯಾರ್ಥಿಗಳ ನಡುವೆ ನಡೆಯುವ ಜಗಳ, ಹೊಡೆದಾಟ, ಕದಿಯುವುದು, ಶಾಲೆಗೆ ತಡವಾಗಿ ಬರುವಂತಹ ಸಂದರ್ಭಗಳನ್ನು ಬಳಸಿಕೊಂಡು ಮಕ್ಕಳನ್ನು ಚಿಂತನೆಗೆ ಹಚ್ಚಬೇಕು. ಅನೇಕ ಮಕ್ಕಳು ಅಪರೂಪದ ಉತ್ತಮ ಗುಣಗಳನ್ನು ಪ್ರದರ್ಶಿಸುವ ಪ್ರಸಂಗಗಳನ್ನು ಉದಾಹರಣೆಯಾಗಿ ತೆಗೆದುಕೊಂಡು, ವಿದ್ಯಾರ್ಥಿಗಳು ಆಲೋಚಿಸುವಂತೆ ಮಾಡಬೇಕು.

ವಿವಿಧ ವಿಷಯಗಳ ಬೋಧನೆಯ ನಡುವೆಯೂ ಮೌಲ್ಯ ಶಿಕ್ಷಣವನ್ನು ಬೋಧಿಸುವ ರೀತಿಯಲ್ಲಿ ಶಿಕ್ಷಕರಿಗೆ ತರಬೇತಿ ನೀಡಬೇಕು. ಉದಾಹರಣೆಗೆ, ಇತಿಹಾಸ ವಿಷಯದಲ್ಲಿ ವಿಶ್ವಯುದ್ಧದ ಪಾಠ ಮಾಡುವಾಗ, ಪ್ರಸ್ತುತ ಉಕ್ರೇನ್- ರಷ್ಯಾ ಯುದ್ಧದ ವಿಷಯವನ್ನೂ ಚರ್ಚಿಸಬಹುದು. ಆ ಮೂಲಕ, ಯುದ್ಧಗಳು ಮನುಕುಲಕ್ಕೆ ಅದರಲ್ಲೂ ಮಕ್ಕಳ ಭವಿಷ್ಯಕ್ಕೆ ಹೇಗೆ ಮಾರಕವಾಗುತ್ತವೆ ಎಂಬುದನ್ನು ವಿವರಿಸಬಹುದು. ವಿಜ್ಞಾನ ಬೋಧನೆಯಲ್ಲಿ ಬೆಳಕಿನ ವಕ್ರೀಭವನದ ಪಾಠ ಮಾಡುವಾಗ, ನೀರೊಳಗೆ ಇರುವ ಗಾಜಿನ ಕಡ್ಡಿ ಅಥವಾ ವಸ್ತು ಹೇಗೆ ಬಾಗಿದಂತೆ ಕಾಣುತ್ತದೆ ಎಂಬುದನ್ನು ಬಳಸಿಕೊಂಡು, ವಿಷಯಗಳು ಹೊರನೋಟಕ್ಕೆ ಕಾಣಿಸುವುದಕ್ಕಿಂತ ಎಷ್ಟು ಭಿನ್ನವಾಗಿರುತ್ತವೆ ಎಂಬುದನ್ನು ತಿಳಿಸಬಹುದು. ಅಂದರೆ, ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡಬೇಕು ಎಂಬಂತಹ ವಿಮರ್ಶಾತ್ಮಕ ಆಲೋಚನಾ ಶಕ್ತಿಯನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸಬಹುದು. ಹೀಗೆ, ಮಕ್ಕಳಿಗೆ ಮೌಲ್ಯ ಮತ್ತು ಜೀವನಕೌಶಲ ಕಲಿಸುವುದನ್ನು ಒಂದು ನಿರಂತರ ಪ್ರಕ್ರಿಯೆಯಾಗಿ ಪರಿಗಣಿಸಿ, ಅದರಲ್ಲಿ ಪೋಷಕರು ಹಾಗೂ ಸ್ಥಳೀಯ ಸಮುದಾಯಗಳನ್ನೂ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಅವಶ್ಯ.



ಧಾರವಾಡದ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ

ನೀವೂ ‘ವಿಧಿ’ ಬರೆಯಬಹುದು!

• ಬಿ.ಜೆ.ಧನ್ಯಪ್ರಸಾದ್

‘ನಮ್ಮ ಬದುಕಿನಲ್ಲಿ ನಡೆಯುವುದೆಲ್ಲವೂ ವಿಧಿಲಿಖಿತ’ ಎಂಬ ಮಾತಿದೆ. ಆದರೆ ಹೀನ ಕೃತ್ಯಗಳಿಗೆ ಸಂಬಂಧಿಸಿದ ಮಹತ್ವದ ಸುಳಿವುಗಳನ್ನು ದೃಢಪಡಿಸುವ ನಿಖರ ವರದಿ ಕೊಡುವ ಮೂಲಕ ಅಪರಾಧಿಗಳು, ವಂಚಕರ ‘ವಿಧಿ’ಯನ್ನು ನೀವೂ ಬರೆಯಬಹುದು!

ಹೌದು, ಅಪರಾಧ, ವಂಚನೆ, ಸೈಬರ್ ಕ್ರೈಮ್‌ನಂತಹ ಪ್ರಕರಣಗಳಲ್ಲಿ ದೊರಕುವ ಸಾಕ್ಷ್ಯಗಳ ಅಸಲಿತನವನ್ನು ವೈಜ್ಞಾನಿಕವಾಗಿ ಪತ್ತೆಹಚ್ಚುವುದಕ್ಕೆ ಸಂಬಂಧಿಸಿದ ವಿಧಿ ವಿಜ್ಞಾನ (ಫೊರೆನ್ಸಿಕ್ ಸೈನ್ಸ್) ಅಧ್ಯಯನವು ಅಂತಹದ್ದೊಂದು ಅವಕಾಶವನ್ನು ಯುವಜನರಿಗೆ ಒದಗಿಸಿಕೊಡುತ್ತದೆ.

ಧಾರವಾಡದ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಇದಕ್ಕೆ ಪೂರಕವಾಗುವಂತಹ ವಿವಿಧ ಕೋರ್ಸ್‌ಗಳು ಲಭ್ಯ ಇವೆ.

ರಾಜ್ಯದ ಈ ಏಕೈಕ ಫೊರೆನ್ಸಿಕ್ ವಿಶ್ವವಿದ್ಯಾಲಯದಲ್ಲಿ, ವಿಧಿ ವಿಜ್ಞಾನ ಮತ್ತು ಸೈಬರ್ ಸೆಕ್ಯೂರಿಟಿಗೆ ಸಂಬಂಧಿಸಿದಂತೆ ಬಿ.ಟೆಕ್–ಎಂ.ಟೆಕ್ ಹಾಗೂ ಬಿ.ಎಸ್ಸಿ–ಎಂ.ಎಸ್ಸಿ ಕೋರ್ಸ್‌ಗಳು ಇವೆ. ಇವೆರಡೂ 5 ವರ್ಷಗಳ ಇಂಟಗ್ರೇಟೆಡ್ ಕೋರ್ಸ್‌ಗಳು. ಪಿಯುಸಿಯನ್ನು ವಿಜ್ಞಾನ ವಿಷಯದಲ್ಲಿ ಪೂರೈಸಿದವರು ಇವುಗಳಿಗೆ ದಾಖಲಾಗಬಹುದು. ನ್ಯಾಷನಲ್ ಫೊರೆನ್ಸಿಕ್ ಅಡ್ಮಿಷನ್ ಟೆಸ್ಟ್ (ಎನ್‌ಎಫ್‌ಎಟಿ) ಮೂಲಕ ಪ್ರವೇಶ ಪ್ರಕ್ರಿಯೆ ನಡೆಯುತ್ತದೆ. ಪ್ರೊಫೆಷನಲ್ ಡಿಪ್ಲೊಮಾ ಇನ್ ಕ್ರೈಂ ಸೀನ್ ಮ್ಯಾನೇಜ್‌ಮೆಂಟ್ ಎಂಬ ಆರು ತಿಂಗಳ ಕೋರ್ಸ್ ಸಹ ಇದೆ. ಪದವಿಯಲ್ಲಿ ವಿಜ್ಞಾನವನ್ನು ಓದಿದವರು ಇದಕ್ಕೆ ದಾಖಲಾಗಬಹುದು.

ಪೊಲೀಸ್, ಸಿಬಿಐ, ಸಿಐಡಿ ತನಿಖೆ, ನ್ಯಾಯಾಂಗ ವಿಚಾರಣೆಯಂತಹ ಕ್ಷೇತ್ರಗಳಲ್ಲಿ ಫೊರೆನ್ಸಿಕ್ ಪರೀಕ್ಷೆ ಅತ್ಯಂತ ಮಹತ್ವ ಪಡೆದಿದೆ. ವೈಜ್ಞಾನಿಕವಾಗಿ, ಕರಾರುವಾಕ್ಕಾಗಿ ಪರೀಕ್ಷಿಸಿ ನೈಜತೆಯನ್ನು ತಿಳಿಸುವ ವಿಜ್ಞಾನ ಎಂಬ ಹೆಸರು ಇದಕ್ಕಿದೆ.

‘ತಂತ್ರಜ್ಞಾನದ ಈ ಯುಗದಲ್ಲಿ ಫೊರೆನ್ಸಿಕ್ ಸೈನ್ಸ್ ಬಹಳಷ್ಟು ಪ್ರಾಮುಖ್ಯ ಪಡೆದಿದೆ. ನಮ್ಮ ಕೋರ್ಸ್‌ಗಳಲ್ಲಿ ಫೊರೆನ್ಸಿಕ್ ಭೌತವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ, ಸೈಬರ್ ಸೆಕ್ಯೂರಿಟಿ, ಬಿಹೇವಿಯರಲ್ ಸೈನ್ಸ್‌ನಂತಹ ವಿಷಯಗಳನ್ನು ಕಲಿಸಲಾಗುತ್ತದೆ. ಫೊರೆನ್ಸಿಕ್ ಸೈನ್ಸ್ ಕೋರ್ಸ್ ಮುಗಿಸಿದವರಿಗೆ ಕೇಂದ್ರ, ರಾಜ್ಯ ಮತ್ತು ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯಗಳು, ಸಿಐಡಿ ವಿಭಾಗ, ಬೆರಳಚ್ಚು ವಿಭಾಗ, ಸಿಇಎನ್ (ಸೈಬರ್ ಕ್ರೈಂ, ಆರ್ಥಿಕ ಅಪರಾಧ ಮತ್ತು ಮಾದಕದ್ರವ್ಯ) ಪೊಲೀಸ್ ವಿಭಾಗ, ಮೈಕ್ರೊಸಾಫ್ಟ್, ಗೂಗಲ್, ಅಮೆಜಾನ್‌ನಂತಹ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳು ಇವೆ’ ಎಂದು ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ. ಮಂಜುನಾಥ ಘಾಟೆ ವಿವರಿಸುತ್ತಾರೆ.

‘ವಿದ್ಯಾಕಾಶಿ’ ಎಂದು ಕರೆಸಿಕೊಳ್ಳುವ ನಗರದಲ್ಲಿ 2023ರಲ್ಲಿ ಈ ವಿಶ್ವವಿದ್ಯಾಲಯವನ್ನು ಆರಂಭಿಸಲಾಗಿದೆ.

> **ವಿಧಿ ವಿಜ್ಞಾನ ವಿಷಯದ ಕಲಿಕೆಗೆ ವಿವಿಧ ಕೋರ್ಸ್‌ಗಳಿವೆ ಎಂಬುದೇ ಬಹಳಷ್ಟು ಜನರಿಗೆ ಗೊತ್ತಿಲ್ಲ. ಈ ಕೋರ್ಸ್‌ಗಳು ಚೆನ್ನಾಗಿವೆ. ಇವಕ್ಕೆ ಒಳ್ಳೆಯ ಸ್ಕೋಪ್ ಇದೆ. ವಿಷಯಗಳು ಆಸಕ್ತಿ ಮೂಡಿಸುತ್ತವೆ.**
> **ಪ್ರಗತಿ,** ವಿದ್ಯಾರ್ಥಿನಿ, ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ



> **ವಿಧಿವಿಜ್ಞಾನ ಕೋರ್ಸ್‌ಗೆ ಬೇಡಿಕೆ ಇದೆ. ಇಲ್ಲಿಗೆ ದಾಖಲಾಗಲು ವಿದ್ಯಾರ್ಥಿಗಳು ಆಸಕ್ತಿ ತೋರುತ್ತಿದ್ದಾರೆ. ಈ ಕೋರ್ಸ್ ಪೂರೈಸಿದವರಿಗೆ ವಿವಿಧ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳಿವೆ.**
> **ಪ್ರೊ. ಮಂಜುನಾಥ ಘಾಟೆ,** ನಿರ್ದೇಶಕ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ

ವಿದ್ಯಾರ್ಥಿ ವೇತನ ಕೈಪಿಡಿ

ನೆಕ್ಸ್ಟ್‌ಜೆನ್ ಎಜು ಸ್ಕಾಲರ್‌ಶಿಪ್

11ನೇ ತರಗತಿ ವಿದ್ಯಾರ್ಥಿಗಳಿಗೆ ಇ.ವೈ. ಗ್ಲೋಬಲ್ ಡೆಲಿವರಿ ಸರ್ವೀಸಸ್ ಆರ್ಥಿಕ ನೆರವು ನೀಡಲಿದೆ.

ಅರ್ಹತೆ: ದೇಶದ ಯಾವುದೇ ಸರ್ಕಾರಿ ಅಥವಾ ಖಾಸಗಿ ಕಾಲೇಜಿನಲ್ಲಿ ಪ್ರಸ್ತುತ 11ನೇ ತರಗತಿಗೆ ದಾಖಲಾಗಿರುವ ವಿದ್ಯಾರ್ಥಿಗಳು ಅರ್ಹರು. 10ನೇ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ಒಟ್ಟು ಆದಾಯವು ವಾರ್ಷಿಕ ₹ 3 ಲಕ್ಷ ಮೀರಿರಬಾರದು. ಕರ್ನಾಟಕ, ದೆಹಲಿ ಎನ್‌ಸಿಆರ್, ಮಹಾರಾಷ್ಟ್ರ, ತೆಲಂಗಾಣ, ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡಿನ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಹೆಣ್ಣುಮಕ್ಕಳು, ಏಕ ಪೋಷಕರ ಮಕ್ಕಳು, ಲೈಂಗಿಕ ಅಲ್ಪಸಂಖ್ಯಾತರು, ಅನಾಥರು ಮತ್ತು ಅಂಗವಿಕಲರಿಗೆ ಆದ್ಯತೆ ನೀಡಲಾಗುವುದು. Buddy4Study ಮತ್ತು ಇ.ವೈ. ಗ್ಲೋಬಲ್ ಡೆಲಿವರಿ ಸರ್ವೀಸಸ್‌ನ ನೌಕರರ ಮಕ್ಕಳಿಗೆ ಅನ್ವಯವಾಗುವುದಿಲ್ಲ.

ಆರ್ಥಿಕ ಸಹಾಯ: 10ನೇ ತರಗತಿಯ ನಂತರ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ₹ 15,000 ನೆರವು.
ಅರ್ಜಿ ಸಲ್ಲಿಸಲು ಕೊನೇ ದಿನ: 10-09-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/EYGDS11

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH
Prose

Gentleman of Rio en Medio

Share your Responses:

Refer to Text(Part-I) Page No. 52:

1. ***Fill in the blanks/choose the most appropriate answer***

3.Don Anselmo inherited the house from his ______.

Ans: mother.

4.According to Don Anselmo, the real owners of the trees were ______

a. the children of Rio en Medio
b. Don Anselmo himself
c. The Americans
d. the storyteller
e. Don Anselmo's ancestors

Ans: a. the children of Rio en Medio

5. Don Anselmo did not sell the trees. Why do you think he did not? Tick the correct ones.

a. Trees were like children to him
b. They were grown for the children of the next generation
c. He thought they did not belong to him but to the children
d. He had grown them in memory of his ancestorse
e. He wanted his surroundings to be green

Ans: (c). He thought they did not belong to him but to the children

Think About The Text

1.**Don Anselmo's appearance and manners were quite unusual. How would you support thisstatement based on the text ?**

Ans: Don Anselmo wore the long, old, faded coat. He wore tom gloves and carried a woman out Umbrella's skeleton as a stick. A dark young hoy always followed him Though he was an oldman, he bowed to all and removed his hat and gloves slowly and carefully." The manner ofremoving is also similar to that of Charlie Chaplin. By all these factors we could say hisappearance and manners were quite unusual.

2. Whose argument do you agree with? Don Anselmo's or the storytellers? Give reasons.

Ans:We agree with Don Anselmo's argument when he sold his property. Though it is unusual and far way from reality, according to him it was correct. He was a man of principles, he thought that it was right to stand on his words. So he refused to take more than the amount agreed upon. In the second incident also he was right because the tree was planted in the name of new born child. All the trees belong to children only. He had no right to sell them though it is unusual. But here the story teller's saying is in vogue.

3. Don Anselmo was passionate about his land and the children of Rio en Medio. Which details in the text support this statement? Write to them.

Ans: Don Anselmo was very much passionate about his land and the children. His land had come from his ancestors. He lived in that land from his birth. He took possession of his house from his mother. Everyone in the village were his relatives and the children are his nieces, nephews and grand children. Every time a child has been bom in Rio en Medio, a tree was planted in its name.

1. Don Anselmo's reaction to the offer of more money was not expected. justify this statement.

Ans: Usually any person get offer for more money he would accepted. But Don Anselmo's reaction was not at all expected. Though it is a fair offer, after surveying, the land rate was double. Double the land, double the money. But once he agreed to sell his land for twelve hundred dollars, he should stick on his words. It was not expected.

2. Read paragraph 5 and identify the tone or reaction of the old man while uttering the following word/words. Some examples are given.

– You may use any other appropriatly (Mild / harsh /blunt /authoritative / self-assertive/ confident/comfortable /polite / aggressive)

The old man		Tone / reaction
a) Friend	–	…………
b) I do not like	–	……………
c) I know these	–	……………
d) I do not care to be	–	………………
e) That is the price	–	……………

Answer:

The old man		Tone / reaction
a) Friend	–	Comfortable
b) I do not like	–	harsh
c) I know these	–	confident
d) I do not care to be	–	aggressive
e) That is the price	–	authoritative

6. Why do you think the Americans wanted to buy Don Anselmo's land?

Ans: In the given prose, the reason was not mentioned. Generally we can think that the land and orchard was good, beautiful and fruitful. A stream was running through the orchard. The trees had more fruits. The land was fertile and big. So Americans wanted to buy DonAnselmo's land.

7. Don Anselmound the Americans were generous in their own ways. Comment on this.

Ans: Don Anselmo was generous. He refused to accept more money for his property. He loved children and planted a tree for every child. Americans were generous, they won't quarrel with the old man though they had legal right to own the trees.


(Contd……)

Biology

PRINCIPLES OF INHERITANCE AND VARIATION

39. When a cross is made between hybrid tall plant with yellow seeds (TtYy) and tall plant with green seed (Ttyy), what proportions of phenotype in offspring could be expected to be (a) tall and green (b) dwarf and green.

Ans:-




Tall Green —— 3/8 or 6/16
Dwarf Green —— 1/8 or 2/16

40. A child has blood group O. If the father has blood group A and mother has blood group B, work out the genotypes of parent and the possible genotypes of other offspring.

Ans:- Blood group **O** is a recessive trait which can appear only when two recessive alleles come together. $I^O\ I^O$ or *ii,* Therefore, a child can have blood group **O** only when each parent contributes an I^O allele. For this the father with blood group A must be heterozygous, $I^A\ I^O$ while the mother should be heterozygous B, $I^B\ I^O$.

Genotype of the offspring (also other than **O**) can be known from the following checker board.



Other offspring can have A, B or AB blood groups.

41. What is point mutation? Give one example.

Ans:- Point Mutation - is a gene mutation that occurs due to change in a single base pair of DNA. It may result in incorporation of different amino acid in the polypeptide, e.g., valine instead of glutamic acid in b-peptide in sickle cell anaemia.

42. Who had proposed the chromosomal theory of inheritance?

Ans:- Sutton and Boveri (1902).

43. Which Mendel's law of inheritance is universally acceptable and without any exception. State the law.

Ans:- Law of segregation - According to law of segregation, the two factors or alleles of a character present in an individual do not get mixed up but remain distinct and separate from each other at the time of gamete formation so that a gamete carries a single factor and is always pure for it.

44. What is a dominant gene?

Ans:- Dominant gene is the one which expresses itself by suppressing the expression of its counterpart. E.g., the gene for tallness is expressed suppressing the gene for dwarfness. This is conventionally represented as 'T'.

45. What is a recessive gene?

Ans:- Recessive gene is the one, which is not expressed in the presence of the dominant gene. E.g., the gene for dwarfness is expressed only in the absence of the dominant gene for tallness. This is conventionally represented as 't'.

46. Which are the different types of crossing over?

Ans:- The different types of crossing over are – single cross-over, double cross-over and multiple cross-over.

47. What is meant by Sex linked inheritance in humans?

Ans:- The inheritance of the body characters controlled by genes present on the sex chromosomes is known as sex-linked inheritance.

48. Give some examples for Sex linked inheritance.

Ans:- Inheritance of eye colour in Drosophila, inheritance of colour blindness and haemophilia in human beings are some of the good examples for sex linked inheritance.

49. State the law of Segregation.

Ans:- The law of Segregation states that when a pair of contrasting factors or allelomorphs or genes are brought together in a hybrid (heterozygote), these factors do not blend or mix-up but simply associate themselves and remain together and separate at the time of gamete formation.

50. Explain the law of segregation briefly?

Ans:- Alleles with respect to a pair of characters remain associated in pairs in all the cells of an organism. But during gamete formation the factors undergo separation or segregation.

51. Give an example for the law of segregation?

Ans:- An example for the law of segregation is -

(Contd…..)

ಚಿಟಿಕೆ ಸುದ್ದಿ

'ಇಚ್ಛಾಶಕ್ತಿ ಇದ್ದರೆ ಹಣ ಕೊಡಿಸಲಿ'

ಬೆಂಗಳೂರು: 'ಬಿಜೆಪಿಯವರಿಗೆ ರಾಜಕೀಯ ಇಚ್ಛಾಶಕ್ತಿ ಇದ್ದರೆ ಭದ್ರಾ ಮೇಲ್ದಂಡೆ ಯೋಜನೆ, ಬೆಂಗಳೂರು ಅಭಿವೃದ್ಧಿಗೆ ಹಣ ಕೊಡಿಸಲಿ. ಮೇಕೆದಾಟು, ಮಹದಾಯಿ ಯೋಜನೆಗೆ ಅನುಮತಿ ಕೊಡಿಸಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಜೆಪಿ ಹಮ್ಮಿಕೊಂಡಿರುವ ಧರ್ಮಸ್ಥಳ ಯಾತ್ರೆಯ ಬಗ್ಗೆ ಮಾತನಾಡಿದ ಅವರು, 'ಧರ್ಮಸ್ಥಳ ಬದಲು ದೆಹಲಿಯಲ್ಲಿ ಹೋರಾಟ ಮಾಡಲಿ' ಎಂದರು.

'ಬಿಜೆಪಿಯವರು ಧರ್ಮಸ್ಥಳಕ್ಕೆ ಹೋಗಿ ತಮ್ಮ ವೈಯಕ್ತಿಕ ಲಾಭಕ್ಕೆ ಪ್ರಾರ್ಥನೆ ಮಾಡಿಕೊಂಡು ಬರುತ್ತಾರೆಯೇ ಹೊರತು ಬೇರೇನೂ ಇಲ್ಲ. ಅವರ ಹೋರಾಟ ಧರ್ಮಸ್ಥಳದಲ್ಲಿ ಅಲ್ಲ, ಎಲ್ಲ ಸಂಸದರು, ಶಾಸಕರನ್ನು ಕರೆದುಕೊಂಡು ಹೋಗಿ ದೆಹಲಿಯಲ್ಲಿ ಮಾಡಬೇಕು. ರಾಜ್ಯಕ್ಕೆ ಅನುದಾನ ತರಬೇಕು' ಎಂದರು.

₹2 ಕೋಟಿ ಮೌಲ್ಯದ ಗುಟ್ಕಾ ಜಪ್ತಿ; ಬಂಧನ

ಬೀದರ್: ಜಿಲ್ಲಾ ಪೊಲೀಸರು ಎರಡು ಪ್ರತ್ಯೇಕ ಸ್ಥಳಗಳಲ್ಲಿ, ₹ 2.19 ಕೋಟಿ ಮೌಲ್ಯದ ಅಕ್ರಮ ಗುಟ್ಕಾ, ಪಾನ್ ಮಸಾಲ, ಕಚ್ಚಾ ತಂಬಾಕು ಪದಾರ್ಥ ಜಪ್ತಿ ಮಾಡಿ, ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ. ಹೈದರಾಬಾದ್‌ನ ತನ್ವೀರ್ ಮುಖ್ಯ ಆರೋಪಿ. ಬೀದರ್‌ನ ಇಬ್ಬರು, ಮಣಿಪುರದ ಐವರು ಬಂಧಿತರಲ್ಲಿ ಸೇರಿದ್ದಾರೆ. ಮಣಿಪುರದ ಇನ್ನಿಬ್ಬರು, ಬೀದರ್‌ನ ಒಬ್ಬ ಆರೋಪಿಗೆ ಹುಡುಕಾಟ ನಡೆಸಲಾಗುತ್ತಿದೆ.

'ಅಲೆಮಾರಿಗಳಿಗೆ ಅನ್ಯಾಯ'

ಕೆಲ ಸಚಿವರ ಹಟದಿಂದ ಪ್ರತ್ಯೇಕ ಮೀಸಲಾತಿ ಕೈತಪ್ಪಿಹೋಯಿತು: ಎಚ್.ಆಂಜನೇಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳಮೀಸಲಾತಿ ಹಂಚಿಕೆಯಲ್ಲಿ ಅಲೆಮಾರಿ ಸಮುದಾಯಗಳಿಗೆ ಅನ್ಯಾಯವಾಗಿರುವುದು ನಿಜ. ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದೇನೆ. ಅಲೆಮಾರಿ ಸಮುದಾಯದವರು ನಡೆಸುವ ಹೋರಾಟಕ್ಕೆ ಮಾದಿಗರು ಜತೆಯಾಗಿ ನಿಲ್ಲಲಿದ್ದಾರೆ' ಎಂದು ಮಾಜಿ ಸಚಿವ ಎಚ್.ಆಂಜನೇಯ ಅಭಿಪ್ರಾಯಪಟ್ಟರು.

ಕರ್ನಾಟಕ ಮಾದಿಗ ಅಧಿಕಾರಿ ಮತ್ತು ನೌಕರರ ಸಮನ್ವಯ ಸಮಿತಿಯು ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ, 'ಒಳ ಮೀಸಲಾತಿ–ಮುಂದಿನ ಹೆಜ್ಜೆಗಳು' ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

'ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅಧ್ಯಕ್ಷತೆಯ ವಿಚಾರಣಾ ಆಯೋಗವು ಅತ್ಯಂತ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿತು. ಅಲೆಮಾರಿ ಸಮುದಾಯಗಳು ಅತ್ಯಂತ ಹಿಂದುಳಿದಿರುವ ಕಾರಣ, ಅವರಿಗೆ ಪ್ರತ್ಯೇಕ ಮೀಸಲಾತಿ ನೀಡುವಂತೆ ಆಯೋಗವು ಶಿಫಾರಸು ಮಾಡಿತ್ತು. ಆದರೆ, ರಾಜ್ಯ ಸಚಿವ ಸಂಪುಟದಲ್ಲಿನ ಕೆಲ ಸಚಿವರ ಹಟದಿಂದಾಗಿ ಅಲೆಮಾರಿಗಳಿಗೆ ಪ್ರತ್ಯೇಕ ಮೀಸಲಾತಿ ದೊರಕದೇ ಹೋಯಿತು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

> **ಬಡ್ತಿಯಲ್ಲೂ ಒಳಮೀಸಲಾತಿ ತರಬೇಕು ಎಂದು ಬೇಡಿಕೆ ಇಟ್ಟಿದ್ದೆ. ಆ ವಿಚಾರವನ್ನು ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ**
> **ಕೆ.ಎಚ್.ಮುನಿಯಪ್ಪ,** ಸಚಿವ

'ಮಾದಿಗ ಮೀಸಲಾತಿಗಾಗಿ ನಡೆದ 35 ವರ್ಷಗಳ ಹೋರಾಟದಲ್ಲಿ ಅಲೆಮಾರಿ ಸಮುದಾಯದ ಜನರು ನಮ್ಮೊಡನೆ ನಿಂತಿದ್ದರು. ಅವರನ್ನು ಮಾದಿಗರು ಬಳಸಿಕೊಂಡು, ಈಗ ಕೈಬಿಟ್ಟಿದ್ದಾರೆ ಎಂದು ಹಲವರು ದೂರುತ್ತಿದ್ದಾರೆ. ಆದರೆ, ಅದು ನಿಜವಲ್ಲ. ಅವರಿಗಾಗಿರುವ ಅನ್ಯಾಯವನ್ನು ಸರಿಪಡಿಸಲಿಕ್ಕೆ ನಾನು ಹೋರಾಡುತ್ತಿದ್ದೇನೆ' ಎಂದರು.

ಆಂಜನೇಯ ಅವರ ಮಾತಿನ ಮಧ್ಯೆ ಅವರ ಬೆಂಬಲಿಗರು, 'ಕಾಂಗ್ರೆಸ್ ನಿಮಗೆ ವಿಧಾನ ಪರಿಷತ್ ಸದಸ್ಯತ್ವ ನೀಡಲಿ' ಎಂದು ಘೋಷಣೆ ಕೂಗಿದರು. ಅದಕ್ಕೆ ಪ್ರತಿಕ್ರಿಯಿಸಿದ ಅವರು, 'ಇದು ನೀವು ನನಗೆ ಮಾಡುವ ಅವಮಾನ. ಸರ್ಕಾರ ಅದನ್ನೆಲ್ಲಾ ಕೊಟ್ಟರೆ ಕೊಡಲಿ, ಇಲ್ಲದಿದ್ದರೆ ಬಿಡಲಿ. ಸಿದ್ದರಾಮಯ್ಯ ಅವರು ಒಳಮೀಸಲಾತಿ ಕೊಟ್ಟರಲ್ಲ, ಅಷ್ಟು ಸಾಕು' ಎಂದರು.



'ಒಳ ಮೀಸಲಾತಿ–ಮುಂದಿನ ಹೆಜ್ಜೆಗಳು' ಸಮಾಲೋಚನಾ ಸಭೆಯಲ್ಲಿ ಕೆ.ಎಚ್. ಮುನಿಯಪ್ಪ ಮತ್ತು ಎಚ್. ಆಂಜನೇಯ ಚರ್ಚಿಸಿದರು. ಗೋನಾಳ ಭೀಮಪ್ಪ, ಎಲ್. ಹನುಮಂತಯ್ಯ ಮತ್ತು ಬಿ.ಎನ್. ಚಂದ್ರಪ್ಪ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಜಾತಿ ಪ್ರಮಾಣ ಪತ್ರ ಸರಿಪಡಿಸಿಕೊಳ್ಳಿ'

'ಸಮೀಕ್ಷೆ ವೇಳೆ ನಮ್ಮ ಸಮುದಾಯದವರು ಸರಿಯಾಗಿ ಜಾತಿಯನ್ನು ಬರೆಸಿಲ್ಲ. ಅದನ್ನು ಸರಿಪಡಿಸಿಕೊಳ್ಳಬೇಕು. ಆಗ ಮಾತ್ರ ಮೀಸಲಾತಿಯನ್ನು ಸರಿಯಾಗಿ ಪಡೆಯಲು ಸಾಧ್ಯ' ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

'ಒಳಮೀಸಲಾತಿ ಅಡಿಯಲ್ಲಿ ನಿಮಗೆ ಸರಿಯಾದ ಮೀಸಲಾತಿ ದೊರೆಯಬೇಕು ಎಂದರೆ, ನಿಮ್ಮ ನಿಜವಾದ ಜಾತಿಯ ಹೆಸರಿನಲ್ಲೇ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳಬೇಕು. ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿರುವವರು, ಅದನ್ನು 'ಮಾದಿಗ' ಎಂದು ಬದಲಿಸಿಕೊಳ್ಳಬೇಕು' ಎಂದು ಎಚ್.ಆಂಜನೇಯ ಕರೆ ನೀಡಿದರು.

'ಒಳಮೀಸಲಾತಿ ದೊರೆಯುತ್ತದೆ ಎಂಬ ಕಾರಣಕ್ಕೆ ಕೆಲವು ಪ್ರಬಲ ಜಾತಿಗಳ ಜನರು ಮಾದಿಗ ಎಂದು ಜಾತಿ ಪ್ರಮಾಣ ಪತ್ರ ಪಡೆದುಕೊಂಡು, ನಿಮ್ಮ ಹಕ್ಕನ್ನು ಕಸಿದುಕೊಳ್ಳುವ ಅಪಾಯವಿದೆ. ಹೀಗಾಗಿ ಜಾತಿ ಹೆಸರು ಬದಲಾವಣೆ ಸಂದರ್ಭದಲ್ಲಿ ಅರ್ಜಿದಾರರ ವಂಶವೃಕ್ಷ ಪಡೆದುಕೊಂಡು, ಅವರ ಪೂರ್ವಿಕರ ಜಾತಿ ಪ್ರಮಾಣ ಪತ್ರಗಳನ್ನೂ ಪರಿಶೀಲಿಸಬೇಕು ಎಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ' ಎಂದರು.

'ಶಾಶ್ವತ ಆಯೋಗ ತಕ್ಷಣ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಅಳೆದು ತೂಗಿ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆ ಮಾಡಿದೆ. ಈ ವರ್ಗೀಕರಣದ ವೇಳೆ ಆಗಿರುವ ಸಣ್ಣಪುಟ್ಟ ವ್ಯತ್ಯಾಸವನ್ನು ಸರಿಪಡಿಸಲು ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗವನ್ನು ರಾಜ್ಯ ಸರ್ಕಾರ ತಕ್ಷಣ ಸ್ಥಾಪನೆ ಮಾಡಬೇಕು' ಎಂದು ಅಲೆಮಾರಿಗಳ ವಿಮೋಚನಾ ದಿನಾಚರಣೆ ಕಾರ್ಯಕ್ರಮದಲ್ಲಿ ಆಗ್ರಹಿಸಲಾಯಿತು.

ಕರ್ನಾಟಕ ಬಂಜಾರ ಮಹಾಸಭಾ ರಾಜ್ಯ ಸಮಿತಿಯ ಸಹಯೋಗದಲ್ಲಿ ಪರಿಶಿಷ್ಟ ಜಾತಿ ವಿಮುಕ್ತ ಅಲೆಮಾರಿ ಸಮುದಾಯಗಳ ಒಕ್ಕೂಟವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ, ಪ್ರವರ್ಗ 'ಸಿ'ಯಲ್ಲಿ ಬರುವ ವಿವಿಧ ಸಮುದಾಯಗಳ ಮುಖಂಡರು ಪಾಲ್ಗೊಂಡಿದ್ದರು. ಈ ವೇಳೆ ಒಳ ಮೀಸಲಾತಿಯ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ, ಆರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಈ ನಿರ್ಣಯಗಳನ್ನು ವಕೀಲ ಎನ್. ಅನಂತನಾಯ್ಕ ಮಂಡಿಸಿದರು. ಇದಕ್ಕೆ ಸಭೆಯಲ್ಲಿದ್ದ ಮುಖಂಡರು ಸಹಮತ ಸೂಚಿಸಿದರು.

'ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಆಯೋಗ ಸಲ್ಲಿಸಿದ್ದ ವರದಿಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ, ತುಸು ಪರಿಷ್ಕರಣೆಯೊಂದಿಗೆ ಮೀಸಲಾತಿ ವರ್ಗೀಕರಣ ಮಾಡಲಾಗಿದೆ. ಈ ವರ್ಗೀಕರಣದ ವೇಳೆ ಲೋಪದೋಷ ಆಗಿದ್ದರೆ, ಅದನ್ನು ಸರಿಪಡಿಸುವ ಕೆಲಸವನ್ನು ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ ಮಾಡಬೇಕು' ಎಂದು ಆಗ್ರಹಿಸಿದರು.

'ಪ್ರವರ್ಗ 'ಸಿ' ಅಡಿ ಬಂಜಾರ, ಭೋವಿ, ಕೊರಮ, ಕೊರಚ ಒಳಗೊಂಡು 50 ಕ್ಕೂ ಹೆಚ್ಚು ಸೂಕ್ಷ್ಮ, ಅತಿ ಸೂಕ್ಷ್ಮ ಜಾತಿಗಳನ್ನು ಸೇರಿಸಿ, ಶೇ 5ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ. ಸೂಕ್ಷ್ಮ ಸಮುದಾಯಗಳು 'ಸಿ' ಗುಂಪಿನಲ್ಲಿ ಇರಲು ಇಚ್ಛಿಸದಿದ್ದರೆ ಅವರಿಗೆ ಪ್ರತ್ಯೇಕ ಗುಂಪು ಮಾಡಿ, ಹೆಚ್ಚುವರಿ ಮೀಸಲಾತಿ ಹಂಚಿಕೆ ಮಾಡಬೇಕು' ಎಂದರು.

'ಅಲೆಮಾರಿ ಸಮುದಾಯಗಳ ಇತಿಹಾಸ, ಅಸ್ಮಿತೆ, ಘನತೆ ಮತ್ತು ಪ್ರಗತಿಯ ದೃಷ್ಟಿಯಿಂದ ಆಗಸ್ಟ್ 31 ರಂದು 'ಅಲೆಮಾರಿಗಳ ವಿಮೋಚನಾ ದಿನಾಚರಣೆ'ಯನ್ನು ವಿವಿಧ ರಾಜ್ಯ ಸರ್ಕಾರಗಳು ಆಚರಿಸುತ್ತಿವೆ. ಕರ್ನಾಟಕ ಸರ್ಕಾರ ಮುಂದಿನ ವರ್ಷ ಇದೇ ದಿನ ಅಧಿಕೃತವಾಗಿ 'ಅಲೆಮಾರಿಗಳ ವಿಮೋಚನಾ ದಿನಾಚರಣೆ' ಆಚರಿಸಬೇಕು' ಎಂದು ಆಗ್ರಹಿಸಿದರು. ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಕಾರ್ಯಕ್ರಮ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಪ್ರೊ. ಖಂಡೋಬ, ವೆಂಕಟೇಶ ವೂರ್ಸೆ, ಬಿ.ಟಿ. ಲಲಿತಾ ನಾಯಕ್, ರುದ್ರಪ್ಪ ಲಮಾಣಿ, ಶಿವರುದ್ರಯ್ಯ, ಎನ್. ಅನಂತನಾಯ್ಕ್ ಹಾಗೂ ಸುಭಾಷ್ ರಾಥೋಡ್ ಅವರು ಸಂವಿಧಾನ ಪೀಠಿಕೆ ವಾಚಿಸಿದರು ಪ್ರಜಾವಾಣಿ ಚಿತ್ರ

'ವಿಶೇಷ ಪ್ಯಾಕೇಜ್ ಘೋಷಿಸಿ'

'ವಿಮುಕ್ತ ಅಲೆಮಾರಿ ಸಮುದಾಯಗಳ ಶಿಕ್ಷಣ, ಉದ್ಯೋಗ ಮತ್ತು ಆರ್ಥಿಕ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ವಿಮುಕ್ತ ಅಲೆಮಾರಿಗಳ ಶಾಶ್ವತ ಆಯೋಗ ಸ್ಥಾಪನೆ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಈ ಸಮುದಾಯಗಳಿಗೆ ವಿಶೇಷ ಪ್ಯಾಕೇಜ್ ನೀಡಬೇಕು. ವೀರಶೈವ ಲಿಂಗಾಯತ ಜಂಗಮ ಸಮುದಾಯದವರು ಪರಿಶಿಷ್ಟ ಜಾತಿಯ ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ಪಡೆದಿದ್ದಾರೆ. ಪರಿಶಿಷ್ಟರ ಸೌಲಭ್ಯಗಳನ್ನು ಕಬಳಿಸುತ್ತಿದ್ದಾರೆ. ಅಂತಹವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಅವರ ಜಾತಿ ಪ್ರಮಾಣಪತ್ರ ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದೂ ಸಭೆಯಲ್ಲಿ ಒತ್ತಾಯಿಸಲಾಯಿತು.

ಅಯ್ಯಪ್ಪ ಸಂಗಮ: ಸ್ವಾಗತ

ತಿರುವನಂತಪುರ (ಪಿಟಿಐ): ತಿರುವಾಂಕೂರು ದೇವಸ್ವಂ ಮಂಡಳಿಯು (ಟಿಡಿಬಿ) ಜಾಗತಿಕ ಅಯ್ಯಪ್ಪ ಸಂಗಮ ನಡೆಸಲು ಸಜ್ಜಾಗಿರುವುದನ್ನು ಎಸ್‌ಎನ್‌ಡಿಪಿ ಸ್ವಾಗತಿಸಿದೆ.

ಜಗತ್ತಿನಾದ್ಯಂತ ಇರುವ ಅಯ್ಯಪ್ಪನ ಭಕ್ತರು ರಾಜ್ಯಕ್ಕೆ ಭೇಟಿ ನೀಡಲು ಟಿಡಿಬಿಯ ಈ ಕಾರ್ಯಕ್ರಮವು ದಾರಿ ಮಾಡಿಕೊಡಲಿದೆ ಎಂದು ಈಳವ ಸಮುದಾಯದ ಶ್ರೀ ನಾರಾಯಣ ಧರ್ಮ ಪರಿಪಾಲನಾ (ಎಸ್‌ಎನ್‌ಡಿಪಿ) ಯೋಗಂ ಭಾನುವಾರ ತಿಳಿಸಿದೆ.

ಅಯ್ಯಪ್ಪ ಸಂಗಮವು ರಾಜ್ಯದ ಸಾಮಾಜಿಕ– ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸಲಿದೆ ಎಂದು ನಿರೀಕ್ಷಿಸಲಾಗಿದೆ.

ಕೇರಳ ಸರ್ಕಾರದ ಸಹಯೋಗದೊಂದಿಗೆ ಟಿಡಿಬಿಯು ತನ್ನ 75ನೇ ವಾರ್ಷಿಕೋತ್ಸವದ ಅಂಗವಾಗಿ ಪಂಪಾದಲ್ಲಿ ಸೆಪ್ಟೆಂಬರ್ 20ರಂದು ಜಾಗತಿಕ ಅಯ್ಯಪ್ಪ ಸಂಗಮವನ್ನು ಆಯೋಜಿಸಿದೆ.

ಈ ಕಾರ್ಯಕ್ರಮವನ್ನು ರಾಜ್ಯ ಬಿಜೆಪಿ ಟೀಕಿಸಿದೆ.

ಮಿಜೋರಾಂ: ಚಂಫೈನಲ್ಲಿ ಶಸ್ತ್ರಾಸ್ತ್ರ ವಶ

ಐಜ್ವಾಲ್ (ಪಿಟಿಐ): ಮಿಜೋರಾಂನ ಚಂಫೈ ಜಿಲ್ಲೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳನ್ನು ಅಸ್ಸಾಂ ರೈಫಲ್ಸ್ ವಶಪಡಿಸಿಕೊಂಡಿದೆ.

ಖಚಿತ ಮಾಹಿತಿ ಮೇರೆಗೆ ಸೈಕುಂಫೈ ಗ್ರಾಮದಲ್ಲಿ ಆಗಸ್ಟ್ 29ರಂದು ನಡೆಸಿದ ಶೋಧದಲ್ಲಿ ತಲಾ ಒಂದು 12–ಬೋರ್ ರೈಫಲ್, ಪಿಸ್ತೂಲ್, ಮದ್ದುಗುಂಡುಗಳು ಹಾಗೂ ಸ್ಫೋಟಕಗಳನ್ನು ಮನೆಯೊಂದರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅರೆಸೇನಾ ಪಡೆಯು ಭಾನುವಾರ ತಿಳಿಸಿದೆ.

ಮನೆಯ ಸಮೀಪದ ಕಾಡಿನಲ್ಲೂ ಸೇನಾಪಡೆಯು ಶೋಧ ನಡೆಸಿದ್ದು, ಬೃಹತ್ ಪ್ರಮಾಣದಲ್ಲಿ ಶಸ್ತ್ರಾಸ್ತ್ರ, ಮದ್ದುಗುಂಡು ಹಾಗೂ ಸ್ಫೋಟಕಗಳನ್ನು ಅಡಗಿಸಿಟ್ಟಿದ್ದ ರಹಸ್ಯ ಸ್ಥಳವನ್ನು ಪತ್ತೆಹಚ್ಚಲಾಗಿದೆ ಎಂದಿದೆ.

ಅರಸು ಅಸೋಸಿಯೇಷನ್ ಸುವರ್ಣ ಮಹೋತ್ಸವದಲ್ಲಿ ಡಿಕೆಶಿ

'ಮೀಸಲಾತಿ, ನಿವೇಶನ ನೀಡಲು ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿ ಸೇರಿದಂತೆ ಇತರೆ ಅನುಕೂಲಗಳನ್ನು ಕಲ್ಪಿಸಬೇಕೆಂಬ ಅರಸು ಸಮುದಾಯದ ಮುಖಂಡರ ಬೇಡಿಕೆಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಅರಸು ಅಸೋಸಿಯೇಷನ್‌ನ ಸುವರ್ಣ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಸಮುದಾಯದ ಪ್ರಮುಖರು ಮತ್ತು ರಾಜ ವಂಶಸ್ಥರ ಜೊತೆ ಚರ್ಚಿಸಿ, ಬೇಡಿಕೆ ಈಡೇರಿಸುವ ಕೆಲಸ ಮಾಡಲಾಗುವುದು' ಎಂದೂ ಆಶ್ವಾಸನೆ ನೀಡಿದರು.

'ಮನುಷ್ಯ ಧರ್ಮವನ್ನು ಮೂಲವಾಗಿ ಇಟ್ಟುಕೊಂಡು ಮೈಸೂರು ಅರಸರು ಹಾಗೂ ಅವರ ವಂಶಸ್ಥರು ಈ ರಾಜ್ಯದ ಜನರ ಸೇವೆ ಮಾಡಿದ್ದಾರೆ.



ಮೀಸಲಾತಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅರಸು ಸಮುದಾಯದ ಮುಖಂಡರು ಮನವಿ ಸಲ್ಲಿಸಿದರು

ಜಾತ್ಯತೀತ, ಧರ್ಮಾತೀತವಾಗಿ ಕರ್ನಾಟಕವನ್ನು ಕಟ್ಟಿದ ಇತಿಹಾಸ ಅರಸು ಸಮುದಾಯದ್ದು. ನಾಲ್ವಡಿ ಕೃಷ್ಣರಾಜ ಒಡೆಯರ್, ಕೆಂಪರಾಜಮ್ಮಣ್ಣಿ, ಜಯಚಾಮರಾಜೇಂದ್ರ ಒಡೆಯರ್ ಹೀಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ' ಎಂದು ಬಣ್ಣಿಸಿದರು.

'ಮೈಸೂರು ಮಹಾರಾಜರು ಯಾವ ಧರ್ಮದಲ್ಲಿ ನಡೆಯಬೇಕು, ಯಾವ ಧರ್ಮವನ್ನು ಉಳಿಸಿಕೊಳ್ಳಬೇಕು ಎಂದು ಯಾವತ್ತೂ ಮಾತನಾಡಲಿಲ್ಲ. ವಿದ್ಯುತ್ ಉತ್ಪಾದನೆ ಸೇರಿದಂತೆ ರಾಜ್ಯದ ಪ್ರಮುಖ ಸಂಸ್ಥೆಗಳ ಸ್ಥಾಪನೆಗೆ ಅಡಿಪಾಯ ಹಾಕಿಕೊಟ್ಟವರು ಮೈಸೂರಿನ ಒಡೆಯರು. ಅವರು ನೆಟ್ಟಿರುವ ಮರದ ಫಲವನ್ನು ನಾವೆಲ್ಲರೂ ತಿನ್ನುತ್ತಿದ್ದೇವೆ' ಎಂದರು.

'ದೇವರಾಜ ಅರಸು ಅವರಿಗೆ ಜಾತಿ ಇರಲಿಲ್ಲ. ಆದರೆ, ನಾಯಕತ್ವದ ಗುಣವಿತ್ತು. ಆ ಗುಣ ಅವರನ್ನು ದೊಡ್ಡ ಮಟ್ಟಕ್ಕೆ ಬೆಳೆಸಿತು. ಹಿಂದುಳಿದ ಹಾಗೂ ಮೇಲ್ವರ್ಗದ ಎಲ್ಲ ರಾಜಕಾರಣಿಗಳನ್ನು ಬೆಳೆಸಿ ಭದ್ರ ಅಡಿಪಾಯ ಕೊಟ್ಟವರು ದೇವರಾಜ ಅರಸು' ಎಂದರು.

ಕಾಮಾಕ್ಷಿದೇವಿ, ಆತ್ಮಾನ್ಯ ದೇವ್, ಇಂದ್ರಾಕ್ಷಿ ದೇವಿ, ರಾಜಚಂದ್ರ ಅರಸ್, ಕಪ್ಪಡಿ ಕ್ಷೇತ್ರ ಮಂಟೇಸ್ವಾಮಿ ಮಠದ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ತಮಿಳುನಾಡು ದ್ರೋಣಗಿರಿ ಮಠದ ಅಶೋಕ ರಾಜೇಂದ್ರ ಸ್ವಾಮೀಜಿ, ರಾಜ್ಯ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಮತ್ತಿತರರು ಇದ್ದರು.

ಒಳಮೀಸಲಾತಿ ಹಂಚಿಕೆ ದೋಷಪೂರಿತ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಮಾಡಿರುವ ಒಳಮೀಸಲಾತಿ ಹಂಚಿಕೆಯು ದೋಷಪೂರಿತವಾಗಿದೆ. ಒಳಮೀಸಲಾತಿ ಸಂಬಂಧ ಸುಪ್ರೀಂ ಕೋರ್ಟ್ ತೀರ್ಪಿನ ಆಶಯಕ್ಕೆ ವಿರುದ್ಧವಾಗಿ ಸರ್ಕಾರ ನಡೆದುಕೊಂಡಿದೆ ಎಂದು ಕರ್ನಾಟಕ ಮಾದಿಗ ಮತ್ತು ಉಪಜಾತಿಗಳ ಒಳಮೀಸಲಾತಿ ಒಕ್ಕೂಟವು ಆಕ್ರೋಶ ವ್ಯಕ್ತಪಡಿಸಿದೆ.

ಒಕ್ಕೂಟವು ನಗರದ ಪುರಭವನದಲ್ಲಿ ಭಾನುವಾರ, 'ಒಳಮೀಸಲಾತಿ ನಂತರ ಮಾದಿಗರ ಮುಂದಿನ ನಡೆಯ ವಿಶೇಷ ಸಭೆ' ಆಯೋಜಿಸಿತ್ತು. ಸಂಸದರಾದ ಗೋವಿಂದ ಕಾರಜೋಳ, ರಮೇಶ ಜಿಗಜಿಣಗಿ, ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ, ಕೆ.ಬಿ. ಕೃಷ್ಣಮೂರ್ತಿ ಮತ್ತು ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗಿಯಾಗಿದ್ದರು.

ನಿಖರ ದತ್ತಾಂಶ ಮತ್ತು ಅಂತರ ಹಿಂದುಳಿದಿರುವಿಕೆಯನ್ನು ಮಾನದಂಡಗಳನ್ನು ಆಧರಿಸಿ ವರ್ಗೀಕರಣ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು. ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಆಯೋಗವೂ ಅದೇ ಆಧಾರದಲ್ಲಿ ಐದು ವರ್ಗೀಕರಣಗಳನ್ನು ಮಾಡಿ ಶಿಫಾರಸು ಮಾಡಿತ್ತು. ಸರ್ಕಾರವು ಅದನ್ನು ಕಡೆಗಣಿಸಿ, ತನ್ನಿಷ್ಟದಂತೆ ಒಳಮೀಸಲಾತಿ ಘೋಷಿಸಿದೆ. ಇದರ ವಿರುದ್ಧ ಹೋರಾಟ ನಡೆಸಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಆಯೋಗವು ಸಣ್ಣ ಜಾತಿಗಳಿಗೆ ಪ್ರತ್ಯೇಕ ಒಳಮೀಸಲಾತಿ ನೀಡಿ ಶಿಫಾರಸು ಮಾಡಿತ್ತು. ಆದರೆ ಸರ್ಕಾರವು ಪ್ರಬಲ ಜಾತಿಗಳ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ರಾಜಕೀಯ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ನಡೆಯಿಂದಾಗಿ ದುರ್ಬಲ ಜಾತಿಗಳ ಅವಕಾಶಗಳನ್ನು ಪ್ರಬಲ ಜಾತಿಗಳು ಕಿತ್ತುಕೊಳ್ಳುವಂತಾಗಿದೆ. ಇದನ್ನು ತಡೆಯಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಆಕರ್ಷಕ ನೃತ್ಯ

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ



ದಾವಣಗೆರೆಯ ಶಾಮನೂರಿನಲ್ಲಿ ಭಾನುವಾರ ಶ್ರೀ ವಿನಾಯಕ ಸ್ನೇಹ ಬಳಗ ಪ್ರತಿಷ್ಠಾಪಿಸಿದ್ದ ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳ ಆಕರ್ಷಕ ನೃತ್ಯ ಗಮನ ಸೆಳೆಯಿತು

'ಬೇಡಿಕೆ ಈಡೇರದ ಹೊರತು ಮುಂಬೈ ಬಿಡುವುದಿಲ್ಲ'

ಮುಂಬೈ (ಪಿಟಿಐ): 'ಮರಾಠ ಮೀಸಲಾತಿ ಬೇಡಿಕೆ ಈಡೇರುವವರೆಗೆ ಮುಂಬೈ ಬಿಟ್ಟು ಕದಲುವುದಿಲ್ಲ' ಎಂದು ಹೋರಾಟಗಾರ ಮನೋಜ್ ಜಾರಂಗೆ ಹೇಳಿದ್ದಾರೆ. ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹವು ಮೂರನೆಯ ದಿನವಾದ ಭಾನುವಾರವೂ ಮುಂದುವರಿಯಿತು.

'ನಮ್ಮ ಬೇಡಿಕೆ ಸಾಂವಿಧಾನಿಕವಾಗಿ ಮಾನ್ಯವಾಗಿದೆ. ಕುಣಬಿಗಳು ಮತ್ತು ಮರಾಠರು ಒಂದೇ ಜಾತಿಯವರು ಎಂಬ ದಾಖಲೆ ಸರ್ಕಾರದ ಬಳಿ ಇದೆ' ಎಂದು ಜಾರಂಗೆ ಹೇಳಿದ್ದಾರೆ.

ಉಪವಾಸ ಸತ್ಯಾಗ್ರಹ ಬೆಂಬಲಿಸಿ ಛತ್ರಪತಿ ಶಿವಾಜಿ ಮಹಾರಾಜ್ ನಿಲ್ದಾಣದ ಬಳಿ ಅಪಾರ ಸಂಖ್ಯೆಯಲ್ಲಿ ಪ್ರತಿಭಟನಕಾರರು ಸೇರಿದ್ದರಿಂದ ಸಂಚಾರ ದಟ್ಟಣೆ ಉಂಟಾಯಿತು. ಸವಾರರು ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಮುಂಬೈ ಪೊಲೀಸರು 'ಎಕ್ಸ್' ಖಾತೆಯ ಮೂಲಕ ಮನವಿ ಮಾಡಿದರು.

ವಿವಿಧೆಡೆ ಮಳೆ ಮುಂದುವರಿಕೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರದಿಂದ ಮೂರು ದಿನಗಳು ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಬಳಿಕ ಮಳೆಯ ತೀವ್ರತೆ ತಗ್ಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಸೋಮವಾರ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಹಾವೇರಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಯಾದಗಿರಿ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗೂ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳ ಕೆಲವೆಡೆ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಹಾಗೂ ಬುಧವಾರ ಧಾರಾಕಾರ ಮಳೆಯಾಗುವ ಸಂಭವವಿದ್ದು, ಮೂರೂ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಗುರುವಾರ ಈ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಮಳೆಯ ತೀವ್ರತೆ ಕಡಿಮೆಯಾಗುವ ಮುನ್ಸೂಚನೆಯನ್ನು ಇಲಾಖೆ ನೀಡಿದೆ.

ಮೀನುಗಾರರಿಗೆ ಎಚ್ಚರಿಕೆ: ಇದೇ 5ರವರೆಗೆ ಕರಾವಳಿಯಲ್ಲಿ ಗಂಟೆಗೆ 40 ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ, ಸಮುದ್ರ ಪ್ರದೇಶಗಳಿಗೆ ಹೋಗದಂತೆ ಮೀನುಗಾರರಿಗೆ ಎಚ್ಚರಿಕೆ ನೀಡಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.36	27,491	25,682
ಹಾರಂಗಿ	2,859	2,858.43	8,461	8,750
ಕಬಿನಿ	2,284.00	2,283.96	9,029	6,650
ಹೇಮಾವತಿ	2,922	2,921.84	17,217	17,835
ಲಿಂಗನಮಕ್ಕಿ	1,819	1,817.40	24,867	24,711
ಸೂಪಾ (ಮೀ)	564	559.18	16,851.51	2,627.42
ಮಾಣಿ	595	593.79	3,083	-
ತುಂಗಭದ್ರಾ	1,633	1,625.32	78,335	69,121
ಮಲಪ್ರಭಾ	2,079.5	2,079.15	4,904	4,904
ಘಟಪ್ರಭಾ	2175	2,174.93	11,530	9,925
ಭದ್ರಾ *	186	184.3	22,226	28,222
ಆಲಮಟ್ಟಿ (ಮೀ)	519.6	519.53	84,277	90,365
ನಾರಾಯಣಪುರ (ಮೀ)	492.25	491.94	75,000	76,384

* ನೆಲಮಟ್ಟದಿಂದ

ಕುದುರೆಮುಖ ಟೌನ್‌ಶಿಪ್ ಅರಣ್ಯ ಇಲಾಖೆಗೆ

ಒಂದನೇ ಪುಟದಿಂದ...

ಗಣಿಗಾರಿಕೆಯಿಂದ ಪರಿಸರದ ಮೇಲಾಗುತ್ತಿರುವ ಪರಿಣಾಮ ಗಮನಿಸಿದ ಸುಪ್ರೀಂ ಕೋರ್ಟ್, 2005ರಲ್ಲಿ ಗಣಿಗಾರಿಕೆ ಸ್ಥಗಿತಗೊಳಿಸಲು ಆದೇಶಿಸಿತು. 2006ರಲ್ಲಿ ಸ್ಥಗಿತಗೊಂಡಿದೆ. ಗಣಿಗಾರಿಕೆ ನಿಲ್ಲುತ್ತಿದ್ದಂತೆಯೇ ಉದ್ಯೋಗಿಗಳ ವರ್ಗಾವಣೆಯಾಗಿದೆ. ಟೌನ್‌ಶಿಪ್‌ನಲ್ಲಿ ಮನೆ, ಕಚೇರಿ, ಶಾಲೆಗಳು ಇವೆ. ಕೆಲ ಕಟ್ಟಡಗಳನ್ನು ಅರಣ್ಯ ಇಲಾಖೆ ಬಳಕೆ ಮಾಡುತ್ತಿದೆ. ಸುತ್ತಮುತ್ತ ಇರುವ ಜನರಿಗಾಗಿ ಆಸ್ಪತ್ರೆ ಮತ್ತು ಶಾಲೆ ಕೂಡ ಚಾಲ್ತಿಯಲ್ಲಿವೆ.

ಇದೀಗ ಸಂಡೂರು ತಾಲ್ಲೂಕಿನ ದೇವದಾರಿ ಕಬ್ಬಿಣದ ಅದಿರು ಗಣಿಯ ಅರಣ್ಯ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವ ಕೆಐಒಸಿಎಲ್, ಅದನ್ನು ಕಾರ್ಯಗತಗೊಳಿಸುವ ತವಕದಲ್ಲಿದೆ. ಹಿಂದೆ ಕುದುರೆಮುಖದಲ್ಲಿ ಗಣಿಗಾರಿಕೆ ವೇಳೆ ಆಗಿದ್ದ ಅರಣ್ಯ ನಾಶಕ್ಕೆ ಸಂಬಂಧಿಸಿ ಕೇಂದ್ರೀಯ ಉನ್ನತಾಧಿಕಾರ ಸಮಿತಿ (ಸಿಇಸಿ) ಶಿಫಾರಸು ಜಾರಿಗೊಳಿಸುವ ತನಕ ಸಂಡೂರಿನಲ್ಲಿ ಅರಣ್ಯ ಭೂಮಿ ಹಸ್ತಾಂತರಿಸದಿರಲು ರಾಜ್ಯ ಅರಣ್ಯ ಇಲಾಖೆ ನಿರ್ಧರಿಸಿದೆ. ಅದಕ್ಕಾಗಿ ಕುದುರೆಮುಖ ಟೌನ್‌ಶಿಪ್ ಸೇರಿ ಅಷ್ಟೂ ಜಾಗವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಸಿದ್ಧತೆ ನಡೆಸಿದೆ. ಅರಣ್ಯ ಇಲಾಖೆಗೆ ಪತ್ರವನ್ನೂ ಬರೆದಿದೆ.

'ಕುದುರೆಮುಖದಲ್ಲಿ ಸದ್ಯ ಸರ್ಕಾರಿ ಶಾಲೆ ಇದೆ. ಸಣ್ಣಪ್ರಮಾಣದ ಮಾರುಕಟ್ಟೆ, ಕೃಷಿ ಚಟುವಟಿಕೆ ನಡೆಯುತ್ತಿವೆ. ಈ ಜಾಗವನ್ನು ಅರಣ್ಯ ಇಲಾಖೆಗೆ ನೀಡುವುದರಿಂದ ಸ್ಥಳೀಯರಿಗೆ ತೊಂದರೆಯಾಗುತ್ತದೆ. ಕುದುರೆಮುಖ ಆಸುಪಾಸಿನ ನೆಲ್ಲಿಬೀಡು, ಜಾಂಬ್ಲೆ, ಸಿಂಗ್ಸಾರ್, ಬಿಳಿಗಲ್ಲು ಗ್ರಾಮಸ್ಥರು ಸೌಕರ್ಯ ವಂಚಿತರಾಗುತ್ತಾರೆ. ಜನರನ್ನು ಸಂಕಷ್ಟಕ್ಕೆ ತಳ್ಳಬಾರದು' ಎಂಬುದು ಸ್ಥಳೀಯರ ಆಗ್ರಹ.

'ಕುದುರೆಮುಖದ ಟೌನ್‌ಶಿಪ್ ನಿರ್ಮಾಣಗಳನ್ನು ಸರ್ಕಾರ ಸದ್ಬಳಕೆ ಮಾಡಿಕೊಳ್ಳಲಿಲ್ಲ. ಈಗ ಅರಣ್ಯ ಇಲಾಖೆಯ ಒತ್ತಡಕ್ಕೆ ಮಣಿದು ಕಂಪನಿಯು ಈ ಜಾಗವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಮುಂದಾಗಿದೆ' ಎಂಬುದು ಅವರ ಆರೋಪ.

ಸ್ಥಳೀಯರಿಗೆ ಕಂಪನಿ ಬಗೆಯುತ್ತಿರುವ ದ್ರೋಹ

ಒಂದನೇ ಪುಟದಿಂದ...


'ಕುದುರೆಮುಖದದಲ್ಲಿ ಕಂಪನಿಯ ಕಾರ್ಯ ಸ್ಥಗಿತಗೊಳಿಸುವ ಸಂದರ್ಭದಲ್ಲಿ ಗಣಿಗಾರಿಕೆಗಾಗಿ ಯಾರಿಂದ ಕೃಷಿ ಭೂಮಿ ಸ್ವಾಧೀನ ಪಡಿಸಿಕೊಂಡಿತ್ತೋ ಆ ರೈತರಿಗೇ ಭೂಮಿ ಹಂಚಬೇಕು. ದಿನಗೂಲಿ ಕಾರ್ಮಿಕರಾಗಿ ಇದ್ದವರಿಗೆ ಭೂಮಿ ನೀಡಬೇಕು ಹಾಗೂ ಪಶ್ಚಿಮಘಟ್ಟದ ಲಕ್ಯಾ ಅಣೆಕಟ್ಟನ್ನು ಕಂಪನಿಯೇ ನಿರ್ವಹಿಸಬೇಕು ಎಂದು ಆಗ್ರಹಿಸಿದ್ದೆವು. ಆದರೆ, ಕಂಪನಿಯು ಇತ್ತ ಗಮನವನ್ನೇ ನೀಡಲಿಲ್ಲ' ಎಂದರು.

'ಗಣಿಗಾರಿಕೆಯಿಂದ ಸೃಷ್ಟಿಯಾಗುತ್ತಿದ್ದ ಹೂಳು ತುಂಬಲು ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ಲಕ್ಯಾ ಅಣೆಕಟ್ಟೆಯನ್ನು ಅರಣ್ಯ ಇಲಾಖೆಗೆ ಒಪ್ಪಿಸಬೇಕಾಗುತ್ತದೆ. ಆಗ ಇದನ್ನು ನಿರ್ವಹಿಸುವವರು ಯಾರು, ನಿರ್ವಹಿಸದಿದ್ದರೆ ಅಣೆಕಟ್ಟು ಒಡೆದು ಹೂಳೆಲ್ಲವೂ ಭದ್ರಾ ನದಿಗೆ ಹರಿಯಲಿದೆ. ಆಗ ನದಿ ಸಂಪೂರ್ಣ ನಾಶವಾಗುವ ಅಪಾಯವೂ ಇದೆ ಎಂದರು. ಈ ಅಣೆಕಟ್ಟೆಯಿಂದ ಕಂಪನಿಯ ಮಂಗಳೂರಿನ ಪೆಲ್ಲೆಟೈಸೇಶನ್ ಸ್ಥಾವರಕ್ಕೆ ನಿರಂತರ ನೀರು ಹರಿಸಲಾಗುತ್ತಿದೆ. ಈಗ ಅಣೆಕಟ್ಟೆ ಜಾಗವನ್ನು ಅರಣ್ಯ ಇಲಾಖೆಗೆ ನೀಡುವುದರಿಂದ ಕಂಪನಿಗೆ ನೀರಿನ ಸಮಸ್ಯೆ ಎದುರಾಗಲಿದೆ. ಮಂಗಳೂರಿನಲ್ಲಿ ಕಂಪನಿಗೆ ಅಗತ್ಯವಾಗಿರುವ ಇಷ್ಟು ನೀರನ್ನು ಹೊಂದಿಸುವುದು ಕಷ್ಟ ಎಂಬುದನ್ನು ಕಂಪನಿ ಮರೆತಂತಿದೆ' ಎಂದರು.

ಯಕ್ಷಗಾನ ಪ್ರದರ್ಶನ ನಿಲ್ಲಿಸಿದ್ದು ಸಾಂಸ್ಕೃತಿಕ ದೌರ್ಜನ್ಯ: ಬಿವೈವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯ ಪಾಣೆ ಮಂಗಳೂರಿನಲ್ಲಿ ಪೊಲೀಸರು ನಿಗದಿತ ಸಮಯಕ್ಕೆ ಮುನ್ನವೇ ಯಕ್ಷಗಾನ ಪ್ರದರ್ಶನವನ್ನು ನಿಲ್ಲಿಸುವ ಮೂಲಕ ಹಿಂದೂ ಧಾರ್ಮಿಕ ಶ್ರದ್ಧೆ ಮತ್ತು ಸಂಸ್ಕೃತಿಯ ಮೇಲೆ ದೌರ್ಜನ್ಯ ನಡೆಸಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ವಿಜಯೇಂದ್ರ

'ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ಸಂಪೂರ್ಣ ದಿಕ್ಕು ತಪ್ಪುತ್ತಿದೆ. ಹಿಂದೂ ಉತ್ಸವಗಳು, ಧಾರ್ಮಿಕ ಆಚರಣೆಗಳನ್ನು ಅಪಮಾನಿಸುವ ಪ್ರಕರಣಗಳು ಮೇಲಿಂದ ಮೇಲೆ ನಡೆಯುತ್ತಿದೆ' ಎಂದು ಅವರು 'ಎಕ್ಸ್' ಮೂಲಕ ಕಿಡಿಕಾರಿದ್ದಾರೆ.

'ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾಡ ದೇವತೆ ಚಾಮುಂಡೇಶ್ವರಿ ದೇವಸ್ಥಾನವು ಹಿಂದೂಗಳಿಗೆ ಸೇರಿದ್ದಲ್ಲ ಎಂದು ಉಪಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಮೈಸೂರಿನ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಉದ್ಯಮಿ ದಂಪತಿ ರೀಲ್ಸ್ ಮಾಡಲು ಅವಕಾಶ ನೀಡಿ ಸಾಂಸ್ಕೃತಿಕ ನಗರಿಯ ಘನತೆಯನ್ನು ಕುಗ್ಗಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

'ಹಿಂದೂ ಧಾರ್ಮಿಕ ಶ್ರದ್ಧೆ ಹಾಗೂ ನಾಡಿನ ಸಂಸ್ಕೃತಿಯನ್ನು ಅವಮಾನಿಸುವುದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಒಂದು ಭಾಗವಾಗಿದೆ. ಗಣೇಶೋತ್ಸವದ ಸಾಂಪ್ರದಾಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅವಧಿಯನ್ನು ವಿಸ್ತರಿಸಬೇಕು ಎಂದು ಕಳೆದ ವಿಧಾನಸಭಾ ಅಧಿವೇಶನದಲ್ಲಿಯೇ ಚರ್ಚೆಯಾಗಿ, ಸರ್ಕಾರ ಸಮ್ಮತಿಯನ್ನೂ ವ್ಯಕ್ತಪಡಿಸಿದೆ. ಆದರೂ ಪೊಲೀಸರು ಗಣೇಶೋತ್ಸವದ ಮೇಲೆ ಕೆಂಗಣ್ಣು ಬೀರುತ್ತಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಗರುಡನ ಮನೆಗೆ ಕನ್ನವನು ಕೊರೆದು ಹಾವು ಬದುಕಬಹುದೇ?

–ಕುಮಾರವ್ಯಾಸ

ಸಂಪಾದಕೀಯ

ಶಿಕ್ಷಣ ವ್ಯವಸ್ಥೆಯಲ್ಲಿ ಪಲ್ಲಟ ಹೆಚ್ಚುತ್ತಿರುವ ಮನೆಪಾಠದ ಪ್ರವೃತ್ತಿ

ಶಿಕ್ಷಣ ಕ್ಷೇತ್ರವನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಸರ್ಕಾರವು ಈ ವರ್ಷದ ಆರಂಭದಲ್ಲಿ ನಡೆಸಿದ ಸಮಗ್ರ ಸಮೀಕ್ಷೆಯೊಂದು (ಸಿಎಂಎಸ್) ದೇಶದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ಒಂದಿಷ್ಟು ಅನಾರೋಗ್ಯಕರ ಬೆಳವಣಿಗೆಗಳನ್ನು ದಾಖಲಿಸಿದೆ. ದೇಶದಲ್ಲಿ ಶಾಲೆಗೆ ಹೋಗುವ ಮಕ್ಕಳ ಪೈಕಿ ಶೇ 27ರಷ್ಟು ಮಂದಿ ಶೈಕ್ಷಣಿಕ ವರ್ಷದಲ್ಲಿ ಖಾಸಗಿಯಾಗಿ ಮನೆಪಾಠ ಹೇಳಿಸಿಕೊಂಡಿದ್ದಾರೆ. ಹೀಗೆ ಮನೆಪಾಠ ಹೇಳಿಸಿಕೊಂಡ ಮಕ್ಕಳ ಪ್ರಮಾಣವು ಗ್ರಾಮೀಣ ಪ್ರದೇಶಗಳಲ್ಲಿ ಶೇ 25.5ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ 30.7ರಷ್ಟು ಇದೆ. 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳ ಪೈಕಿ ಶೇ 37ರಷ್ಟು ಮಂದಿ ಖಾಸಗಿಯಾಗಿ ಪಾಠ ಹೇಳಿಸಿಕೊಳ್ಳುತ್ತಿದ್ದಾರೆ. ನಗರ ಪ್ರದೇಶಗಳ ಕುಟುಂಬಗಳು ಮನೆಪಾಠಕ್ಕಾಗಿ ವಾರ್ಷಿಕ ಸರಾಸರಿ ₹4,000 ವೆಚ್ಚ ಮಾಡುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಈ ವೆಚ್ಚವು ಕಡಿಮೆ ಇದ್ದರೂ ಗಮನಾರ್ಹವಾಗಿ ಇದೆ. ಇವೆಲ್ಲವೂ ಹೇಳುತ್ತಿರುವುದು ಪರ್ಯಾಯ ಶಿಕ್ಷಣ ವ್ಯವಸ್ಥೆಯೊಂದು ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು. ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರು ಹೊಂದಿರುವ ಕಳಕಳಿ, ಆತಂಕಗಳನ್ನು ಕೂಡ ಇವೆಲ್ಲ ಪ್ರತಿಬಿಂಬಿಸುತ್ತವೆಯಾದರೂ, ಮುಖ್ಯವಾಹಿನಿಯ ಶಾಲಾ ಶಿಕ್ಷಣ ವ್ಯವಸ್ಥೆಯ ಗುಣಮಟ್ಟದ ಬಗ್ಗೆ ವಿಶ್ವಾಸ ಇಲ್ಲದಿರುವುದನ್ನೂ ಇವು ಹೇಳುತ್ತಿವೆ. ಸ್ಪರ್ಧಾತ್ಮಕತೆ, ಜೊತೆಗಾರರು ತರುವ ಒತ್ತಡ ಕೂಡ ವಿದ್ಯಾರ್ಥಿಗಳು ಮನೆಪಾಠದ ಕೇಂದ್ರಗಳಿಗೆ ಹೋಗುವುದಕ್ಕೆ ಪ್ರಮುಖ ಕಾರಣ. ಶೈಕ್ಷಣಿಕವಾಗಿ ಮಕ್ಕಳು ಎದುರಿಸಬಹುದಾದ ಸವಾಲುಗಳನ್ನು ನಿಭಾಯಿಸಲು ನೆರವಾಗುವ ಉದ್ದೇಶವು ಮನೆಪಾಠದ ವ್ಯವಸ್ಥೆಗೆ ಇದೆಯಾದರೂ, ಇದು ಮಕ್ಕಳ ಮೇಲೆ ಬಹಳಷ್ಟು ಒತ್ತಡ ಸೃಷ್ಟಿಸುತ್ತಿದೆ. ಶಾಲಾ ಅವಧಿಯ ನಂತರ ಮನೆಪಾಠ ಹೇಳಿಸಿಕೊಳ್ಳುವುದು, ನಂತರ ಹೋಂವರ್ಕ್ ಮಾಡುವುದು ಮಕ್ಕಳಿಗೆ ಶಿಕ್ಷೆಯಂತೆ ಭಾಸವಾಗಬಹುದು. ಮಕ್ಕಳಿಗೆ ಆಟವಾಡಲು ಹಾಗೂ ವಿರಮಿಸಿಕೊಳ್ಳಲು ಸಾಕಷ್ಟು ಸಮಯವೇ ಸಿಗದೆ ಇರಬಹುದು. ಮುಖ್ಯವಾಹಿನಿಯ ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಹೆಚ್ಚು ಮಾಡುವ ಮೂಲಕ, ಬಾಹ್ಯ ಮನೆಪಾಠದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ಸಮತೋಲನವೊಂದನ್ನು ಸಾಧಿಸಬಹುದು.



ಟ್ಯೂಷನ್ ಮತ್ತು ಕೋಚಿಂಗ್ ವ್ಯವಸ್ಥೆ ದೇಶದಲ್ಲಿ ವ್ಯಾಪಕವಾಗಿ ಬೆಳೆದಿದ್ದು, ಶಾಲಾ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಪ್ರಮಾಣ ಕಡಿಮೆ ಆಗುತ್ತಿರುವುದನ್ನು ಸಮೀಕ್ಷೆಯು ತೋರಿಸಿದೆ. 1970ರ ದಶಕದಲ್ಲಿ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣ ಶೇ 74ರಷ್ಟು ಇದ್ದಿದ್ದು, ಈಗ ಶೇ 51–56ಕ್ಕೆ ಕುಸಿದಿದೆ. ಆದರೆ, ಇಲ್ಲಿ ಸರ್ಕಾರಿ ಶಾಲೆಗಳ ಮಹತ್ವ ಏನು ಎಂಬುದನ್ನೂ ಸಿಎಂಎಸ್ ತೋರಿಸಿಕೊಟ್ಟಿದೆ. ಖಾಸಗಿ ಶಾಲೆಗಳಲ್ಲಿ ಮಗುವೊಂದಕ್ಕೆ ಶಿಕ್ಷಣ ಕೊಡಿಸಲು ಬೇಕಾಗುವ ವಾರ್ಷಿಕ ಸರಾಸರಿ ಮೊತ್ತ ₹25 ಸಾವಿರ, ಸರ್ಕಾರಿ ಶಾಲೆಯಲ್ಲಿ ಈ ಮೊತ್ತ ₹2,863 ಎಂಬುದು ಸಮೀಕ್ಷೆಯಲ್ಲಿ ಉಲ್ಲೇಖವಾಗಿದೆ. ದೇಶದ ಬಹುತೇಕ ಕಡೆಗಳಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳ ಎದುರು ಸೋತಿವೆ. ಆದರೆ ಕೇರಳ ರಾಜ್ಯ ಹಾಗೂ ದೆಹಲಿಯಂತಹ ಕೇಂದ್ರಾಡಳಿತ ಪ್ರದೇಶ ಈ ಮಾತಿಗೆ ಅಪವಾದವಾಗಿ ನಿಂತಿವೆ. ಕೇರಳ ಹಾಗೂ ದೆಹಲಿಯಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಗೆ ಈಚೆಗೆ ಕೆಲವು ವರ್ಷಗಳಲ್ಲಿ ವಿಶೇಷ ಪ್ರಯತ್ನಗಳು ನಡೆದಿವೆ. ವಿರೋಧಾಭಾಸವೆಂದರೆ, ಖಾಸಗಿ ಶಾಲೆಗಳಲ್ಲಿ ದುಬಾರಿ ಶುಲ್ಕ ಪಾವತಿಸಿದ ನಂತರವೂ ಪಾಲಕರು ತಮ್ಮ ಮಕ್ಕಳನ್ನು ಮನೆಪಾಠಕ್ಕೆ ಕಳುಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಪ್ರಮಾಣ ಕಡಿಮೆ ಆಗುತ್ತಿರುವುದು ಕಳವಳಕಾರಿ. ಇದನ್ನು ಸರಿಪಡಿಸಲು ಅಗತ್ಯ ಕ್ರಮಗಳು ಆಗಬೇಕು.

ದೇಶದ ಎಲ್ಲೆಡೆ ತಲೆ ಎತ್ತಿರುವ ಟ್ಯೂಷನ್ ಕೇಂದ್ರಗಳು ಹಾಗೂ ಖಾಸಗಿಯಾಗಿ ಮನೆಪಾಠ ಹೇಳುವವರಷ್ಟೇ ಅಲ್ಲದೆ, ದೊಡ್ಡ ಶಿಕ್ಷಣ ಸಂಸ್ಥೆಗಳು ಕೂಡ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸುವವರನ್ನು ಗುರಿಯಾಗಿಸಿಕೊಂಡು ಕೋಚಿಂಗ್ ಕೇಂದ್ರಗಳನ್ನು ನಡೆಸುತ್ತಿವೆ. ರಾಜಸ್ಥಾನದ ಕೋಟ ಪ್ರದೇಶವು ಇಂತಹ ಕೇಂದ್ರಗಳನ್ನು ಸಾಂಕೇತಿಕವಾಗಿ ಪ್ರತಿನಿಧಿಸುವಂತೆ ಬೆಳೆದುನಿಂತಿದೆ. ಇಂತಹ ಕೆಲವು ಕೇಂದ್ರಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸೃಷ್ಟಿಸುವ ಒತ್ತಡದ ಕಾರಣಕ್ಕಾಗಿ ಅವುಗಳ ಚಟುವಟಿಕೆಗಳು ದೇಶದ ಗಮನ ಸೆಳೆದಿವೆ. ಇಂತಹ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಗಳಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳೂ ಇವೆ. ಇವುಗಳ ಮೇಲೆ ಕಾನೂನಿನ ನಿಗಾ ಸಮರ್ಪಕವಾಗಿ ಇಲ್ಲ. ಶಾಲಾ ಶಿಕ್ಷಣವನ್ನು ಇನ್ನಷ್ಟು ಬಲಪಡಿಸಿ, ಸಮಗ್ರ ಆಯಾಮದ ಕಲಿಕೆಯತ್ತ ಗುರಿಯನ್ನು ತಿರುಗಿಸುವ ಮೂಲಕ ಇವುಗಳಿಗೆ ಪರಿಹಾರ ಕಂಡುಕೊಳ್ಳಬಹುದು.

ಚುರುಮುರಿ

ಸಮಚಿತ್ತಕ್ಕೆ ಅವಕಾಶವಿಲ್ಲ



ಸಾರ್ವಜನಿಕ ವಲಯದಲ್ಲಿ ತುಂಬ ಸಂಕೋಚ ಸ್ವಭಾವದಲ್ಲಿದ್ದಂತೆ ಮಂಕಾಗಿ ಕಾಣುತ್ತಿದ್ದ ರಾಹುಲ್ ಗಾಂಧಿಯವರು ಭಾರತ್ ಜೋಡೊ ಯಾತ್ರೆಯ ನಂತರ ಮೈಕೊಡವಿ ನಿಂತ ಪರಿ ಅಧ್ಯಯನ ಯೋಗ್ಯವಾದುದು. ಅವರ ಆಕ್ರಮಣಕಾರಿ ಭಾಷೆಯೆದುರು ಮೋದಿಯವರೇ ಮಂಕಾಗಿ ಕಾಣುತ್ತಿದ್ದಾರೆ. ಭಾರತದ ರಾಜಕೀಯವು ವ್ಯಕ್ತಿತ್ವಗಳನ್ನು ಬದಲಾಯಿಸುವ ರೀತಿ ಅಚ್ಚರಿ ಹುಟ್ಟಿಸುತ್ತಿದೆ. ಇಲ್ಲಿ ಸಮಚಿತ್ತಕ್ಕೆ ಅವಕಾಶವೇ ಇಲ್ಲ.

ಪುರುಷೋತ್ತಮ ಬಿಳಿಮಲೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕಪ್ಪುಹಣವನ್ನು ಮರಳಿ ತಂದು ನಿಮ್ಮ ಖಾತೆಗಳಿಗೆ ₹15 ಲಕ್ಷ ಹಾಕುತ್ತೇನೆ ಎನ್ನುವ ಹೇಳಿಕೆಯಿಂದಲೇ ಮೋದಿಯವರು 2014ರಲ್ಲಿ ಅಧಿಕಾರಕ್ಕೆ ಬಂದಿದ್ದು ನೆನಪಿದೆಯೇ? 2025ರಲ್ಲಿ ಅವರ ಹೇಳಿಕೆ: 'ಕಪ್ಪುಹಣ, ಬಿಳಿ ಹಣ ಎಂಬುದು ನನಗೆ ಮುಖ್ಯವಲ್ಲ'. ಬದಲಾಗುತ್ತಿರುವ ಹೇಳಿಕೆಗಳು ಮೋದಿಯವರ ವೈಫಲ್ಯವನ್ನು ಹೇಳುತ್ತಿವೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 1-9-2000

• ಅಕ್ಟೋಬರ್ ಅಂತ್ಯಕ್ಕೆ ವಿದ್ಯುತ್ ಉತ್ಪಾದನೆ

ಕಾರವಾರ, ಆಗಸ್ಟ್ 31– ಕೈಗಾ ಅಣು ವಿದ್ಯುತ್ ಸ್ಥಾವರದ 1ನೇ ಘಟಕವು ಸೆಪ್ಟೆಂಬರ್ ಅಂತ್ಯಕ್ಕೆ (ಕ್ರಿಟಿಕಲ್) ವಿದ್ಯುತ್ ಉತ್ಪಾದನೆಗೆ ಸಿದ್ಧಗೊಳ್ಳಲಿದ್ದು, ಅಕ್ಟೋಬರ್ ಅಂತ್ಯಕ್ಕೆ ವಿದ್ಯುತ್ ಉತ್ಪಾದನೆ ಪ್ರಾರಂಭಿಸಲಿದೆ.

ಕೈಗಾ ಯೋಜನಾ ನಿರ್ದೇಶಕರಾಗಿದ್ದ ವಿ.ಕೆ. ಶರ್ಮಾ ಅವರು, ಇಲ್ಲಿಂದ ವರ್ಗವಾಗಿ ಪದೋನ್ನತಿಯ ಮೇಲೆ ಮುಂಬೈನ ಕೇಂದ್ರ ಕಚೇರಿಗೆ ಹೋಗುತ್ತಿರುವ ಸಂದರ್ಭದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

• ಯುಕೆಪಿ: 2ನೇ ಹಂತದ ಕಾಮಗಾರಿ ಮಂಜೂರು

ಬೆಂಗಳೂರು, ಆಗಸ್ಟ್ 31– ಹಲವಾರು ವರ್ಷಗಳಿಂದ ಬಾಕಿ ಇದ್ದ ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯ ಎರಡನೇ ಹಂತದ ಕಾಮಗಾರಿಗಳಿಗೆ ತಾಂತ್ರಿಕ, ಆರ್ಥಿಕ ಹಾಗೂ ಪರಿಸರ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರದ ಅನುಮತಿ ದೊರೆತಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 1-9-1950

• ಮುಂಬಯಿ: ಮೂರು ಸಾವು 29 ಮಂದಿಗೆ ಗಾಯ

ಮುಂಬಯಿ, ಆಗಸ್ಟ್ 31– ಇಲ್ಲಿನ ಉತ್ತರ ವಲಯದ ಕೈಗಾರಿಕಾ ಪ್ರದೇಶದಲ್ಲಿ ಕಳೆದ 15 ದಿನಗಳಿಂದ ನಡೆಯುತ್ತಿರುವ ಬಟ್ಟೆ ಗಿರಣಿ ಕಾರ್ಮಿಕರ ಹೋರಾಟವು, ಇಂದು ಹಿಂಸಾರೂಪ ತಳೆದಿದೆ.

ಹಿಂದೂ ಮಜ್ದೂರ್ ಸಭಾ ನೇತೃತ್ವದಡಿ ನಡೆಯುತ್ತಿರುವ ಈ ಹೋರಾಟವನ್ನು ಹತ್ತಿಕ್ಕಲು ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, 29 ಮಂದಿ ಗಾಯಗೊಂಡಿದ್ದಾರೆ. ಇಬ್ಬರು ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದಾರೆ.

• ವಿಮಾನ ಪತನ: 55 ಸಾವು

ಕೈರೊ, ಆಗಸ್ಟ್ 31– ಫ್ರಾಂಕ್‌ಫರ್ಟ್‌ನಿಂದ ಕೈರೊಕ್ಕೆ ಬರುತ್ತಿದ್ದ 'ಸ್ಟಾರ್ ಆಫ್ ಮೇರಿಲ್ಯಾಂಡ್' ವಿಮಾನವು ಇಂದು ಬೆಳಿಗ್ಗೆ ಪತನಗೊಂಡಿದ್ದು, ವಿಮಾನದಲ್ಲಿದ್ದ 55 ಪ್ರಯಾಣಿಕರು ಮೃತಪಟ್ಟಿದ್ದಾರೆ. ಇವರಲ್ಲಿ 8 ಮಂದಿ ಭಾರತೀಯರು ಸೇರಿದ್ದಾರೆ ಎಂದು ಟ್ರಾನ್ಸ್‌ವರ್ಲ್ಡ್ ಏರ್‌ಲೈನ್ಸ್ ತಿಳಿಸಿದೆ.

ಮೃತಪಟ್ಟವರಲ್ಲಿ ಅಮೆರಿಕದ ಐವರು ಪ್ರಜೆಗಳು ಇದ್ದಾರೆ ಎಂದು ತಿಳಿಸಿದೆ.

ರಾಜ್ಯಗಳ ಕಾಲಿಗೆ ತೆರಿಗೆಯ ಗುಂಡು



ವಿಶ್ಲೇಷಣೆ

ದೇವನೂರ ಮಹಾದೇವ

ಬಹಳ ಹಿಂದೆಯೇ ತೆಲುಗು ದೇಶಂ ಪಕ್ಷದ ನಾಯಕ ಎನ್.ಟಿ. ರಾಮರಾವ್ ಅವರು ಭಾರತವನ್ನು ಆಳುತ್ತಿರುವುದೇ ರಾಜ್ಯಗಳು; ಕೇಂದ್ರ ಕೇವಲ ಒಂದು ಪರಿಕಲ್ಪನೆ ಮಾತ್ರ ಎಂದಿದ್ದರು. ದೇಶದ ನಿಜವಾದ ಅಭಿವೃದ್ಧಿ ಸಾಧ್ಯವಾಗುವುದು ರಾಜ್ಯಗಳಿಗೆ ಹೆಚ್ಚು ಸಂಪನ್ಮೂಲಗಳು ದೊರಕುವಂತಾದರೆ ಮಾತ್ರ ಎನ್ನುವುದು ಅವರ ಮಾತಿನ ಆಶಯ. ಇದು ಸರಿಯಾದ ಗ್ರಹಿಕೆ ಅನ್ನಿಸುತ್ತದೆ. ಹೀಗಾಗಿಯೇ, ಸಂವಿಧಾನದ ತಳಪಾಯವಾದ ಒಕ್ಕೂಟ ವ್ಯವಸ್ಥೆ, ಭಾರತದ ವೈವಿಧ್ಯ, ಇವುಗಳ ಅಂತರ್ಯವನ್ನು ಅರ್ಥಮಾಡಿಕೊಂಡು ಹಣಕಾಸು ಆಯೋಗವು ಕಾರ್ಯ ನಿರ್ವಹಿಸಬೇಕಿರುತ್ತದೆ.

ನಮ್ಮ ಸಂವಿಧಾನವು ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ಸ್ಪಷ್ಟಪಡಿಸುತ್ತದೆ. ಸುಪ್ರೀಂ ಕೋರ್ಟ್‌ನ ಪೂರ್ಣಪೀಠ ನೀಡಿರುವ ಸಾಂವಿಧಾನಿಕ ಆದೇಶದಲ್ಲೂ ಭಾರತದ ಒಕ್ಕೂಟ ಸ್ವರೂಪವು ಸಂವಿಧಾನದ ಮೂಲ ರಚನೆಯ ಭಾಗವೆಂದು ಹೇಳಲಾಗಿದೆ. ಇದರ ಭಾಗವಾಗಿ ತೆರಿಗೆ ಸಂಗ್ರಹ ಮಾಡುವ ಮತ್ತು ಶಾಸನಗಳನ್ನು ರೂಪಿಸುವ ಅಧಿಕಾರವನ್ನು ಕೇಂದ್ರಕ್ಕೂ ಹಾಗೂ ರಾಜ್ಯಗಳಿಗೂ ಹಂಚಲಾಗಿದೆ. ಸಂವಿಧಾನದ ಆರ್ಟಿಕಲ್ 246ರ ಅನ್ವಯ ರೂಪಿಸಲಾಗಿರುವ ಶೆಡ್ಯೂಲ್ 7ರಲ್ಲಿ ಕೇಂದ್ರ ಹಾಗೂ ರಾಜ್ಯಗಳ ಪರಮಾಧಿಕಾರ ಇರುವ ಬಾಬತ್ತುಗಳನ್ನು ನಿರ್ದಿಷ್ಟೀಕರಿಸಲಾಗಿದೆ. ಜೊತೆಗೆ, ಕೇಂದ್ರ ಹಾಗೂ ರಾಜ್ಯಗಳು ಸೇರಿ ಶಾಸನಗಳನ್ನು ಮಾಡಬಹುದಾದ ಸಮವರ್ತಿ ಪಟ್ಟಿಯನ್ನು ನೀಡಲಾಗಿದೆ. ಇದರ ಅನುಸಾರ, ಜನರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಆಹಾರ, ಆರೋಗ್ಯ, ಶಿಕ್ಷಣ, ಕೃಷಿ, ಉದ್ಯೋಗ, ಭದ್ರತೆಯಂತಹ ಎಲ್ಲಾ ಜವಾಬ್ದಾರಿಗಳು ಮೂಲಭೂತವಾಗಿ ರಾಜ್ಯಗಳ ಜವಾಬ್ದಾರಿಯಾಗಿದೆ. ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಏಕರೂಪತೆ ತರುವ ಮತ್ತು ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸುವ ಅಧಿಕಾರ, ದೇಶದ ರಕ್ಷಣೆ, ವಿದೇಶಾಂಗ ಇತ್ಯಾದಿ ಜವಾಬ್ದಾರಿಗಳಿವೆ.

ಸಂವಿಧಾನದ ಆಶಯಕ್ಕೆ ತಕ್ಕಂತೆ ಒಕ್ಕೂಟ ಸ್ವರೂಪವನ್ನು ಸಮತೋಲಿಸುವುದಕ್ಕೆ ಒಂದು ಮಾದರಿ ಎಂದರೆ, ಯುಪಿಎ ಸರ್ಕಾರದಲ್ಲಿ ಪ್ರಧಾನಿ ಮನಮೋಹನ ಸಿಂಗ್ ಅವರು ನೇಮಿಸಿದ್ದ ವೈ.ವಿ. ರೆಡ್ಡಿಯವರ ಅಧ್ಯಕ್ಷತೆಯ 14ನೇ ಹಣಕಾಸು ಆಯೋಗ. ಈ ಆಯೋಗವು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಂದು ಮತ್ತೊಂದರ ಸ್ವಾಯತ್ತತೆಯನ್ನು ಅತಿಕ್ರಮಿಸದಂತೆ ಎಚ್ಚರ ವಹಿಸಿತ್ತು. ಜನಜೀವನದೊಡನೆ ಬೆರೆತು ರಾಜ್ಯಗಳು ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ರಾಜ್ಯಗಳ ತೆರಿಗೆ ಪಾಲನ್ನು ಶೇ 32ರಿಂದ ಶೇ 42ಕ್ಕೆ ಏರಿಸಿತ್ತು. ರಾಜ್ಯಗಳಿಗೆ ಯಾವುದೇ ಷರತ್ತುಗಳಿಲ್ಲದೆ ಅನುದಾನವನ್ನು ನೀಡಿ ತಮ್ಮದೇ ಆದ ಯೋಜನೆಗಳನ್ನು ರೂಪಿಸಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಿತ್ತು. ಕೇಂದ್ರದ ಯೋಜನೆಗಳಿಗೆ ಅವಕಾಶ ತಗ್ಗಿಸಿ ರಾಜ್ಯಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಿತಿಗೊಳಿಸಲು ಪ್ರಯತ್ನಿಸಿತ್ತು.

ಒಕ್ಕೂಟ ವ್ಯವಸ್ಥೆಗೆ ಪೂರಕವಾಗಿದ್ದ ಈ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಬೇಕಾದ ಹೊಣೆಗಾರಿಕೆಯು ತದನಂತರ ಪ್ರಧಾನಿಯಾಗಿ ಬಂದ ಮೋದಿಯವರಿಗೆ ಎದುರಾಗುತ್ತದೆ. ಇದು ಅವರಿಗೆ ನುಂಗಲಾರದ ತುತ್ತಾಗಿತ್ತು. ರಾಜ್ಯಗಳ ತೆರಿಗೆ ಪಾಲನ್ನು ಶೇ 42ರಿಂದ ಕೆಳಗೆ ಇಳಿಸುವುದಕ್ಕೆ ವೈ.ವಿ. ರೆಡ್ಡಿಯವರ ಮನವೊಲಿಸುವ ಮೋದಿಯವರ ಪ್ರಯತ್ನ ವಿಫಲವಾಯಿತು. ಹಾಗಾದರೆ ಪ್ರಧಾನಿ ಮೋದಿಯವರಿಗೆ ಒಕ್ಕೂಟ ವ್ಯವಸ್ಥೆ ಉಳಿಯುವುದು ಬೇಕಿರಲಿಲ್ಲವೆ? ಮೋದಿಯವರು ಪಳಗಿದ ಆರ್‌ಎಸ್‌ಎಸ್ ಸಿದ್ಧಾಂತದ ಮೂಲವನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

ಆರ್‌ಎಸ್‌ಎಸ್ ಗುರೂಜಿ ಗೋಲ್ವಾಲ್ಕರ್ ಅವರು, 'ನಮ್ಮ ದೇಶವನ್ನು ರಾಜ್ಯಗಳ ಒಕ್ಕೂಟ' ಎಂದು ಸಂವಿಧಾನ ರಚನಕಾರರು ಕರೆದಿದ್ದಾರೆ... ಈಗಿನ ಒಕ್ಕೂಟ ರಚನೆಯಲ್ಲಿ ಛಿದ್ರತೆಯ ಬೀಜಗಳು ಅಡಗಿವೆ ಎಂದು ಶಂಕಿಸುತ್ತಾರೆ. (ಉಲ್ಲೇಖ: ಗೋಲ್ವಾಲ್ಕರ್, ಚಿಂತನಗಂಗಾ, ಮೂರನೇ ಮುದ್ರಣ, ಪುಟ 229, ಪ್ರಕಟಣೆ: ಸಾಹಿತ್ಯಸಿಂಧು, ಬೆಂಗಳೂರು) ಹಾಗೂ, ಹೀಗೂ ಹೇಳುತ್ತಾರೆ: ಇದಕ್ಕಾಗಿ ನಮ್ಮ ದೇಶದ ಸಂವಿಧಾನದ ಒಕ್ಕೂಟ ಸ್ವರೂಪದ ಎಲ್ಲ ಮಾತನ್ನು ಆಳವಾಗಿ ಹೂತು ಹಾಕಬೇಕಿದೆ. ಭಾರತದಲ್ಲಿ 'ಸ್ವಯಂ ಅಧಿಕಾರ'ವುಳ್ಳ ಅಥವಾ 'ಭಾಗಶಃ ಸ್ವಯಂ ಅಧಿಕಾರ'ವುಳ್ಳ ರಾಜ್ಯಗಳ ಅಸ್ತಿತ್ವವನ್ನೆ ಅಳಿಸಿ ಹಾಕಬೇಕು... ಏಕಾತ್ಮಕ ಸರ್ಕಾರದ ಪದ್ಧತಿಯನ್ನು ಸ್ಥಾಪಿಸುವಂತೆ ಸಂವಿಧಾನವನ್ನು ಪುನಃ ಬರೆದಿಡೋಣ ಎನ್ನುತ್ತಾರೆ. (ಉಲ್ಲೇಖ: ಗೋಲ್ವಾಲ್ಕರ್, ಚಿಂತನಗಂಗಾ, ಪುಟ 474). ಹೀಗೆ ಸೈದ್ಧಾಂತಿಕತೆ, ತಾತ್ವಿಕತೆಗಳಲ್ಲೇ ಭ್ರಷ್ಟವಾಗಿರುವ ಆರ್‌ಎಸ್‌ಎಸ್‌ನಲ್ಲಿ ಮುಳುಗಿ ಎದ್ದು ಪಳಗಿದ ಸೈದ್ಧಾಂತಿಕ ಭ್ರಷ್ಟ ಮೋದಿಯವರು ಒಕ್ಕೂಟ ವ್ಯವಸ್ಥೆಯನ್ನು ಹೇಗೆ ತಾನೆ ಸಹಿಸಿಯಾರು? ಅದಕ್ಕಾಗಿ ಅವರು ಹಣಕಾಸು ಆಯೋಗವು ರಾಜ್ಯಗಳಿಗೆ ನಿಗದಿಪಡಿಸಿದ್ದ ಶೇ 42ರಷ್ಟು ತೆರಿಗೆ ಪಾಲು ತನ್ನಷ್ಟಕ್ಕೆ ತಾನೇ ಕುಸಿದು ಹೋಗುವಂತೆ ಮಾಡಿಬಿಟ್ಟರು. ಅದು ಹೀಗೆ:

> ಒಕ್ಕೂಟ ವ್ಯವಸ್ಥೆಯನ್ನು ನೆನಪಿಸುವ ರಾಜ್ಯಗಳನ್ನು ಕೇಂದ್ರ ಸರ್ಕಾರ ಶತ್ರುವಿನಂತೆ ನೋಡುತ್ತಿದೆ. ಕೇಂದ್ರ ಸರ್ಕಾರದ ತೆರಿಗೆ ಪದ್ಧತಿಯು ಸೂತ್ರವಿಲ್ಲದ ಗಾಳಿಪಟದಂತೆ ಆಗಿರುವುದರಿಂದ, ಒಕ್ಕೂಟ ವ್ಯವಸ್ಥೆ ಏದುಸಿರು ಬಿಡುತ್ತಿದೆ. ಆದರೆ, ತೆರಿಗೆ ಅವ್ಯವಸ್ಥೆಯ ಬಗ್ಗೆ ಯಾರೂ ಪ್ರಶ್ನಿಸುತ್ತಿಲ್ಲ. ಎಲ್ಲರೂ ನಿರ್ಲಕ್ಷಿಸಿರುವ ಪ್ರಶ್ನೆಗಳನ್ನು ಯುವಜನ ಕೇಳಬೇಕಾಗಿದೆ.

ಮೋದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಕೇಂದ್ರ ಹಾಗೂ ರಾಜ್ಯಗಳು ಸಮಾಲೋಚಿಸಿ ದೇಶದ ಅಭಿವೃದ್ಧಿ ರೂಪಿಸುತ್ತಿದ್ದ ಸ್ವತಂತ್ರ ಯೋಜನಾ ಆಯೋಗವನ್ನು ರದ್ದು ಮಾಡಿ, ಬದಲಿಗೆ ಕೇಂದ್ರದ ಹಣಕಾಸು ಇಲಾಖೆಯ ಉಪ ಇಲಾಖೆಯಂತಿರುವ 'ನೀತಿ ಆಯೋಗ' ಸ್ಥಾಪಿಸಿದರು. ಆಮೇಲೆ, ರಾಜ್ಯಗಳೊಡನೆ ಹಂಚಿಕೊಳ್ಳದ ಮೇಲ್ತೆರಿಗೆ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ನಿರಂತರವಾಗಿ ಹೆಚ್ಚಿಸುತ್ತ ಬಂದರು. ಮೋದಿ ಪೂರ್ವದಲ್ಲಿ ಸೆಸ್ ಮತ್ತು ಸರ್‌ಚಾರ್ಜ್ ಪ್ರಮಾಣ ಶೇ 10ಕ್ಕಿಂತ ಮೇಲೆ ದಾಟಿರಲಿಲ್ಲ. 2022ರ ಡಿಸೆಂಬರ್ 20ರಂದು ರಾಜ್ಯಸಭೆಯಲ್ಲಿ ಜಾನ್ ಬ್ರಿಟ್ಟಾಸ್ ಪ್ರಶ್ನೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಸೆಸ್ ಮತ್ತು ಸರ್‌ಚಾರ್ಜ್‌ಗಳ ಪಾಲು ಶೇ 28.1 ಇದೆ ಎಂದು ಉತ್ತರಿಸುತ್ತಾರೆ. ಪ್ರಧಾನಿಯವರಿಗೆ ಇಷ್ಟಾದರೂ ಸಮಾಧಾನವಾಗಲಿಲ್ಲ ಎಂದು ಕಾಣುತ್ತದೆ. ರಾಜ್ಯಗಳಿಗೆ ನೀಡುತ್ತಿದ್ದ ಅನುದಾನ ಹಾಗೂ ಷರತ್ತಿನ ಯೋಜನಾ ಪಾಲನ್ನು ದೊಡ್ಡಮಟ್ಟದಲ್ಲಿ ಕಡಿತಗೊಳ್ಳುವಂತೆ ನೋಡಿಕೊಂಡರು. ಹೀಗೆಲ್ಲಾ ಆಗುತ್ತ, 2020–21ನೇ ಸಾಲಿನ ಬಜೆಟ್ಟಿನ ಪರಿಷ್ಕೃತ ಅಂಕಿ–ಅಂಶಗಳ ಪ್ರಕಾರ ರಾಜ್ಯಗಳ ಪಾಲು ಶೇ 28.9ಕ್ಕೆ ಕುಸಿದುಬಿಟ್ಟಿತು.

ಈಗ ಕರ್ನಾಟಕದ ಗತಿಯನ್ನೇ ನೋಡಿ, ಇಡೀ ದೇಶದಲ್ಲೇ ತೆರಿಗೆ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿರುವ ಹಾಗೂ ಜನಸಂಖ್ಯಾ ನಿಯಂತ್ರಣವನ್ನು ಯಶಸ್ವಿಯಾಗಿ ಮಾಡಿರುವ ಕರ್ನಾಟಕಕ್ಕೇನೆ ಈ ಹಿಂದೆ ಇದ್ದ ರಾಜ್ಯದ ತೆರಿಗೆ ಪಾಲು ಶೇ 4.71ರಿಂದ ಶೇ 3.64ಕ್ಕೆ ಇಳಿದಿದೆ. ಇದಿಷ್ಟೇ ಅಲ್ಲ, ನಿರ್ದಿಷ್ಟ ಅನುದಾನದಡಿ ಕರ್ನಾಟಕಕ್ಕೆ ನೀಡಿದ್ದ ₹6,000 ಕೋಟಿ ಅನುದಾನ ಬಿಡುಗಡೆಯಾಗಿಲ್ಲ. ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿದ್ದ ₹5,300 ಕೋಟಿ ಬಿಡುಗಡೆಯಾಗಿಲ್ಲ. ಇಷ್ಟಲ್ಲದೆ, ಕರ್ನಾಟಕಕ್ಕೆ ಆಗಿದ್ದ ಅನ್ಯಾಯವನ್ನು ಸರಿದೂಗಿಸಲು 15ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ವಿಶೇಷ ಅನುದಾನ ₹5,496 ಕೋಟಿಯನ್ನು ಕೇಂದ್ರ ಸರ್ಕಾರ ಕೊಡಲೇ ಇಲ್ಲ. ಒಕ್ಕೂಟ ವ್ಯವಸ್ಥೆಯನ್ನು ನೆನಪಿಸುವ ರಾಜ್ಯಗಳನ್ನು ತನ್ನ ಶತ್ರುಗಳೇನೊ ಎಂಬಂತೆ ಕೇಂದ್ರ ಸರ್ಕಾರ ನೋಡುತ್ತಿರುವಂತಿದೆ.

ಹೀಗೆ ಭಾರತದ ತೆರಿಗೆ ಪದ್ಧತಿಯು ಸೂತ್ರವಿಲ್ಲದ ಗಾಳಿಪಟದಂತೆ ಯದ್ವಾತದ್ವಾ ಆಡುತ್ತ, ಇದರಿಂದಾಗಿಯೂ ನಮ್ಮ ಒಕ್ಕೂಟ ವ್ಯವಸ್ಥೆ ಉಸಿರಾಡಲು ಕಷ್ಟಪಡುತ್ತಿದ್ದರೂ ಯಾಕೆ ಯಾರೂ ಬೆಚ್ಚುತ್ತಿಲ್ಲ? ಬಹುತೇಕ ಮಾಧ್ಯಮಗಳಿಗೆ ದನಿ ಇಲ್ಲ, ಗದ್ದಲ ಮಾತ್ರವಿದೆ. ಆದರೆ ಜನಪ್ರತಿನಿಧಿಗಳೂ, ಸಮಾಜಮುಖಿ ಜನಾಂದೋಲನಗಳೂ ಗಂಭೀರವಾಗಿ ಚರ್ಚಿಸುತ್ತಿಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಪ್ರಜ್ಞಾವಂತರು ಇದನ್ನೆಲ್ಲಾ ಮಾತಾಡುತ್ತಿದ್ದರೂ ಅದು ಕೇಳಿಸುತ್ತಿಲ್ಲ, ಸಮುದಾಯವನ್ನು ಮುಟ್ಟುತ್ತಿಲ್ಲ. ಈ ಎಲ್ಲವೂ ಈ ಎಲ್ಲರೂ ಜಡಗೊಂಡಿವೆ. ಚಿಗುರುತ್ತಿಲ್ಲ.

ಹೀಗಿರುವಾಗ ಭಾರತಕ್ಕೆ ದಿಕ್ಕು ಕಾಣಿಸುವವರು ಯಾರು? ಕ್ರಿಯಾಶೀಲರಾಗಬೇಕಾಗಿರುವವರು ಯಾರು? ಯಾರು ನಾಳೆ ಬದುಕಿ ಬಾಳಬೇಕು ಎಂದುಕೊಂಡಿರುವವರೊ ಅವರು, ಅಂದರೆ ವಿದ್ಯಾರ್ಥಿ ಯುವಜನತೆ, ಅವರು ನಾಳೆ ಬದುಕಿ ಬಾಳಬೇಕು ಎಂಬ ಕಾರಣಕ್ಕಾಗಿಯೇ, ಈಗಲೇ ಸಂಘಟಿತರಾಗಿ ಮಾತಾಡಬೇಕಾಗಿದೆ.

ಅವರು ಕೇಳಬೇಕಾಗಿದೆ, ಬಹುಶಃ ಇವು, ಇಂಥವು: 1. ಮೋದಿಯವರು ಈ ಹಿಂದೆ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯಗಳ ಪಾಲನ್ನು ಶೇ 50ಕ್ಕೆ ಹೆಚ್ಚಿಸಬೇಕೆಂದು ಒತ್ತಾಯಿಸಿದ್ದರು. ನಾವೀಗ ಇದನ್ನೇ ಮೋದಿಯವರಿಗೆ ಕೇಳಬೇಕಾಗಿದೆ. 2. ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ರಾಜ್ಯಗಳು ಮತ್ತು ಕೇಂದ್ರ ಎರಡೂ ಹಂಚಿಕೊಳ್ಳುವಂತಾಗಬೇಕು. 3. ಜನಜೀವನದೊಡನೆ ಸಂಬಂಧವಿರುವ ಪರೋಕ್ಷ ತೆರಿಗೆಯನ್ನು ಕಮ್ಮಿ ಮಾಡುತ್ತ, ನೇರ ತೆರಿಗೆಯನ್ನು ಹೆಚ್ಚು ಮಾಡಬೇಕು. ಆದಾಯ ಹೆಚ್ಚಿದಂತೆ ತೆರಿಗೆಯು ಆದಾಯದ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚಾಗುತ್ತಾ ಹೋಗಬೇಕು. 4. ಕಾರ್ಪೊರೇಟ್ ತೆರಿಗೆಯನ್ನು ಈ ಹಿಂದೆ ಇದ್ದಂತೆಯೇ ಶೇ 30ಕ್ಕೆ ಹೆಚ್ಚಿಸಬೇಕು ಹಾಗೂ ಕಾರ್ಪೊರೇಟ್ ಸಂಸ್ಥೆಗಳಿಗೆ ನೀಡುತ್ತಿರುವ ಯದ್ವಾತದ್ವಾ ರಿಯಾಯಿತಿಗಳಿಗೆ ಕಡಿವಾಣ ಹಾಕಬೇಕು. 5. ಈಗ ಇರುವ 'ನೀತಿ ಆಯೋಗ'ವನ್ನು ರದ್ದುಪಡಿಸಿ ಮತ್ತೆ ಮೊದಲಿದ್ದಂತೆಯೇ ಯೋಜನಾ ಆಯೋಗವನ್ನು ಮರು ಸ್ಥಾಪಿಸಬೇಕು, ಹೀಗೆ ಇಂಥವು.

ಜೊತೆಗೆ, ನಾವು ಮರೆಯಬಾರದು. ರಾಜ್ಯವೊಂದು ತನ್ನ ಹಿಂದುಳಿದ ಪ್ರದೇಶಗಳಿಗೆ ಒಂದಿಷ್ಟು ಹೆಚ್ಚು ಖರ್ಚು ಮಾಡುವಂತೆಯೇ ದೇಶವೊಂದು ಕೂಡ ತನ್ನ ಹಿಂದುಳಿದ ರಾಜ್ಯಗಳಿಗೆ ಒಂದಿಷ್ಟು ಹೆಚ್ಚು ಖರ್ಚು ಮಾಡಬೇಕಾಗಿರುತ್ತದೆ. ಹಾಗಾಗಿ, ರಾಜ್ಯಗಳು ಸೊರಗದಂತೆ ಕೇಂದ್ರಕ್ಕೂ ನ್ಯಾಯಯುತವಾದ ಪಾಲು ಇರಬೇಕು. ಈ ಮಾನವೀಯ ಹೊಣೆಗಾರಿಕೆ ಬೇಕಾಗಿದೆ, ಎಲ್ಲರಿಗೂ. ಜೊತೆಗೆ ನಾವು ಇದನ್ನು ಮರೆಯಲೇಬಾರದು. ಸ್ವಾತಂತ್ರ್ಯ ಹೋರಾಟಗಾರರ ಕನಸಾಗಿದ್ದ 'ಫೆಡರೇಷನ್ ಆಫ್ ಸ್ಟೇಟ್ಸ್' ಕಡೆಗೆ, ಅರೆಬರೆ ಒಕ್ಕೂಟದಿಂದ ಪೂರ್ಣ ಒಕ್ಕೂಟದ ಕಡೆಗೆ ನಾವು ಚಲಿಸಬೇಕಾಗಿದೆ.



ವಾಚಕರ ವಾಣಿ

ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನ

ಯುಜಿಸಿ ನಿಯಮದಂತೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪ್ರವೇಶಕ್ಕೆ ಸಂದರ್ಶನ ನಡೆಸುವ ಬಗ್ಗೆ ಮಾರ್ಗಸೂಚಿ ಪ್ರಕಟಿಸಲಾಗಿದೆ.

ನಿವೃತ್ತಿಗೆ ಮೂರು ವರ್ಷ ಇರುವ ಪ್ರಾಧ್ಯಾಪಕರಿಗೆ ಮಾರ್ಗದರ್ಶಕರಾಗಲು ಅವಕಾಶ ಕೊಡದಿರುವ ತೀರ್ಮಾನವೂ ಸರಿಯಾಗಿದೆ. ಆದರೆ, ನಿವೃತ್ತಿ ಹೊಂದಿರುವ ಪ್ರಾಧ್ಯಾಪಕರಿಂದಾಗಿ ಕೆಲವು ವಿದ್ಯಾರ್ಥಿಗಳಿಗೆ ಸಂಶೋಧನೆಯನ್ನು ಪೂರ್ಣಗೊಳಿಸಲಾಗಿಲ್ಲ. ಅಂತಹವರ ಪ್ರವೇಶವನ್ನೂ ರದ್ದುಗೊಳಿಸಲಾಗಿದೆ. ಇದರಿಂದ ಅನೇಕ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿದೆ. ಅಂತಹವರಿಗೆ ವಿಶ್ವವಿದ್ಯಾಲಯವು ಮತ್ತೊಂದು ಅವಕಾಶ ನೀಡಬೇಕಿದೆ.

ಪ್ರಭು ಸಿ., ಬೆಂಗಳೂರು

ಚಾಮುಂಡಿಬೆಟ್ಟ ಯಾರ ಸ್ವತ್ತೂ ಅಲ್ಲ

ದಸರಾ ಉದ್ಘಾಟನಾ ವಿಚಾರವು ವಿವಾದದ ಹುತ್ತವಾಗಿ ಬೆಳೆಯುತ್ತಿರುವುದು ಪ್ರಜ್ಞಾವಂತರಿಗೆ ದಿಗಿಲು ಹುಟ್ಟಿಸಿದೆ. ನಿಜ ಅರ್ಥದಲ್ಲಿ ದಸರಾ ಎಲ್ಲರೂ ಸೇರಿ ಸಂಭ್ರಮದಿಂದ ಆಚರಿಸುವ ನಾಡಹಬ್ಬ. ಇದರ ಉದ್ಘಾಟನೆಯನ್ನು ಯಾರೇ ಮಾಡಿದರೂ ಫಲಿತಾಂಶ ಒಂದೇ ಆಗಿರುತ್ತದೆ. ಇಂತಹ ಜಾತಿ ಅಥವಾ ಕೋಮಿನವರೇ ಉದ್ಘಾಟಿಸಬೇಕೆಂಬ ನಿಯಮಗಳಿಲ್ಲ. ಈ ಹಿಂದೆ ಹಿಂದೂಗಳಲ್ಲದ ಹಾಗೂ ನಿರೀಶ್ವರವಾದಿಗಳಾದ ಸಾಹಿತಿಗಳು ದಸರಾ ಉದ್ಘಾಟಿಸಿದ ಉದಾಹರಣೆಗಳಿವೆ.

ಸಾಹಿತಿ ಬಾನು ಮುಷ್ತಾಕ್ ಅವರನ್ನು ಮೈಸೂರಿನ ಚಾಮುಂಡಿಬೆಟ್ಟ ಹತ್ತಲು ಬಿಡುವುದಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿರುವುದು ಅವರ ಪಾಳೇಗಾರಿಕೆ ಮನಃಸ್ಥಿತಿಯ ಪ್ರತೀಕವಾಗಿದೆ. ದಸರಾ ಮತ್ತು ಚಾಮುಂಡಿಬೆಟ್ಟ ಯಾವುದೇ ಧರ್ಮ ಮತ್ತು ಜಾತಿಯವರ ಸ್ವತ್ತಲ್ಲ.

ಮೋದೂರು ಮಹೇಶಾರಾಧ್ಯ, ಹುಣಸೂರು

ತೆರಿಗೆ ನಷ್ಟಕ್ಕೆ ಹೊಣೆ ಯಾರು?

ದೇಶದಲ್ಲಿ ಜಿಎಸ್‌ಟಿ ಜಾರಿ ಬಳಿಕ ಹಲವು ರಾಜ್ಯಗಳ ರಾಜಸ್ವ ಸಂಗ್ರಹದಲ್ಲಿ ಹಿನ್ನಡೆಯಾಗಿರುವುದು ನಿಜ. ಈ ನಡುವೆಯೇ ಕೇಂದ್ರ ಸರ್ಕಾರವು ಜಿಎಸ್‌ಟಿ ಸುಧಾರಣೆಗೆ ಮುಂದಡಿ ಇಟ್ಟಿದೆ. ಇದರಿಂದ ಕರ್ನಾಟಕಕ್ಕೆ ವರಮಾನ ನಷ್ಟವಾಗಲಿದೆ. ಇಡೀ ದೇಶದಲ್ಲಿಯೇ ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಅದಕ್ಕೆ ತಕ್ಕಂತೆ ತೆರಿಗೆ ಪಾಲು ಸಿಗುತ್ತಿಲ್ಲ. ರಾಜ್ಯದ ಸಂಸದರು ಸಂಸತ್ತಿನಲ್ಲಿ ಹಕ್ಕೊತ್ತಾಯ ಮಂಡಿಸದೆ ಮೌನವಾಗಿರುವುದು ಶೋಚನೀಯ.

ಬೀರಪ್ಪ ಡಿ. ಡಂಬಳಿ, ಅಥಣಿ

> **ಬುರುಡೆ**
>
> ಅಂತೂ ಮತ್ತೆ ಸಾಬೀತಾಯ್ತು
> ಬಿಟ್ಟರೆ ಸದಾ ಬುರುಡೆ
> ಬರುವ ಫಲಿತಾಂಶ
> ಸದಾ ಬರಡೇ!
>
> **ಆರ್. ಸುನೀಲ್,** ತರೀಕೆರೆ

ಜೀವಪೋಷಕ ಉದ್ಯೋಗ ಸೃಷ್ಟಿಸಿ

ದೇಶದಲ್ಲಿ ಆನ್‌ಲೈನ್ ಗೇಮಿಂಗ್ ಹುಚ್ಚಾಟಕ್ಕೆ ಸಿಲುಕಿ ಲಕ್ಷಾಂತರ ಜನರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇ–ಆಟಗಳು ಜನರ ಜೀವ, ಹಣ ಹಾನಿಯ ಜೊತೆಗೆ ಕೌಟುಂಬಿಕ ಕಲಹಕ್ಕೂ ಕಾರಣವಾಗಿವೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರವು ಕಾನೂನಿನ ಮೂಗುದಾರ ಹಾಕುತ್ತಿರುವುದು ಸರಿಯಾಗಿದೆ.

ಆನ್‌ಲೈನ್ ರಿಯಲ್ ಮನಿ ಗೇಮಿಂಗ್ ನಿಷೇಧದಿಂದ 2 ಲಕ್ಷ ಉದ್ಯೋಗಗಳು ಮತ್ತು ವರಮಾನ ನಷ್ಟವಾಗಲಿದೆ ಎಂಬ ಕೂಗು ಕೇಳಿಬರುತ್ತಿದೆ. ಈ ಕೂಗಿಗೆ ಮನ್ನಣೆ ಕೊಡಬೇಕಿಲ್ಲ. ಜೂಜು ಉದ್ಯೋಗವೇ ಅಲ್ಲ. 'ಜೀವಪೋಷಕ ಉದ್ಯೋಗಗಳನ್ನು ನಾವು ಮಾಡಬೇಕು, ಜೀವಕ್ಕೆ ಹಾನಿ ಮಾಡುವಂತಹ ಕೆಲಸ ಮಾಡಬಾರದು' ಎಂದು ಗೌತಮ ಬುದ್ಧ ಹೇಳಿದ್ದಾನೆ. ಸಮಾಜವನ್ನು ಪೋಷಿಸುವ ಉದ್ಯೋಗಗಳ ಸೃಷ್ಟಿಗೆ ಸರ್ಕಾರದ ಚಿತ್ತ ಹರಿಯಬೇಕಿದೆ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಮಧ್ಯಮ ವರ್ಗಕ್ಕೆ ದರ ಏರಿಕೆಯ ಬರೆ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಒಂದಾದ ಮೇಲೆ ಒಂದರಂತೆ ದರ ಏರಿಕೆ ಮಾಡುತ್ತಿದೆ. ಇದರ ಪರಿಣಾಮ ಮಧ್ಯಮ ವರ್ಗದ ಜನರು ಜೀವನ ನಡೆಸುವುದೇ ಕಷ್ಟಕರವಾಗಿದೆ. ವಿದ್ಯುತ್, ನೀರು, ಬಸ್, ಹಾಲು, ಪ್ರಯಾಣ ದರ ಏರಿಸಿದ್ದ ಸರ್ಕಾರ, ಈಗ ದಸ್ತಾವೇಜುಗಳ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಹೆಚ್ಚಿಸಿದೆ. ಇನ್ನು ಮುಂದೆ ಗ್ರಾಮೀಣ ಪ್ರದೇಶದ ಅವಿಭಕ್ತ ಕುಟುಂಬದ ಸದಸ್ಯರು ಆಸ್ತಿ ಭಾಗ ಪತ್ರ ಮಾಡಿಕೊಳ್ಳಲು ಮುದ್ರಾಂಕ ಇಲಾಖೆಗೆ ದುಪ್ಪಟ್ಟು ದರ ತೆರಬೇಕಾಗಿದೆ.

ಶ್ರೀನಿವಾಸ ರಾಂಪುರ, ಚನ್ನಪಟ್ಟಣ

ಸಲಹೆಗೆ ಶುಲ್ಕ: ಕೃಷಿ ವಿವಿ ನಡೆ ಸರಿಯಲ್ಲ

'ಕೃಷಿ ವಿ.ವಿ.ಯಿಂದ ಸಲಹೆಗೆ ಶುಲ್ಕ' ಸುದ್ದಿ ಓದಿ ಅಚ್ಚರಿಯಾಯಿತು (ಪ್ರ.ವಾ., ಆಗಸ್ಟ್ 31). ರೈತರಿಗೆ ವ್ಯವಸಾಯ ಪದ್ಧತಿಯ ಉನ್ನತೀಕರಣಕ್ಕೆ ಅಗತ್ಯವಿರುವ ಸಲಹೆ, ಸಹಕಾರ, ತರಬೇತಿ ನೀಡುವುದು ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಕೃಷಿ ವಿಶ್ವವಿದ್ಯಾಲಯಗಳ ಜವಾಬ್ದಾರಿ. ಕೃಷಿ ವಿಶ್ವವಿದ್ಯಾಲಯದ ಮೂಲ ಉದ್ದೇಶವೇ ಬೋಧನೆ, ಸಂಶೋಧನೆ ಮತ್ತು ಪ್ರಸಾರ. ದೇಶವು ಆಹಾರದ ಸಮಸ್ಯೆ ಎದುರಿಸುತ್ತಿದ್ದಾಗ 'ಹಸಿರು ಕ್ರಾಂತಿ' ಉದ್ದೇಶದಿಂದ ಪ್ರಾರಂಭವಾದ ಕೃಷಿ ವಿಶ್ವವಿದ್ಯಾಲಯಗಳು, ಈಗ ತಮ್ಮ ಮೂಲ ಉದ್ದೇಶವನ್ನೇ ಮರೆಯುತ್ತಿರುವುದು ವಿಪರ್ಯಾಸ.

ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಜನರಿಗೆ ಕೃಷಿ ಕ್ಷೇತ್ರವು ಉದ್ಯೋಗಾವಕಾಶ ಒದಗಿಸಿದೆ. ಸರ್ಕಾರದ ಧನಸಹಾಯದಿಂದ ನಡೆಯುತ್ತಿರುವ ಕೃಷಿ ವಿಶ್ವವಿದ್ಯಾಲಯಗಳು ರೈತರಿಗೆ ಮತ್ತು ರೈತರಾಗುವ ಬಯಕೆ ಇದ್ದವರಿಗೆ ಇನ್ನಷ್ಟು ಉತ್ತೇಜನ ನೀಡಬೇಕು. ವಾಣಿಜ್ಯೋದ್ಯಮದ ಹಾದಿ ಹಿಡಿಯುವುದು ಸರಿಯಲ್ಲ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಚುರುಮುರಿ



ತೂತು ಬಿದ್ದ ಬೊಕ್ಕಸ!

• ಸುಮಂಗಲಾ

'ಅಯ್ಯೊ... ಅಯ್ಯೋ... ಹೊಳೇಲಿ ಹುಣಿಸೇಹಣ್ಣು ತೊಳೆದ್ಹಂಗೆ 600 ಕೋಟಿ ರೂಪಾಯಿ ಹೋತು' ಬೆಕ್ಕಣ್ಣ ಬಾಯಿ ಬಡಿದುಕೊಂಡಿತು.

'ಯಾರ ರೊಕ್ಕ? ಎಲ್ಲಿ ಹೋತು?' ನನಗೂ ಗಾಬರಿಯಾಯಿತು.

'ಇನ್ಯಾರಿದ್ದು...? ಸರ್ಕಾರದ ಬೊಕ್ಕಸಕ್ಕೆ ಬರಬೇಕಿದ್ದ ಹಣ...!'

ಬೆಂಗಳೂರಿನಲ್ಲಿ ಪ್ರಮುಖವಾದ ಜಾಗದಲ್ಲಿ ಒಂದು ಐಷಾರಾಮಿ ಹೋಟೆಲ್ಲಿಗೆ ಟೆಂಡರ್ ಇಲ್ಲದೆ, ಕೆಲವು ಅಧಿಕಾರಿಗಳು ಬ್ಯಾಡ ಅಂದ್ರೂ ಕೇಳದೇ ಭಯಂಕರ ಕಡಿಮೆ ಬೆಲೆಗೆ ಗುತ್ತಿಗೆ ಕೊಟ್ಟಿದ್ದರಿಂದ 600 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ನಷ್ಟವೆಂಬ ಸುದ್ದಿಯನ್ನು ಬೆಕ್ಕಣ್ಣ ಓದಿತು.

'ಸರ್ಕಾರದ ಬೊಕ್ಕಸಕ್ಕೆ ನಷ್ಟ... ಆದರೆ ಯಾರೋ ರಾಜಕಾರಣಿಗಳ, ಉನ್ನತ ಅಧಿಕಾರಿಗಳ ಜೇಬಿಗೆ ಲಾಭವಂತೂ ಆಗಿರತೈತಿ' ಎಂದೆ ಸಿಟ್ಟಿನಿಂದ.

'ಈ 600 ಕೋಟಿ ಜುಜುಬಿ ಅನ್ನಬೌದು. ಗಣಿ ಹಗರಣ ನೆನಪೈತಿ ತಾನೆ? ಒಟ್ಟು ಸುಮಾರು 19 ಕೋಟಿ ಮೆಟ್ರಿಕ್ ಟನ್ ಅದಿರು ಅಕ್ರಮ ರಫ್ತಿನಿಂದಾಗಿ ಅಂದಾಜು 78,245 ಕೋಟಿ ರೂಪಾಯಿ ಬೊಕ್ಕಸಕ್ಕೆ ನಷ್ಟವಾಗೈತಂತೆ' ಬೆಕ್ಕಣ್ಣ ಗುರುಗುಟ್ಟಿತು.

'ಈ ಥರಾ ಕೋಟಿಗಟ್ಟಲೆ ಹಣ ನಷ್ಟವಾಗೋದನ್ನು ತಪ್ಪಿಸಿದ್ದರೆ ಎಷ್ಟ್ ಜನ ಬಡವ್ರಿಗೆ ಮನೆ ಕಟ್ಟಿಸಬೌದಿತ್ತು' ಎಂದೆ.

'ಅಷ್ಟು ರೊಕ್ಕದಾಗೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗೆ, ಸರ್ಕಾರಿ ಶಾಲೆಗಳಿಗೆ, ರೈತರಿಗೆ ಬೇಕಾಗಿರೋ ಸೌಲಭ್ಯಗಳನ್ನ ಒದಗಿಸಬಹುದಿತ್ತು' ಬೆಕ್ಕಣ್ಣ ಪಟ್ಟಿ ಮುಂದುವರಿಸಿತು.

'ಗಣಿ ಹಗರಣ ಪ್ರಕರಣಗಳಿಗೆ ಮರುಜೀವ ಕೊಡತೀವಿ ಅಂತ ಸಿಎಮ್ಮು ಮೊನ್ನೆ ಗುಡುಗಿದಾರೆ... ಕಾದು ನೋಡೂಣು'. ನಾನು ಆಶಾಭಾವದಿಂದ ಹೇಳಿದೆ.

'ನಾವು ನಷ್ಟದ ಅಂಕಿ ಸಂಖ್ಯೆ ಹೇಳಿ ಬಾಯಿ ತುರಿಕೆ ಕಡಿಮೆ ಮಾಡಿಕೋತೀವಿ ಅಷ್ಟೆ. ಅಕ್ರಮ ಮಾಡಿದೋರು ಆ ರೊಕ್ಕದಲ್ಲಿ ತಿಂದು ತೇಗಿ, ಮಿಕ್ಕಿದ್ದನ್ನು ಎಲ್ಲಿ ಅಡಗಿಸಿಡಬೇಕೋ ಅಲ್ಲಿಟ್ಟಾಗಿದೆ! ಬೊಕ್ಕಸಕ್ಕೂ ತೂತು, ಶ್ರೀಸಾಮಾನ್ಯರ ಜೇಬಂತೂ ಮೊದಲೇ ತೂತು!' ಎಂದ ಬೆಕ್ಕಣ್ಣ ಪಕಪಕನೆ ನಕ್ಕಿತು.

ಸಂಗತ

ಗೆಲುವಿನ ಸೂತ್ರ; ಹಿಂಸೆಯ ಮುಖ್ಯ ಪಾತ್ರ!

ಇಂದಿನ ಸಿನಿಮಾಗಳ ಯಶಸ್ಸಿನ ಸೂತ್ರಗಳಲ್ಲಿ ಹಿಂಸೆಯೂ ಒಂದಾಗಿದೆ. ಜನರಂಜನೆಯ ರೂಪದಲ್ಲಿ ಸಿನಿಮಾ ಮಾಧ್ಯಮ ಹಿಂಸೆಯನ್ನು ಬಿಂಬಿಸುತ್ತಿದೆ.

• ವಿಶಾಖ ಎನ್.

'ಟಗರು' ಕನ್ನಡ ಸಿನಿಮಾ ಬಿಡುಗಡೆಯಾಗಿತ್ತಷ್ಟೇ. ತಮ್ಮೊಳಗಿನ ಕೆಟ್ಟದ್ದನ್ನೆಲ್ಲ ಹೊರಗೆ ಹಾಕಲು ಆ ಸಿನಿಮಾದ ಪಾತ್ರ ಅವಕಾಶ ಒದಗಿಸಿಕೊಟ್ಟಿತು ಎಂದು ಡಾಲಿ ಧನಂಜಯ ಪ್ರತಿಕ್ರಿಯಿಸಿದ್ದರು. ಅವರ ಹೆಸರಿನ ಪಕ್ಕದ 'ಡಾಲಿ' ಎಂಬ ವಿಶೇಷಣ ಬಂದದ್ದೇ ಆ ಸಿನಿಮಾ ಪಾತ್ರದಿಂದ.

'ಕೆಜಿಎಫ್' ಸಿನಿಮಾದ ಎರಡು ಭಾಗಗಳ ವಸ್ತು ವಿಷಯ ಗಮನಿಸಿ. ಚಿನ್ನದ ಗಣಿಗಳಲ್ಲಿ ಕೆಲಸ ಮಾಡಿದ ಜೀತದಾಳುಗಳ ಬದುಕು–ಬವಣೆ ಸಿನಿಮಾಗಳಲ್ಲಿ ಅಡಗಿದೆ. ಆದರೆ, ಅದನ್ನು ಗುಪ್ತಗಾಮಿನಿಯಾಗಿಸಿ, ನಾಯಕನ ಮೂಲಕ ಹಿಂಸಾವಿನೋದ ಉಣಬಡಿಸಿ, ನಿರ್ದೇಶಕ ಪ್ರಶಾಂತ್ ನೀಲ್ ನಿರ್ದಿಷ್ಟ ಶೈಲಿಯೊಂದನ್ನು ತೇಲಿಬಿಟ್ಟರು. ಅದಕ್ಕೂ ಮೊದಲು ಹಿಂಸಾತ್ಮಕ ದೃಶ್ಯಗಳು ಸಿನಿಮಾಗಳಲ್ಲಿ ಇರಲಿಲ್ಲ ಎಂದೇನೂ ಅಲ್ಲ. ಅದರ ಬಾಕ್ಸಾಫೀಸ್ ಗಳಿಕೆಯು ಜನಪ್ರಿಯ ಸಿನಿಮಾ ವ್ಯಾಕರಣದ ಬೇರೆಯದೇ ಒಂದು ಮಾದರಿಗೆ ಯಶಸ್ಸಿನ ರುಜು ಹಾಕಿತು.

ಇತ್ತೀಚಿನ ವರ್ಷಗಳಲ್ಲಿ ಯಶಸ್ವಿಯಾಗಿರುವ ಅನೇಕ ಸಿನಿಮಾಗಳಲ್ಲಿ ಹೆಚ್ಚು ಹಿಂಸಾವಿನೋದ ಇರುವುದನ್ನು ಗುರುತಿಸಬಹುದು. 'ಜೈಲರ್' ತಮಿಳು ಸಿನಿಮಾದಲ್ಲಿ ವಯಸ್ಸಾದ ಪಾತ್ರಧಾರಿ ರಜನೀಕಾಂತ್, ಖೂಳರನ್ನು ಶಸ್ತ್ರಾಸ್ತ್ರಗಳಿಂದ ಕೊಚ್ಚುತ್ತಾ ಬಂದು, ಕೊನೆಗೆ ತಮ್ಮ ಮಗನೇ ದ್ರೋಹಿ ಎನ್ನುವುದನ್ನು ತಿಳಿದು, ಅವನನ್ನೂ ಶಿಕ್ಷಿಸುವ ದೃಶ್ಯವೊಂದು ಇದೆ. ಮಗನನ್ನು ತಿದ್ದಲಾಗದ ತಂದೆಯ ಹಿಂಸಾ ಪ್ರಕಟಣೆ ಎಂದು ಅದನ್ನು ಭಾವಿಸುವುದಾದರೆ, ಅದು ಅನುಕರಣೀಯವಂತೂ ಅಲ್ಲ. ತಕ್ಷಣಕ್ಕೆ ನಾಯಕನ ಧಾರ್ಷ್ಟ್ಯದ ಚಮಕ್ ಆಗಿ ಅದಕ್ಕೆ ಚಪ್ಪಾಳೆ ಸಲ್ಲಬಹುದು.



ಪ್ರಶಾಂತ್ ನೀಲ್ ಅವರೇ ಕಟ್ಟಿಕೊಟ್ಟ 'ಸಲಾರ್' ತೆಲುಗು ಸಿನಿಮಾದಲ್ಲಿ ನಾಯಕ ಪ್ರಭಾಸ್ ಅವರಿಗೆ ಇರುವ ಸಂಭಾಷಣೆಗಿಂತ ಹೆಚ್ಚು ಕೆಲಸ ಸಾಹಸ ದೃಶ್ಯಗಳ ಕೊರಿಯೋಗ್ರಾಫರ್‌ಗೆ ಇದೆ. ಅಂಗಾಂಗಗಳನ್ನು ಕತ್ತರಿಸುವ ದೃಶ್ಯಗಳನ್ನು ಹಾಗೆ ಹಸಿ ಹಸಿಯಾಗಿ ಮಂದ ಬೆಳಕಿನಲ್ಲಿ ತೋರಿಸುವುದೇ ಅದರ ಹೆಚ್ಚುಗಾರಿಕೆ ಎನ್ನಬೇಕೆ?

ಆಪ್ಟೋಮೆಟ್ರಿ (ದೃಷ್ಟಿ ಅಧ್ಯಯನ) ಕಲಿತ ತಮಿಳುನಾಡಿನ ಶೈಲೇಶ್ ಕೊಲನು ಎಂಬ ಯುವಕ ತೆಲುಗಿನಲ್ಲಿ 'ಹಿಟ್' ಶೀರ್ಷಿಕೆಯ ಸರಣಿಯಲ್ಲಿ ಮೂರು ಸಿನಿಮಾಗಳನ್ನು ನಿರ್ದೇಶಿಸಿದರು. ಮೂರೂ ಸಿನಿಮಾಗಳ ನಾಯಕರು ಪೊಲೀಸರು. ದುಷ್ಟ ಶಿಕ್ಷೆಗೆ ಅವರೆಲ್ಲರೂ ಹಿಡಿಯುವುದು ಅತಿ ಹಿಂಸಾಮಾರ್ಗವನ್ನೇ. ಮೂರನೇ ಭಾಗದ ಸಿನಿಮಾದ ನಾಯಕ ನಾನಿ. ಅದರಲ್ಲಂತೂ ದುಷ್ಟರ ಅಂಗಾಂಗಗಳನ್ನೇ ಬಗೆದು ತೆಗೆಯುವ ವಿಲಕ್ಷಣ ದರ್ಶನವಿದೆ. ಕಣ್ಣಿನ ಕುರಿತು ಓದಿಕೊಂಡ ಯುವಕನೊಬ್ಬ ಅದನ್ನು ಕೀಳುವಂತಹ ದೃಶ್ಯ ಬರೆದು ಸುಖಿಸುವುದಾದರೂ ಹೇಗೆ ಎನ್ನುವ ಪ್ರಶ್ನೆಯೊಂದು ಕಾಡುತ್ತದೆ.

ಇವರಷ್ಟೇ ಅಲ್ಲ, 'ಅರ್ಜುನ್ ರೆಡ್ಡಿ' ಹಾಗೂ 'ಅನಿಮಲ್' ತರಹದ ಪುರುಷಾಹಂಕಾರ, ಹಿಂಸಾಮುಚ್ಚಟೆಯ ಸಿನಿಮಾಗಳನ್ನು ನಿರ್ದೇಶಿಸಿದ ಸಂದೀಪ್ ರೆಡ್ಡಿ ವಂಗ ಅವರೂ ಫಿಸಿಯೊಥೆರಪಿಯ ವೈದ್ಯ ಶಿಕ್ಷಣ ಪಡೆದವರು. 'ಮೋಹ್ ಮೋಹ್ ಕೆ ಧಾಗೆ' ಎಂಬ ಹಿಂದಿಯ ಅತಿ ಮಧುರ ಗೀತೆ ಬರೆದ ವರುಣ್ ಗ್ರೋವರ್ ಅವರು 'ಸೇಕ್ರೆಡ್ ಗೇಮ್ಸ್' ರೀತಿಯ ಹಿಂಸಾಮಾರ್ಗದ ವೆಬ್ ಸರಣಿಗೆ ದೃಶ್ಯಗಳನ್ನು ಬರೆಯಲು ಸಾಧ್ಯವಾದುದಾದರೂ ಹೇಗೆ?

ಹಿಂದೊಮ್ಮೆ ಬ್ಯಾಂಕ್ ಉದ್ಯೋಗಿಯಾಗಿದ್ದ ಲೋಕೇಶ್ ಕನಕರಾಜ್ ಅವರನ್ನು ಮೊದಲು ಕಿರುಚಿತ್ರ ಸ್ಪರ್ಧೆಯ ಮೂಲಕ ಬೆನ್ನು ತಟ್ಟಿದವರು ಕಾರ್ತಿಕ್ ಸುಬ್ಬರಾಜ್. 'ಮೆಕ್ಯಾಟ್ರಾನಿಕ್ಸ್' ಎಂಜಿನಿಯರಿಂಗ್ ಕಲಿತಿದ್ದ ಕಾರ್ತಿಕ್ ಅವರು ಹಿಂಸೆಯನ್ನು ಹಾಸ್ಯಕ್ಕೆ ಬೆರೆಸಿದಂತಹ ಸಿನಿಮಾಗಳನ್ನು ಮಾಡಿ ಗೆದ್ದವರು. ಲೋಕೇಶ್ ನಿರ್ದೇಶನದ 'ಕೂಲಿ' ತಮಿಳು ಸಿನಿಮಾ ಸೂಪರ್ ಸ್ಟಾರ್ ರಜನೀಕಾಂತ್ ಅವರಿಗೆ ಇನ್ನೊಂದು ಹಿಟ್ ಕೊಟ್ಟಿದೆ.

'ಮಾಸ್ಟರ್' ತಮಿಳು ಸಿನಿಮಾದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರ ಕ್ರೌರ್ಯಕ್ಕೆ ಕನ್ನಡಿ ಹಿಡಿದಿದ್ದ ಲೋಕೇಶ್, 'ಕೂಲಿ' ಸಿನಿಮಾದಲ್ಲಿ ಕೂತಲ್ಲೇ ವ್ಯಕ್ತಿಯೊಬ್ಬನನ್ನು ಬೂದಿ ಮಾಡಿಬಿಡಬಲ್ಲ ಅನ್ವೇಷಣೆಯೊಂದನ್ನು ಸಣ್ಣಪುಟ್ಟ ವಿವರಗಳೊಂದಿಗೆ ತೋರಿಸಿದ್ದಾರೆ.

'ಅಂತ' ಕನ್ನಡ ಸಿನಿಮಾ ಬಂದಾಗ ಉಗುರುಗಳನ್ನು ಕಿತ್ತುಹಾಕುವ ದೃಶ್ಯ ನೋಡಿಯೇ ಹಿಂಸೆ ಎಂದಿದ್ದವರು ನಾವು. ನಾಯಕನನ್ನು ಕಟ್ಟಿಹಾಕಿ ಚಾಟಿ ಏಟು ಕೊಡುವ ದೃಶ್ಯದ ಅವಧಿ ತುಸು ಲಂಬಿಸಿದರೂ ಸಂಕಟಪಡುತ್ತಿದ್ದವರು ನಾವು. ಹೀಗಿರುವಾಗ, ಈ ನಿರ್ದೇಶಕರು ಅದ್ಯಾವ ಮನಃಸ್ಥಿತಿಯಲ್ಲಿ ಇಷ್ಟೆಲ್ಲ ಹಿಂಸಾ ಸರಕನ್ನು ಶಿಲ್ಪವಾಗಿಸುತ್ತಿದ್ದಾರೆ ಎನ್ನುವುದು ಈ ಹೊತ್ತಿನ ಕಾಡುವ ಪ್ರಶ್ನೆಯಾಗಿದೆ.

ಈ ಬರಹದಲ್ಲಿ ಉದಾಹರಿಸಿರುವ ಸಿನಿಮಾಗಳೆಲ್ಲವೂ ಜನಪ್ರಿಯತೆ ಹಾಗೂ ಗಳಿಕೆಯ ದೃಷ್ಟಿಯಲ್ಲಿ ಅನುಕರಣೀಯ ಎನಿಸಿಕೊಂಡಿವೆ. ಅದೇ ಕಾರಣಕ್ಕೆ ಕತ್ತಲು ಕತ್ತಲಾದ ಸಿನಿಮಾಟೊಗ್ರಫಿಯಲ್ಲಿ ರಕ್ತ ಚಿಮ್ಮುವ ಕಥನಗಳ ಬಿಂಬಗಳು ಚೆಲ್ಲಾಪಿಲ್ಲಿಯಾಗುತ್ತಿವೆ. ಇವನ್ನೆಲ್ಲ ತಲೆಯೊಳಗೆ ತುಂಬಿಕೊಳ್ಳುವ ಕೆಲವು ತಲೆಮಾರುಗಳ ಮಿದುಳುಗಳಲ್ಲಿನ ಅದ್ಯಾವ ಗ್ರಂಥಿಯು ಹಿಂಸಾರಸವನ್ನು ಎಷ್ಟರ ಮಟ್ಟಿಗೆ ಒಸರುವುದೋ ಎಂಬ ಆತಂಕವೂ ಆವರಿಸಿಕೊಳ್ಳುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಚೀನಾದೊಂದಿಗೆ ದ್ವಿಪಕ್ಷೀಯ ವ್ಯಾಪಾರ; ಭಾರತದ ಪಾಲು ಗಣನೀಯ ಕುಸಿತ

ವ್ಯಾಪಾರ ಕೊರತೆ: ಕಳವಳಕಾರಿ ಮಟ್ಟಕ್ಕೆ



ಪ್ರಧಾನಿ ನರೇಂದ್ರ ಮೋದಿ ಅವರು ಚೀನಾಕ್ಕೆ ಏಳು ವರ್ಷಗಳ ಬಳಿಕ ಭೇಟಿ ನೀಡಿ ಅಲ್ಲಿನ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿ ಮಾಡಿದ್ದಾರೆ. ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿಯವರು ತೆರಳಿದ್ದರೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಶೇ 50ರಷ್ಟು ಸುಂಕ ಹೇರಿದ ಬೆನ್ನಲ್ಲೇ ಇಬ್ಬರೂ ನಾಯಕರು ಮಾತುಕತೆ ನಡೆಸಿರುವುದಕ್ಕೆ ಜಾಗತಿಕ ಮಟ್ಟದಲ್ಲಿ ಮಹತ್ವ ದೊರೆತಿದೆ. ಗಡಿ ವಿವಾದ, ದ್ವಿಪಕ್ಷೀಯ ವ್ಯಾಪಾರ, ಭಯೋತ್ಪಾದನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಇಬ್ಬರೂ ನಾಯಕರು ಚರ್ಚೆ ನಡೆಸಿದ್ದಾರೆ. ಇದೇ ಹೊತ್ತಿನಲ್ಲಿ ಹಲವು ಕೈಗಾರಿಕಾ ವಲಯಗಳಿಗೆ ಸಂಬಂಧಿಸಿದ ಸರಕುಗಳಿಗೆ ಚೀನಾವನ್ನು ಅವಲಂಬಿಸಿರುವ ಭಾರತವು, ಅದರೊಂದಿಗೆ ಹೊಂದಿರುವ ವ್ಯಾಪಾರ ಕೊರತೆ ಕಳವಳಕಾರಿ ಮಟ್ಟಕ್ಕೆ ಏರಿಕೆ ಕಂಡಿರುವ ಸಂಗತಿ ಮುನ್ನೆಲೆಗೆ ಬಂದಿದೆ



ಪ್ರಜಾವಾಣಿ ವಾರ್ತೆ

ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ 2020ರ ಜೂನ್‌ನಲ್ಲಿ ನಡೆದ ಸೇನಾ ಸಂಘರ್ಷದ ಬಳಿಕ ಭಾರತ–ಚೀನಾ ನಡುವಿನ ಗಡಿವಿವಾದ ಮತ್ತಷ್ಟು ಬಿಗಡಾಯಿಸಿ ದ್ವಿಪಕ್ಷೀಯ ಸಂಬಂಧದಲ್ಲಿ ಉಂಟಾಗಿದ್ದ ಬಿರುಕನ್ನು ಸರಿಪಡಿಸುವ ಪ್ರಯತ್ನ ಕಳೆದ ವರ್ಷದಿಂದ ಎರಡೂ ರಾಷ್ಟ್ರಗಳು ಮಾಡುತ್ತಿವೆ. ಈಗ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಹೇರಿಕೆಯಿಂದಾಗಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾಗಳನ್ನೊಳಗೊಂಡ ‘ಬ್ರಿಕ್ಸ್’ ಇನ್ನಷ್ಟು ಸಂಘಟಿತವಾಗುತ್ತಿದೆ. ಇದೇ ನೆಪದಲ್ಲಿ, ದ್ವಿಪಕ್ಷೀಯ ಸಂಬಂಧವನ್ನು ಇನ್ನಷ್ಟು ಸುಧಾರಿಸುವತ್ತ ಭಾರತ–ಚೀನಾ ಹೆಜ್ಜೆ ಇಟ್ಟಿವೆ. ಇದರ ಮುಂದುವರಿದ ಭಾಗವಾಗಿ ತಿಯಾನ್‌ಜಿನ್‌ನಲ್ಲಿ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಜಿನ್‌ಪಿಂಗ್ ಅವರ ನಡುವೆ ದ್ವಿಪಕ್ಷೀಯ ಮಾತುಕತೆ ನಡೆದಿದೆ ಎಂದು ಹೇಳಲಾಗುತ್ತಿದೆ. ಗಡಿ ವಿವಾದ ಬಗೆಹರಿಸುವುದು, ದ್ವಿಪಕ್ಷೀಯ ವ್ಯಾಪಾರವನ್ನು ಇನ್ನಷ್ಟು ಹೆಚ್ಚಿಸುವುದು, ಭಯೋತ್ಪಾದನೆಯ ವಿರುದ್ಧ ಹೋರಾಡುವುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಇಬ್ಬರೂ ಮಾತುಕತೆ ನಡೆಸಿದ್ದಾರೆ. ದ್ವಿಪಕ್ಷೀಯ ವ್ಯಾಪಾರ ವೃದ್ಧಿಯ ಜೊತೆಗೆ ವ್ಯಾಪಾರ ಕೊರತೆಯ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಿದೆ ಎಂದು ವರದಿಯಾಗಿದೆ.

> **ವ್ಯಾಪಾರ ಕೊರತೆ**
> ಒಂದು ದೇಶವು ನಿರ್ದಿಷ್ಟ ದೇಶಕ್ಕೆ ಮಾಡುವ (ನಿಗದಿತ ಅವಧಿಯಲ್ಲಿ) ರಫ್ತಿನ ಮೌಲ್ಯವು, ಆ ದೇಶದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೌಲ್ಯಕ್ಕಿಂತ ಕಡಿಮೆ ಇದ್ದರೆ, ಅವೆರಡರ ನಡುವಿನ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎನ್ನಲಾಗುತ್ತದೆ.

ಭಾರತ ಮತ್ತು ಚೀನಾದ ನಡುವೆ ದ್ವಿಪಕ್ಷೀಯ ವ್ಯಾಪಾರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದರೂ ಚೀನಾದೊಂದಿಗೆ ಭಾರತ ಹೊಂದಿರುವ ವ್ಯಾಪಾರ ಕೊರತೆಯು ಕಳವಳಕಾರಿ ಮಟ್ಟಕ್ಕೆ ಏರಿದೆ. ಭಾರತವು ಜಗತ್ತಿನ ವಿವಿಧ ರಾಷ್ಟ್ರಗಳೊಂದಿಗೆ ಹೊಂದಿರುವ ವ್ಯಾಪಾರ ಕೊರತೆಗೆ ಹೋಲಿಸಿದರೆ, ಚೀನಾದೊಂದಿಗೆ ಗರಿಷ್ಠ ವ್ಯಾಪಾರ ಕೊರತೆ ಹೊಂದಿದೆ. ಆತಂಕಕಾರಿ ಸಂಗತಿ ಎಂದರೆ, ಈ ಕೊರತೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ದ್ವಿಪಕ್ಷೀಯ ವ್ಯಾಪಾರದಲ್ಲಿ 20 ವರ್ಷಗಳ ಹಿಂದೆ ಭಾರತದ ಪಾಲು ಶೇ 42.3ರಷ್ಟು ಇದ್ದಿದ್ದರೆ, ಅದೀಗ ಶೇ 11.2ಕ್ಕೆ ಕುಸಿದಿದೆ.

2024–25ನೇ ಸಾಲಿನಲ್ಲಿ ವ್ಯಾಪಾರ ಕೊರತೆಯ ಮೌಲ್ಯ ₹8.74 ಲಕ್ಷ ಕೋಟಿ (₹9,921 ಕೋಟಿ ಡಾಲರ್). 2003–2004ರಲ್ಲಿ ಇದ್ದಿದ್ದು ಕೇವಲ ₹9,697 ಕೋಟಿ. ಅಂದರೆ, ಎರಡು ದಶಕಗಳಲ್ಲಿ ಭಾರತದ ವ್ಯಾಪಾರದ ಕೊರತೆ 90 ಪಟ್ಟು ಹೆಚ್ಚಾಗಿದೆ. 2023–24ರಲ್ಲಿ ಈ ಕೊರತೆ ₹7.50 ಲಕ್ಷ ಕೋಟಿಯಷ್ಟಿತ್ತು. ಈ ವರ್ಷದ ಏಪ್ರಿಲ್–ಜುಲೈ ನಡುವಿನ ವ್ಯಾಪಾರದಲ್ಲಿ ಈ ಕೊರತೆ ₹3.58 ಲಕ್ಷದಷ್ಟಿದೆ.

ಚೀನಾದ ಮೇಲೆ ಹೆಚ್ಚಿದ ಅವಲಂಬನೆ: ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 2014ರಲ್ಲಿ ‘ಮೇಕ್ ಇನ್ ಇಂಡಿಯಾ’ ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಘೋಷಿಸಿತ್ತು. ಚೀನಾ ಸೇರಿದಂತೆ ವಿವಿಧ ರಾಷ್ಟ್ರಗಳ ಮೇಲಿನ ಅವಲಂಬನೆಯನ್ನು ತಗ್ಗಿಸುವ ಉದ್ದೇಶದಿಂದ ಇಲ್ಲಿನ ಕಂಪನಿಗಳಿಗೆ ಭಾರತದಲ್ಲೇ ತಯಾರಿಸಲು ಪ್ರೋತ್ಸಾಹ ನೀಡಿ, ದೇಶವನ್ನು ಜಾಗತಿಕ ತಯಾರಿಕಾ ಕೇಂದ್ರವನ್ನಾಗಿ ರೂಪಿಸುವುದು ಮತ್ತು ಆ ಮೂಲಕ ದೇಶದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ‘ಮೇಕ್ ಇನ್ ಇಂಡಿಯಾ’ ಅನುಷ್ಠಾನಕ್ಕೆ ಬಂದು 11 ವರ್ಷಗಳಾಗಿದ್ದರೂ ಅದರ ನೈಜ ಉದ್ದೇಶ ಈಡೇರಿಲ್ಲ. ಮೊಬೈಲ್, ಕಂಪ್ಯೂಟರ್, ಸೋಲಾರ್ ಘಟಕಗಳು, ಕೆಲವು ರಕ್ಷಣಾ ಸಲಕರಣೆಗಳನ್ನು ಇಲ್ಲಿ ಜೋಡಿಸಲಾಗುತ್ತಿದ್ದರೂ (ಅಸೆಂಬಲ್) ಅವುಗಳ ಬಿಡಿಭಾಗಗಳು ವಿದೇಶಗಳಿಂದ ವಿಶೇಷವಾಗಿ ಚೀನಾದಿಂದಲೇ ಬರುತ್ತಿವೆ. ಇದು ಸಂಪೂರ್ಣ ‘ಮೇಕ್ ಇನ್ ಇಂಡಿಯಾ’ ಅಲ್ಲ ಎಂಬುದು ತಜ್ಞರ ವಾದ. ಹೊರ ದೇಶಗಳಿಂದ ಮಾಡಲಾಗುತ್ತಿರುವ ಆಮದು ಕಡಿಮೆ ಮಾಡಬೇಕಾದರೆ, ಭಾರತದಲ್ಲೇ ವಸ್ತುಗಳನ್ನು ತಯಾರಿಸಬೇಕು. ಸ್ಥಳೀಯವಾಗಿ ತಂತ್ರಜ್ಞಾನ ಅಭಿವೃದ್ಧಿ ಪಡಿಸಬೇಕು ಎಂಬುದು ಅವರ ಸಲಹೆ.

ದೇಶೀಯವಾಗಿ ತಯಾರಿಕೆಗೆ ಉತ್ತೇಜನ ನೀಡುವುದಕ್ಕಾಗಿ ಕೇಂದ್ರ ಸರ್ಕಾರ 14 ವಲಯಗಳಲ್ಲಿ ತಯಾರಿಕೆಗೆ ಸಂಬಂಧಿಸಿದ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಗಳನ್ನು ಘೋಷಿಸಿದೆ. ಅಲ್ಲದೇ, ಕಳಪೆ ಗುಣಮಟ್ಟದ ಸರಕುಗಳ ಆಮದಿಗೆ ಕಡಿವಾಣ ಹಾಕುವುದಕ್ಕಾಗಿ ಕಠಿಣ ಗುಣಮಟ್ಟ ಮಾನದಂಡಗಳು, ಪರೀಕ್ಷೆ ಮತ್ತು ಪ್ರಮಾಣೀಕರಣ ವ್ಯವಸ್ಥೆಯನ್ನು ರೂಪಿಸಿದೆ. ಪೂರೈಕೆ ವ್ಯವಸ್ಥೆಗಾಗಿ ಒಂದರ ಬದಲು ವಿವಿಧ ಮೂಲಗಳನ್ನು ಅವಲಂಬಿಸಬೇಕು ಎಂದು ಉದ್ದಿಮೆಗಳಿಗೆ ಸೂಚಿಸಿದೆ. ಇಂತಹ ಹಲವು ಕ್ರಮಗಳನ್ನು ಕೈಗೊಂಡಿದ್ದರೂ ಆಮದಿನ ಮೇಲಿನ ಅವಲಂಬನೆಯನ್ನು ಗಣನೀಯವಾಗಿ ತಗ್ಗಿಸಲು ಸಾಧ್ಯವಾಗಿಲ್ಲ.


ಭಾರತವು ಈಗ ಬಹುತೇಕ ಎಲ್ಲ ವಲಯಗಳಲ್ಲೂ ಸರಕುಗಳಿಗಾಗಿ ಚೀನಾವನ್ನೇ ಅವಲಂಬಿಸಿದೆ. ಪ್ರತಿಯೊಂದು ಕೈಗಾರಿಕಾ ವಲಯಕ್ಕೂ ಪೂರೈಕೆಯಾಗುತ್ತಿರುವ ವಸ್ತುಗಳಲ್ಲಿ ಚೀನಾವೇ ಮೇಲುಗೈ ಸಾಧಿಸಿದೆ. ಔಷಧಗಳು, ಎಲೆಕ್ಟ್ರಾನಿಕ್ಸ್‌ನಿಂದ ಹಿಡಿದು ಕಟ್ಟಡ ನಿರ್ಮಾಣ ವಸ್ತುಗಳು, ನವೀಕರಿಸಬಹುದಾದ ಇಂಧನ, ಗ್ರಾಹಕರ ಸರಕುಗಳು, ಹೀಗೆ ಎಲ್ಲದರಲ್ಲೂ ಚೀನಾದ್ದೇ ಪಾರಮ್ಯ. ಇದು ಕಳವಳಕಾರಿ ಸಂಗತಿ ಎಂದು ಚಿಂತಕರ ಚಾವಡಿ ಜಿಟಿಆರ್‌ಐ (ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್) ಹೇಳಿದೆ.

ಅರಿಥ್ರೋಮೈಸಿನ್‌ನಂತಹ ಆ್ಯಂಟಿಬಯಾಟಿಕ್‌ಗಳ ಪೂರೈಕೆಯಲ್ಲಿ ಚೀನಾದ ಪಾಲು ಶೇ 97.7ರಷ್ಟಿದೆ. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಶೇ 96.8ರಷ್ಟು ಸಿಲಿಕಾನ್ ಬಿಲ್ಲೆಗಳನ್ನು (ಸಿಲಿಕಾನ್ ವೇಫರ್ಸ್) ಚೀನಾವು ಭಾರತಕ್ಕೆ ರಫ್ತು ಮಾಡುತ್ತದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಶೇ 82.7ರಷ್ಟು ಸೌರಕೋಶಗಳು ಚೀನಾದಿಂದ ಬರುತ್ತವೆ. ಭಾರತಕ್ಕೆ ಪೂರೈಕೆಯಾಗುವ ಲಿಥಿಯಂ ಬ್ಯಾಟರಿಗಳಲ್ಲಿ ಚೀನಾದ ಕೊಡುಗೆ ಶೇ 75.2ರಷ್ಟಿದೆ.

‘ಕಚ್ಚಾ ವಸ್ತುಗಳು, ವಾಹನಗಳು, ಮೊಬೈಲ್, ಕಂಪ್ಯೂಟರ್ ಬಿಡಿಭಾಗಗಳು, ಯಂತ್ರೋಪಕರಣಗಳು, ಔಷಧಿಗಳಿಗೆ ಸಂಬಂಧಿಸಿದ ವಸ್ತುಗಳನ್ನು ಚೀನಾದಿಂದ ಆಮದು ಮಾಡಿಕೊಂಡು, ಉತ್ಪನ್ನಗಳನ್ನು ಇಲ್ಲಿ ತಯಾರಿಸಿ ನಂತರ ರಫ್ತು ಮಾಡಲಾಗುತ್ತದೆ’ ಎಂದು ಹೇಳುತ್ತದೆ ಹಣಕಾಸು ಸಚಿವಾಲಯ. ದೇಶೀಯ ಮಾರುಕಟ್ಟೆಯಲ್ಲಿ ಈ ವಸ್ತುಗಳ ಬೇಡಿಕೆ ಮತ್ತು ಪೂರೈಕೆ ನಡುವೆ ದೊಡ್ಡ ಮಟ್ಟದ ಅಂತರ ಇರುವುದರಿಂದ ಕಚ್ಚಾ ವಸ್ತುಗಳು ಮತ್ತು ಬಿಡಿಭಾಗಗಳನ್ನು ಆಮದು ಮಾಡಿಕೊಳ್ಳಬೇಕಾಗಿದೆ ಎಂಬುದು ಅದರ ಸಮಜಾಯಿಷಿ.

ಆಧಾರ: ಪಿಟಿಐ, ಹಣಕಾಸು ಸಚಿವಾಲಯ, ಬೀಜಿಂಗ್‌ನಲ್ಲಿನ ಭಾರತದ ರಾಯಭಾರ ಕಚೇರಿ ವೆಬ್‌ಸೈಟ್ ಮಾಧ್ಯಮ ವರದಿಗಳು





ಭಾರತ– ಚೀನಾ ದ್ವಿಪಕ್ಷೀಯ ವ್ಯಾಪಾರ (ಲಕ್ಷ ಕೋಟಿಗಳಲ್ಲಿ)

ವರ್ಷ	ಭಾರತದ ರಫ್ತು	ಭಾರತದ ಆಮದು	ಕೊರತೆ	ವ್ಯತ್ಯಾಸ
2019-20	₹1.46	₹5.75	₹4.29	-5.97%
2020-21	₹1.86	₹5.74	₹3.88	5.53%
2021-22	₹1.90	₹8.34	₹6.44	34.41%
2022-23	₹1.35	₹8.68	₹7.33	-1.99%
2023-24	₹1.47	₹8.97	₹7.50	4.02%
2024-25	₹1.26	₹10.00	₹8.74	7.86%
2025-26*	₹0.51	₹3.58	₹3.07	

* ಏಪ್ರಿಲ್– ಜುಲೈ

(ವ್ಯಾಪಾರ ಮೌಲ್ಯವನ್ನು ಲೆಕ್ಕಹಾಕುವಾಗ ಪ್ರತಿ ಡಾಲರ್‌ಗೆ ಈಗಿರುವ ರೂಪಾಯಿ ಮೌಲ್ಯವನ್ನು (₹88.15) ಪರಿಗಣಿಸಲಾಗಿದೆ)

ರಫ್ತು: ಅದಿರುಗಳು, ಅದಿರಿನ ಉಪ ಉತ್ಪನ್ನಗಳು, ಖನಿಜ ಇಂಧನಗಳು, ಖನಿಜ ತೈಲಗಳು ಮತ್ತು ಅವುಗಳ ಉಪ ಉತ್ಪನ್ನಗಳು, ಕಬ್ಬಿಣ, ಉಕ್ಕು ಸೇರಿದಂತೆ ಎಂಜಿನಿಯರಿಂಗ್ ಸಲಕರಣೆಗಳು, ಮೀನು, ಸಿಗಡಿ ಸೇರಿದಂತೆ ವಿವಿಧ ಸಾಗರ ಉತ್ಪನ್ನಗಳು, ಹತ್ತಿ, ಮಸಾಲೆ ಪದಾರ್ಥಗಳು, ಇಂಗಾಲದ ಅಂಶಗಳನ್ನೊಳಗೊಂಡ ರಾಸಾಯನಿಕಗಳು, ಮಸಾಲೆ ಪದಾರ್ಥಗಳು ಇತ್ಯಾದಿ

ಆಮದು: ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್ ಹಾಗೂ ಅವುಗಳ ಬಿಡಿಭಾಗಗಳು ಸೇರಿದಂತೆ ಎಲೆಕ್ಟ್ರಾನಿಕ್ಸ್ ವಸ್ತುಗಳು, ಯಂತ್ರೋಪಕರಣಗಳು, ವಿವಿಧ ಕೈಗಾರಿಕೆಗಳಲ್ಲಿ ಬಳಸುವ ರಾಸಾಯನಿಕಗಳು, ಕಬ್ಬಿಣ ಮತ್ತು ಉಕ್ಕು, ವೈದ್ಯಕೀಯ ಸಲಕರಣೆಗಳು, ಔಷಧಿಗಳು, ಪ್ಲಾಸ್ಟಿಕ್, ರಸಗೊಬ್ಬರಗಳು, ಆಟಿಕೆ, ವಾಹನ ಮತ್ತು ಬಿಡಿಭಾಗಗಳು, ಜವಳಿ ಉತ್ಪನ್ನಗಳು, ಲಿಥಿಯಂ ಬ್ಯಾಟರಿಗಳು, ಅಪರೂಪದ ಲೋಹಗಳು ಇತ್ಯಾದಿ

ಆತಂಕಕಾರಿ ಏಕೆ?

- ಭಾರತದ ಸರಕು ಪೂರೈಕೆ ವ್ಯವಸ್ಥೆಯ ಮೇಲೆ ಚೀನಾ ಹಿಡಿತ ಸಾಧಿಸಬಹುದು
- ಗಡಿ ವಿವಾದ ಸೇರಿದಂತೆ ಉಭಯ ರಾಷ್ಟ್ರಗಳ ನಡುವೆ ಯಾವುದೇ ಬಿಕ್ಕಟ್ಟು ಉದ್ಭವವಾದರೆ ಭಾರತದ ಮೇಲೆ ಒತ್ತಡ ಹೇರುವುದಕ್ಕೆ ಇದನ್ನೇ ಗುರಾಣಿಯನ್ನಾಗಿ ಬಳಸಬಹುದು. ರಫ್ತಿನ ಮೇಲೆ ಚೀನಾ ನಿರ್ಬಂಧ ಹೇರಿದರೆ, ಅದು ಭಾರತದ ಅರ್ಥವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ (ವಾಹನಗಳ ತಯಾರಿಕೆಗೆ ಪ್ರಮುಖವಾಗಿ ಬೇಕಾಗಿದ್ದ ಅಪರೂಪದ ಖನಿಜ ಲೋಹಗಳ ರಫ್ತಿಗೆ ಚೀನಾ ನಿರ್ಬಂಧ ಹೇರಿತ್ತು. ಇದು ಭಾರತದ ವಾಹನ ಉದ್ಯಮದ ಮೇಲೆ ಪರಿಣಾಮ ಬೀರಿತ್ತು)
- ವಿದೇಶಿ ವಿನಿಮಯ ಮೀಸಲಿನ ಮೇಲೆ ಒತ್ತಡ ಬೀಳುತ್ತದೆ
- ವಿದೇಶಿ ಪೂರೈಕೆದಾರರ ಮೇಲೆ ಅವಲಂಬನೆ ಮತ್ತು ಕಡಿಮೆ ಬೆಲೆಯ ವಸ್ತುಗಳ ಆಮದಿನಿಂದ ಸ್ಥಳೀಯ ತಯಾರಕರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ
- ಕರೆನ್ಸಿ ಮೌಲ್ಯದ ಕುಸಿತದಿಂದ ಆಮದು ವೆಚ್ಚ ಹೆಚ್ಚುವುದಲ್ಲದೆ, ಅದು ಹಣದುಬ್ಬರ ಏರಿಕೆಗೆ ಕಾರಣವಾಗಬಹುದು
- ಹೊರದೇಶಗಳ ಮೇಲಿನ ಅವಲಂಬನೆ ದೇಶದ ಕೈಗಾರಿಕಾ ಪ್ರಗತಿಗೆ ಅಡ್ಡಿಯಾಗಬಹುದು

ಕೇಂದ್ರ ಜಾಗೃತ ಆಯೋಗದ (ಸಿವಿಸಿ) ಇತ್ತೀಚಿನ ವಾರ್ಷಿಕ ವರದಿಯು ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ನಡೆಸುತ್ತಿರುವ ತನಿಖೆಯ ಪ್ರಗತಿಯನ್ನು ತೆರೆದಿಟ್ಟಿದೆ. ಸಿಬಿಐ ತನಿಖೆ ನಡೆಸುತ್ತಿರುವ 7,000ಕ್ಕೂ ಹೆಚ್ಚು ಭ್ರಷ್ಟಾಚಾರ ಪ್ರಕರಣಗಳು ವಿವಿಧ ನ್ಯಾಯಾಲಗಳಲ್ಲಿ ವಿಚಾರಣೆಗೆ ಬಾಕಿ ಇವೆ. ಇವುಗಳಲ್ಲಿ 379 ಪ್ರಕರಣಗಳ ವಿಚಾರಣೆ 20 ವರ್ಷಗಳಿಗೂ ಹೆಚ್ಚು ಕಾಲದಿಂದ ನಡೆಯುತ್ತಿದೆ ಎನ್ನುತ್ತದೆ ಈ ವರದಿ.

ಭ್ರಷ್ಟಾಚಾರ: 7,072 ಪ್ರಕರಣ ವಿಚಾರಣೆಗೆ ಬಾಕಿ

ನವದೆಹಲಿ (ಪಿಟಿಐ): ಕೇಂದ್ರ ಜಾಗೃತ ಆಯೋಗವು (ಸಿವಿಸಿ) 2024 ಡಿಸೆಂಬರ್ 31ರವರೆಗಿನ ಅಂಕಿ ಅಂಶವನ್ನು ಬಿಡುಗಡೆ ಮಾಡಿದ್ದು, ಭ್ರಷ್ಟಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಿರುವ ಒಟ್ಟು 7,072 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಉಳಿದಿವೆ. 2,660 ಪ್ರಕರಣಗಳು 10 ವರ್ಷಗಳಿಂದ ವಿಚಾರಣಾ ಹಂತದಲ್ಲೇ ಇವೆ ಎಂದು ಹೇಳಿದೆ.

ವಿಚಾರಣೆಗೆ ಬಾಕಿ ಇರುವ ಭ್ರಷ್ಟಾಚಾರ ಪ್ರಕರಣಗಳು

0-3 ವರ್ಷ	3-5 ವರ್ಷ	5-10 ವರ್ಷ	10-20 ವರ್ಷ	20+ ವರ್ಷ
1,506	791	2,115	2,281	379

ಭ್ರಷ್ಟಾಚಾರ ಪ್ರಕರಣಗಳು ಮಾತ್ರವಲ್ಲ, ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ಮತ್ತು ಆರೋಪಿಗಳು ಸಲ್ಲಿಸಿರುವ ಸುಮಾರು 13,100 ಮೇಲ್ಮನವಿಗಳು/ಮರು ಪರಿಶೀಲನಾ ಅರ್ಜಿಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ. ಇವುಗಳಲ್ಲಿ 606 ಮೇಲ್ಮನವಿಗಳ ವಿಚಾರಣೆ 20 ವರ್ಷಗಳಿಂದ ಹಾಗೂ 1,227 ಮನವಿಗಳ ವಿಚಾರಣೆ 15 ವರ್ಷಗಳಿಂದ ಬಾಕಿ ಉಳಿದಿವೆ. 2024ರಲ್ಲಿ ಸಿಬಿಐ ದಾಖಲಿಸಿದ 644 ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಳಿಸಿ ಆದೇಶ ಪ್ರಕಟಿಸಲಾಗಿದೆ. ಇದರಲ್ಲಿ 392 ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿದೆ. 154 ಪ್ರಕರಣಗಳಲ್ಲಿ ಆರೋಪಿಗಳನ್ನು ನಿರ್ದೋಷಿ ಎಂದು ಘೋಷಿಸಲಾಗಿದೆ. 21 ಪ್ರಕರಣಗಳನ್ನು ಖುಲಾಸೆಗೊಳಿಸಲಾಗಿದೆ. 77 ಪ್ರಕರಣಗಳನ್ನು ಅನ್ಯ ಕಾರಣಗಳಿಗಾಗಿ ವಿಲೇವಾರಿ ಮಾಡಲಾಗಿದೆ. 2024ರಲ್ಲಿ ಶಿಕ್ಷೆಯ ಪ್ರಮಾಣ ಶೇ 69.14ರಷ್ಟಿದ್ದರೆ 2023ರಲ್ಲಿ ಇದು ಶೇ 71.47ರಷ್ಟಿತ್ತು ಎಂದೂ ವರದಿ ಹೇಳಿದೆ.

2024ರ ಅಂತ್ಯದ ವೇಳೆಗೆ ವಿವಿಧ ನ್ಯಾಯಾಲಯಗಳಲ್ಲಿ ಭ್ರಷ್ಟಾಚಾರ ಮತ್ತು ಇತರೆ ಪ್ರಕರಣಗಳು ಸೇರಿ ಸಿಬಿಐ ತನಿಖೆಗೆ ಸಂಬಂಧಿಸಿದ ಒಟ್ಟು 11,384 ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದವು.

2024ರ ಸಿಬಿಐ ತನಿಖೆ ಅಂಕಿ ಅಂಶ

- **807** ಸಿಬಿಐ ದಾಖಲಿಸಿಕೊಂಡ ಒಟ್ಟು ಪ್ರಕರಣ
- **222** ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ದಾಳಿ
- **43** ಅಕ್ರಮ ಆಸ್ತಿ ಗಳಿಕೆ ವಿರುದ್ಧ ದಾಖಲಾದ ಪ್ರಕರಣ
- **832** ತನಿಖೆ ಬಾಕಿ ಇರುವ ಪ್ರಕರಣಗಳು
- **111** ನ್ಯಾಯಾಲಯಗಳ ಆದೇಶದ ಮೇಲೆ ದಾಖಲಿಸಿದ ಪ್ರಕರಣ
- **61** ಸರ್ಕಾರದ ಶಿಫಾರಸಿನ ಮೇಲೆ ದಾಖಲಿಸಿಕೊಂಡ ಪ್ರಕರಣ
- **1,005** ಸಿಬಿಐ ತನಿಖೆ ಪೂರ್ಣಗೊಳಿಸಿದ ಪ್ರಕರಣಗಳು
- **859** ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ಸರ್ಕಾರಿ ಅಧಿಕಾರಿಗಳು
- **221** ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ಗೆಜೆಟೆಡ್ ಅಧಿಕಾರಿಗಳು
- **529** ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾಗಿರುವ ಪ್ರಕರಣ
- **832** ತನಿಖೆ ಬಾಕಿ ಇರುವ ಪ್ರಕರಣಗಳು

ವಿಳಂಬಕ್ಕೆ ಹಲವು ಕಾರಣ

ಕೆಲಸದ ಒತ್ತಡ, ಸಿಬ್ಬಂದಿ ಕೊರತೆ, ದೊಡ್ಡ ಪ್ರಮಾಣದ ದಾಖಲೆಗಳ ಪರಿಶೀಲನೆ, ಕೋರ್ಟ್ ಅನುಮತಿ, ಪ್ರಾಸಿಕ್ಯೂಷನ್‌ಗೆ ಒಪ್ಪಿಗೆ ಪಡೆಯುವಲ್ಲಿನ ವಿಳಂಬ ಸೇರಿ ಹಲವು ಕಾರಣಗಳಿಂದ ಭ್ರಷ್ಟಾಚಾರ ಪ್ರಕರಣಗಳ ತನಿಖೆ ವಿಶೇಷವಾಗಿ ಬ್ಯಾಂಕ್ ವಂಚನೆ, ಆರ್ಥಿಕ ಅಪರಾಧಗಳ ತನಿಖೆ ತಡವಾಗುತ್ತಿದೆ. ಹೀಗಾಗಿ ಸಾವಿರಾರು ಪ್ರಕರಣಗಳು ನ್ಯಾಯಾಲಯಗಳಲ್ಲಿ ವರ್ಷಗಳಿಂದ ವಿಚಾರಣೆಗೆ ಬಾಕಿ ಉಳಿದಿವೆ ಎಂದು ಸಿವಿಸಿ ವರದಿ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಎರಡು ಮೋಟರ್ ಬೈಕ್‌ಗಳ ನಡುವೆ ಅಪಘಾತ ಸಂಭವಿಸಿ, ಕೆಳಕ್ಕೆ ಬಿದ್ದು ಒಂದಕ್ಕೊಂದು ಬೆಸೆದುಕೊಂಡ ಅವು ರಸ್ತೆ ಮೇಲೆ ಗರಗರನೆ ತಿರುಗುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಬೈಕ್‌ಗಳು ತಿರುಗುವುದನ್ನು ಅನೇಕರು ಸುತ್ತುವರಿದು ನೋಡುವುದು, ಕೆಲವರು ಬೈಕ್‌ಗಳನ್ನು ಪ್ರತ್ಯೇಕಿಸಲು ಕೋಲು ಹಿಡಿದು ಬರುವುದು ವಿಡಿಯೊದಲ್ಲಿದೆ. ‘ಇದು ಜೈಪುರದಲ್ಲಿ ನಡೆದ ವಿಚಿತ್ರ ಅಪಘಾತವಾಗಿದೆ’ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊದ ಕೀಫ್ರೇಮ್ ಅನ್ನು ಪ್ರತ್ಯೇಕಿಸಿ, ಅದನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಇದೇ ವಿಡಿಯೊ ಅನ್ನು ಇಂತಹದ್ದೇ ಪ್ರತಿಪಾದನೆಯೊಂದಿಗೆ ಹಲವರು ಹಂಚಿಕೊಂಡಿರುವುದು ಕಂಡುಬಂತು. ಗೂಗಲ್ ಲೆನ್ಸ್ ಸರ್ಚ್ ಮೂಲಕ ಇಂಡೊನೇಷ್ಯಾದ ವೆಬ್‌ಪೋರ್ಟಲ್‌ನಲ್ಲಿ 2025ರ ಆ.18ರಂದು ಈ ವಿಡಿಯೊ ಅಪ್‌ಲೋಡ್ ಆಗಿರುವುದು ಕಂಡಿತು. ಇಂಡೊನೇಷ್ಯಾದಲ್ಲಿ ನಡೆದ ಅಪಘಾತ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ. ಬೈಕ್‌ನ ನಂಬರ್ ಪ್ಲೇಟ್‌ನಲ್ಲಿ ‘ಬಿಎಂ 3675 ಎಫ್‌ಸಿ’ ಎಂದಿದೆ. ಭಾರತದಲ್ಲಿ ಈ ಸರಣಿಯ ನಂಬರ್‌ಗಳು ಯಾವ ರಾಜ್ಯದಲ್ಲೂ ಇಲ್ಲ. ಮತ್ತಷ್ಟು ಹುಡುಕಾಟ ನಡೆಸಿದಾಗ, ಇದು ಇಂಡೊನೋಷ್ಯಾಕ್ಕೆ ಸೇರಿರುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುರುವಿನ ಪಾಲಿನ ಹಣತೆ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಅವರು ತರಗತಿಯ ಒಳಗಿನಿಂದ ಬಸ್ ನಿಲ್ದಾಣದ ಕಡೆ ಕಣ್ಣು ಹಾಯಿಸಿದರು. ಅಲ್ಲಿದ್ದ ಮೂರು ನಾಲ್ಕು ಹುಡುಗರು ತಮ್ಮದೇ ಶಾಲೆಯವರೆಂದು ಅನಿಸಿತು. ಬಸ್ ಸ್ಟ್ಯಾಂಡ್‌ನಲ್ಲಿ ಅವರಿವರ ಸಹವಾಸ ಮಾಡಿ ಕೆಟ್ಟು ಹೋಗುತ್ತವೆ ಎಂದುಕೊಂಡು ತರಗತಿಯನ್ನು ಮಾನಿಟರ್ ಉಸ್ತುವಾರಿಗೆ ವಹಿಸಿ ಧಾವಿಸಿದರು. ‘ಕತ್ತೆಗಳಾ, ಇಲ್ಲೇನು ಮಾಡ್ತೀರಿ? ಇದಕ್ಕೇನಾ ಅಪ್ಪ ಅಮ್ಮ ಕಳ್ಸೋದು’ ಅಂತ ಗದರಿಸಿ ತರಗತಿಗೆ ಕಳಿಸಿದರು. ಶಾಲೆಯ ಕಾಂಪೌಂಡ್ ಒಳಗೆ ಬಂದ ಹುಡುಗರು ತರಗತಿಗೆ ಹೋಗದೆ ಮತ್ತೆ ಬಸ್ ಸ್ಟ್ಯಾಂಡ್‌ಗೆ ಬಂದುದನ್ನು ಗಮನಿಸಿ ಸುಮ್ಮನಾದರು.

ಮರುದಿನ ಬೆಳಿಗ್ಗೆ ಅವರದೇ ತರಗತಿ. ನಿನ್ನೆ ಕಂಡ ನಾಲ್ಕೂ ಹುಡುಗರು ಹಿಂದಿನ ಸಾಲಿನಲ್ಲಿ ಕುಳಿತಿದ್ದರು. ಮೇಷ್ಟ್ರು ಆ ನಾಲ್ಕೂ ಹುಡುಗರತ್ತ ಕೈ ತೋರಿಸಿ ‘ನೀವು ಎದ್ದು ನಿಲ್ಲಿ’ ಎಂದರು. ಅವರು ನಿಂತರು. ಉಳಿದ ವಿದ್ಯಾರ್ಥಿಗಳಿಗೆಲ್ಲ ‘ನೀವೆಲ್ಲಾ ಅವರನ್ನೊಮ್ಮೆ ಹಿಂತಿರುಗಿ ನೋಡಿ’ ಎಂದರು. ಎಲ್ಲರೂ ನೋಡಿದರು. ನಿಂತಿದ್ದ ಹುಡುಗರನ್ನು ಕುಳಿತುಕೊಳ್ಳಲು ಹೇಳಿ ಪಾಠ ಶುರುಮಾಡಿದರು. ಆ ಹುಡುಗರಿಗೆ ಆಗಬಾರದ ಅವಮಾನವಾಯಿತು. ಇಡೀ ತರಗತಿಯ ವಿದ್ಯಾರ್ಥಿಗಳು ಏನೆಲ್ಲಾ ಕಲ್ಪಿಸಿಕೊಂಡಿರಬಹುದು? ‘ನಿನ್ನೆ ಯಾಕೆ ಹಾಗೆ ಮಾಡಿದಿರಿ? ಎಲ್ಲಿಗೆ ಹೋಗಿದ್ದಿರಿ? ಅಂತ ಕೇಳಲಿಲ್ಲ. ಬಯ್ಯಲಿಲ್ಲ. ಹೊಡಿಯಲಿಲ್ಲ’ ಮೇಷ್ಟ್ರು ಹಾಗೇನಾದ್ರೂ ಮಾಡಿದ್ದರೆ ಚೆನ್ನಾಗಿತ್ತು. ಸ್ವಲ್ಪ ಹೊತ್ತಿಗೆ ಎಲ್ಲ ಮರೆಯುತ್ತಿತ್ತು. ಆದರೆ, ಅವರು ಕೊಟ್ಟ ಈ ಶಿಕ್ಷೆಯಿಂದ ಈ ಹುಡುಗರು ತಮ್ಮ ಜೀವಮಾನದಲ್ಲೆಂದೂ ತಪ್ಪು ಮಾಡಲಿಲ್ಲ. ಓದುವ ಮಕ್ಕಳು ತರಗತಿಯ ಒಳಗಡೆ ಮಾತ್ರವಲ್ಲ, ಹೊರಗೆ ಎಲ್ಲಿ ತಪ್ಪು ಮಾಡಿದರೂ ಮೇಷ್ಟ್ರು ದಂಡಿಸುತ್ತಿದ್ದರು.

ಹತ್ತು ಎಕರೆ ಮೈದಾನದ ಸುತ್ತ ತಂತಿ ಬೇಲಿ. ಮುಂಭಾಗದಲ್ಲಿ ಶಾಲೆಯ ಕಟ್ಟಡ. ಪ್ರತಿದಿನ ಬೆಳಿಗ್ಗೆ ಐದು ಗಂಟೆಗೇ ಎದ್ದು ತಂತಿ ಬೇಲಿ ಸುತ್ತ ಟಾರ್ಚ್ ಹಿಡಿದು ಓಡಾಡುತ್ತಾ ‘ಇದು ನಿಮ್ಮ ಮಕ್ಕಳು ಓದುವ ಶಾಲಾಮಂದಿರ. ಯಾರೂ ಪಾಯಿಖಾನೆ ಮಾಡಬೇಡಿ’ ಎಂದು ಹೇಳುತ್ತಿದ್ದರು. ಯಾರಾದರೂ ಸಿಕ್ಕಿಬಿದ್ದರೆ ಅವರ ಕೈಯಿಂದಲೇ ತೆಗೆಸುತ್ತಿದ್ದರು. ಹಾಗೆ ಮಾಡುವುದಕ್ಕೆ ಅವರು ಹಿಂಜರಿದರೆ ತೆಗೆಯಲು ತಾವೇ ಕೈ ಹಾಕುತ್ತಿದ್ದರು. ಅಧ್ಯಾಪಕರು ಮತ್ತು ಸಮಾಜದ ನಡುವಿನ ಭಾವನಾತ್ಮಕ ಬೆಸುಗೆ ಶಿಥಿಲಗೊಂಡಿರುವ ಹೊತ್ತಿನಲ್ಲಿ ಈ ಸಂಗತಿಗಳು ಅವಾಸ್ತವವಾಗಿ ಕಾಣಬಹುದು. ತನ್ನ ಶಾಲೆ ಕಾಲೇಜು, ಊರು, ಜನ ಮತ್ತು ಮಕ್ಕಳು ಈ ಯಾವುದೂ ತನಗೆ ಸಂಬಂಧಿಸಿದ್ದಲ್ಲ ಎಂದು ಅಧ್ಯಾಪಕನಿಗೆ ಅನಿಸಬಾರದು. ‘ಅನ್ಯ’ ಭಾವವಿಲ್ಲದಿರುವುದೇ ಗುರುವಿಗೆ ಭೂಷಣ. ತರಗತಿಯ ಒಳಗಡೆ ಮಾತ್ರ ತನ್ನ ಕೆಲಸ ಅಂದುಕೊಂಡರೆ ಅದು ದೌರ್ಬಲ್ಯವಾಗುತ್ತದೆ. ಹೊರಗನ್ನು ಒಳಗೊಳ್ಳುತ್ತಾ ತನ್ನ ಕಾರ್ಯದ ಪ್ರತಿಫಲಗಳನ್ನು ಅವಲೋಕಿಸುವ ಪರಿಶೀಲನಾ ಪ್ರಜ್ಞೆ ಕೂಡ ಅಧ್ಯಾಪಕನ ನೈತಿಕತೆಯ ಭಾಗವೇ ಆಗಿದೆ. ಸ್ವತಃ ಅಧ್ಯಾಪಕರು ತಮ್ಮ ತರಗತಿಯ ಒಳಗನ್ನು ಸಾಮಾಜಿಕ ಮೌಲ್ಯಗಳ ಪ್ರಯೋಗಾಲಯವೆಂದು ಭಾವಿಸಿ ಕಾರ್ಯಪ್ರವೃತ್ತರಾಗಬೇಕು. ಸತ್ಯ ಮತ್ತು ಸದಾಚಾರಗಳನ್ನು ಒಳಗೆ ಬಿತ್ತಿದರೆ ಹೊರಗೆ ಅದರ ಮೊಳಕೆ ಚಿಗುರೊಡೆದು ಸಮಾಜ ಮಾನವೀಯವಾಗುತ್ತದೆ.

ನೈತಿಕ ಮೌಲ್ಯಗಳ ಕ್ರಿಯಾಶೂನ್ಯತೆ ವ್ಯಾಪಿಸಿರುವ ಸಂದರ್ಭದಲ್ಲಿ ಸಾಮಾಜಿಕ ಬೋಧನೆಯ ಹೊಣೆಗಾರಿಕೆಯನ್ನು ಹೊತ್ತ ಗುರುವು ತನ್ನ ಲಘುವಾದ ನಡವಳಿಕೆಗಳಿಂದ ಕಳಪೆಯಾಗಬಾರದು. ಅಲ್ಲಮ ಇಂಥ ಗುರುವಿನ ಬಗ್ಗೆ ಗಂಭೀರವಾಗುತ್ತಾನೆ. ಬೌದ್ಧಿಕವಾಗಿ ಕೈ ಹಿಡಿದು ಎತ್ತಬೇಕಾದ ಶ್ರೀಗುರುವು ಕೃತಯುಗದಲ್ಲಿ ಬಡಿದು, ತ್ರೇತಾಯುಗದಲ್ಲಿ ಬಯ್ದು, ದ್ವಾಪರದಲ್ಲಿ ಬೆದರಿಸಿ ಕಲಿಯುಗದಲ್ಲಿ ವಂದಿಸಿ ಬುದ್ಧಿ ಹೇಳಬೇಕಾದ ಅಧಃಪತನ ತಲುಪಿರುವ ಬಗ್ಗೆ ವಿಷಾದವೂ ಕಾಲನ ಕಲಿತನದ ಕುರಿತಾದ ಬೆರಗೂ ಅಲ್ಲಮನಿಗಿದೆ. ತನ್ನದಲ್ಲದ ಬವಣೆಯೇ ಗುರುವಿನ ಪಾಲಿನ ಹಣತೆಯಾಗಿ ತಾನಿರುವ ನೆಲವನ್ನು ಬೆಳಗಬೇಕು. ಪ್ರಶ್ನಿಸುವ ದನಿ ಅಡಗುತ್ತಿರುವ ಹೊತ್ತಿನಲ್ಲಿ ಗುರುವಾದವನು ‘ಅರಸು ರಾಕ್ಷಸ ಮಂತ್ರಿ ಮೊರೆವ ಹುಲಿ’ ಎಂದು ಹೇಳುವ ನಿತ್ಯವಿರೋಧದ ಪ್ರತಿನಿಧಿಯಾಗುವುದಕ್ಕೆ ಅಗತ್ಯವಾದ ಪ್ರಶ್ನಾತೀತ ನೈತಿಕ ಗಟ್ಟಿತನವನ್ನು ಮೆರೆಯಲು ಮುಂದಾಗಬೇಕು. ಇದು ಗುರುವಿನೊಳಗಿನ ಋಷಿಪ್ರಜ್ಞೆಗೂ ಸಾಕ್ಷಿಯಾಗುತ್ತದೆ. ❖

ಗುಂಡಣ್ಣ




ಪದಬಂಧ 6151

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (3)
3.ಕವಿ ಕುಮಾರವ್ಯಾಸನು ಹುಟ್ಟಿದ ಜಿಲ್ಲೆ (3)
5.ರತ್ನಗಳ ಆಶ್ರಯಸ್ಥಾನ ಅಥವಾ ಸಮುದ್ರ (4)
7.ಓದು ಬರಹ ಬಲ್ಲವನು (3)
10.ದೈನಂದಿನ ಸಮಾಚಾರವನ್ನು ತಿಳಿಸುವ ಪತ್ರಿಕೆ (7)
13.ದೇವರಿಗೆ ಅರ್ಪಿಸಿ ಪಡೆದುದು (3)
16.ಸ್ವಂತವಾಗಿ ಗಳಿಸಿದ್ದು (4)
18.ಗರ ಬಡಿದಂತಿರುವ ಈತ ಹಳ್ಳಿಯವನು (3)
19.ಗುರುಗುಟ್ಟುತ್ತಿರುವ ಗಂಡು ಕುರಿ (3)

ಮೇಲಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಒದಗುವ ಸಹಾಯಕ (4)
2.ಬಡಿವಾರ ತೋರುವಾಗ ಆವರಿಸಿದ ಕ್ಷಾಮ (2)
3.ಪಗಡೆಯಾಟದ ದಾಳಗಳಿಂದ ಸೂಚಿತವಾಗುವ ಸಂಖ್ಯೆ (2)
4.ಬೆಳಕುಕಿಂಡಿ ಇಲ್ಲಿ ಕಾಣಿಸುತ್ತಿದೆ (3)
6.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
7.ಎಲ್ಲರಿಗೂ ಎಲ್ಲಕ್ಕೂ ಎಲ್ಲಕಾಲಕ್ಕೂ ಸಂಬಂಧಿಸಿದ್ದು (4)
8.ಆನೆಯ ದಾಡೆ (2)
9.ದುಃಖಿತನಾದವನ ನಾದ! (4)
11.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
12.ಈ ಬಂದರು ನಗರ ದಕ್ಷಿಣಕನ್ನಡದ ಜಿಲ್ಲಾಕೇಂದ್ರ (4)
14.ಮೈಮೇಲೆ ಚುಕ್ಕೆಗಳಿರುವ ಒಂದು ಜಾತಿಯ ಜಿಂಕೆ (3)
15.ದಾಯಾದಿ ಹೆಸರು ಬರೆದಿರುವ ಪಟ್ಟಿ ಉಲ್ಟಾ ಆಗಿದೆ (2)
16.ವರ್ಣಮಾಲೆಯಲ್ಲಿ ಇತರ ಅಕ್ಷರಗಳ ಸಹಾಯವಿಲ್ಲದೆ ಉಚ್ಚರಿಸಬಹುದಾದ ಅಕ್ಷರ (2)
17.ತಟಕ್ಕನೆ ತಲುಪಿದ ದಡ! (2)



6150ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಹಿಷ್ಕಾರ 3.ನರುಗಂಪು 5.ಸದರ 7.ಪರ 9.ಗುರು 11.ಹಾವುಗೆ 12.ದುಬಾರಿ 14.ಮರ 15.ನಿಜ 17.ಶಂಕರ 19.ತೆಗಳಿಕೆ 20.ತಿಲಾಂಜಲಿ

ಮೇಲಿಂದ ಕೆಳಕ್ಕೆ: 1.ಬಳಪ 2.ರಸ 3.ನರ 4.ಪುಕಾರು 6.ದಣಿವು 8.ರಕ್ತಸಂಚಾರ 9.ಗುಪ್ತಗಾಮಿನಿ 13.ಬಾಲಕ 14.ಮಮತೆ 16.ಜಗಲಿ 17.ಶಂಕೆ 18.ರತಿ

ಸುಡೊಕು 6535

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		3		2		6		1
	6	2					9	
				3			4	8
	4		3		1		7	
1	3	7				4		5
			4		7		1	
	2		5				3	
6		9				5		4
3	5				2		8	

6534 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಸೆಪ್ಟೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ನವಮಿ ಗಂ. 26-44 **ನಕ್ಷತ್ರ:** ಜ್ಯೇಷ್ಠ ಗಂ. 19-55 **ಯೋಗ:** ವಿಷ್ಕಂಭ ಗಂ. 16-32 **ಕರಣ:** ಬಾಲವ ಗಂ. 13-55 ಸಿಂಹ ಮಾಸದ 15 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 1 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 09-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-38, **ಮುಸ್ಲಿಂ ದಿನಾಂಕ:** 08 ರ ಬಿಉಲ್ಲಾವಲ್, **ದಿನ ವಿಶೇಷ:** ಕೇದಾರ ವ್ರತ, **ಅದೃಷ್ಟ ಸಂಖ್ಯೆ:** 1, 5

ಮೇಷ: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಇರುವವರಿಗೆ ಹೆಚ್ಚಿನ ಅವಕಾಶಗಳೊಂದಿಗೆ ಹೆಸರಾಂತ ಕಂಪನಿಯಲ್ಲಿ ಕೆಲಸ ಸಿಗುವ ಸಾಧ್ಯತೆಗಳು ಇವೆ. ಮನೆ ಹಾಗೂ ಮನದಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿ ಕಾಣಲಿದೆ.

ವೃಷಭ: ವಿದ್ಯಾರ್ಥಿಗಳಿಗೆ ಸಹವಾಸ ದೋಷದಿಂದಾಗಿ ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದು. ಸಾಧನೆ ಕಷ್ಟಕರವೆನಿಸಲಿದೆ. ಆಕಸ್ಮಿಕ ಧನಾಗಮನದಿಂದಾಗಿ ಬಾಕಿ ಇರಿಸಿಕೊಂಡಿದ್ದ ವ್ಯವಹಾರವು ಪೂರ್ಣಗೊಳ್ಳುವುದು.

ಮಿಥುನ: ಮೇಲಾಧಿಕಾರಿಯ ಮೃದು ವರ್ತನೆಯಿಂದ ನಿಮಗೆ ಸರ್ಕಾರದ ಕೆಲಸ ಕಾರ್ಯಗಳು ಯಶಸ್ವಿಯಾಗಿ ಸಂಪೂರ್ಣಗೊಂಡು ತೃಪ್ತಿಯುಂಟಾಗಲಿದೆ. ನಿಮ್ಮ ಸಮಸ್ಯೆಗೆ ಬಂಧು ಮಿತ್ರರ ನೆರವು ಸಿಗಲಿದೆ.

ಕರ್ಕಾಟಕ: ಈ ದಿನ ಕೈಗೊಳ್ಳುವ ಮುಖ್ಯ ಕೆಲಸವು ಮುಕ್ತಾಯದ ಹಂತವನ್ನು ಬಹಳ ವಿಳಂಬವಾಗಿ ನೋಡುತ್ತದೆ. ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಹೆಚ್ಚಿನ ಗಮನವಿರಲಿ. ಬೂದು ಬಣ್ಣ ಶುಭ ತರಲಿದೆ.

ಸಿಂಹ: ದಿನಸಿ ಮತ್ತು ಆಲಂಕಾರಿಕ ವಸ್ತುಗಳ ವ್ಯಾಪಾರಸ್ಥರಿಗೆ ಶುಭದಿನ. ಮಕ್ಕಳ ಹಿತಾಸಕ್ತಿಯ ಕುರಿತು ಹೆಚ್ಚಿನ ಗಮನವಿರಲಿ. ಆರ್ಥಿಕ ವಿಚಾರದಲ್ಲಿ ನಿಮ್ಮ ಶ್ರಮಕ್ಕೆ ಸರಿಸಮಾನವಾಗಿ ದಿನದಿಂದ ದಿನಕ್ಕೆ ಹೆಚ್ಚಿನ ಅಭಿವೃದ್ಧಿ ಕಾಣುವಿರಿ.

ಕನ್ಯಾ: ಸಜ್ಜನರ ಸಹವಾಸ ಮಾಡುವುದರಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗುತ್ತದೆ. ಮೂಳೆ ವೈದ್ಯರು ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸಬಹುದು. ಈ ದಿನದ ಸಂಜೆಯ ಸಮಯದಲ್ಲಿ ವಾಹನ ಚಾಲನೆಯಲ್ಲಿ ಜಾಗರೂಕತೆ ವಹಿಸಿ.

ತುಲಾ: ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ವಿವೇಕಯುತ ನಡವಳಿಕೆಯು ಸಹಾಯಕ. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ. ವಕೀಲರು ಕೈಗೊಂಡ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ.

ವೃಶ್ಚಿಕ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಉತ್ತಮ ಸ್ಥಳ ದೊರೆಯುವುದು. ಅನಾರೋಗ್ಯ ಸ್ಥಿತಿ ಎದುರಾಗಿ ಸಂಪಾದನೆಯಲ್ಲಿ ಕೊರತೆ, ಉಳಿತಾಯದಲ್ಲಿ ನಷ್ಟ ವಾಗಬಹುದು.

ಧನು: ಮಹತ್ವದ ನಿರ್ಧಾರವನ್ನು ಕೈಗೊಳ್ಳಬೇಕಾದ ಸಮಯ ಎದುರಾಗಬಹುದು. ಉಪಹಾರ ಗೃಹಗಳಿಂದ ಅಧಿಕ ಲಾಭ. ಆತ್ಮೀಯರ ಸಲಹೆ ಮತ್ತು ಸಹಕಾರದಿಂದ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಬರಲಿದೆ.

ಮಕರ: ರೈತರ ಬೆಳೆಗೆ ಅದರಲ್ಲೂ ಅಧಿಕವಾಗಿ ಹಣ್ಣು ಹಂಪಲುಗಳ ಬೆಳೆಗಾರರಿಗೆ ಕೀಟಬಾಧೆ ಕಾಡುವುದು. ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸವಿರಲಿದೆ. ಕುಲದೇವರ ಆರಾಧನೆಯಿಂದ ಶುಭ.

ಕುಂಭ: ತೆರಿಗೆ ಇಲಾಖೆ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರುವುದು ದೇಹಾಯಾಸಕ್ಕೆ ಕಾರಣವಾಗಲಿದೆ. ಶಿಸ್ತುಬದ್ಧ ಜೀವನವೆಂದು ಅನ್ಯರಿಂದ ಶ್ಲಾಘಿಸಲ್ಪಡುವಿರಿ. ರಫ್ತು ಕೆಲಸಗಳಲ್ಲಿ ಪ್ರಗತಿಯನ್ನು ಹೊಂದಲು ಆಂಜನೇಯನನ್ನು ಆರಾಧಿಸಿ.

ಮೀನ: ಇಂದು ನಡೆಯುವ ಹಲವು ಸಂದರ್ಭಗಳಲ್ಲಿ ಮೂಕಪ್ರೇಕ್ಷಕರಂತೆ ಇರುವ ನಿಮ್ಮ ಗುಣದಿಂದಾಗಿ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವಿರಿ. ಹಳೆಯ ಭಾವಚಿತ್ರಗಳನ್ನು ನೋಡಿ ಆ ಕ್ಷಣಗಳನ್ನು ನೆನಪಿಸಿಕೊಳ್ಳುವಂತೆ ಆಗಲಿದೆ.

ಜಿಎಸ್‌ಟಿ ವರಮಾನ ರಕ್ಷಿಸಲು ಆಗ್ರಹ

ರಾಜ್ಯಕ್ಕೆ ₹15ಸಾವಿರ ಕೋಟಿ ನಷ್ಟ – ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಮೈಸೂರು: 'ಕೇಂದ್ರ ಸರ್ಕಾರ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಪರಿಷ್ಕರಿಸುವುದರಿಂದ ನಷ್ಟ ಆಗಲಿದ್ದು, ಇದನ್ನು ಭರಿಸಿಕೊಳ್ಳುವ ಕುರಿತು ಎಂಟು ರಾಜ್ಯಗಳು ಸೇರಿ ಚರ್ಚಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಜಿಎಸ್‌ಟಿ ಹಂತಗಳ ಪರಿಷ್ಕರಣೆಯಿಂದ ರಾಜ್ಯಕ್ಕೆ ವಾರ್ಷಿಕ ₹15 ಸಾವಿರ ಕೋಟಿ ನಷ್ಟ ಉಂಟಾಗುತ್ತದೆ' ಎಂದರು.

'ಜಿಎಸ್‌ಟಿ ವ್ಯವಸ್ಥೆ ತರ್ಕಬದ್ಧಗೊಳಿಸುವುದನ್ನು ಸ್ವಾಗತಿಸುತ್ತೇವೆ. ಆದರೆ, ವರಮಾನ ಸಂರಕ್ಷಿಸ ಬೇಕೆಂಬುದು ನಮ್ಮ ಉದ್ದೇಶ' ಎಂದರು.

'ಜಿಎಸ್‌ಟಿ ಮಂಡಳಿ ಸಭೆ ಸೆಪ್ಟೆಂಬರ್ 3-4ರಂದು ನಡೆಯಲಿದ್ದು, ಕಂದಾಯ ಸಚಿವ ಕೃಷ್ಣ ಬೈರೇಗೌಡ ಪಾಲ್ಗೊಳ್ಳಲಿದ್ದು, ಈ ವಿಷಯ ಪ್ರಸ್ತಾಪಿಸುವರು' ಎಂದರು.

'ಜಿಎಸ್‌ಟಿ ಜಾರಿ ಬಳಿಕ ಐದು ವರ್ಷ ಪರಿಹಾರ ಕೊಟ್ಟಿದ್ದಾರೆ. ಈಗ, ಶೇ 12ರಿಂದ 13ರಷ್ಟು ತೆರಿಗೆ ಬೆಳವಣಿಗೆಯಾಗಿದೆ. ಸಿಗರೇಟ್, ಗುಟ್ಕಾ, ವಿಲಾಸಿ ಸರಕುಗಳು, ಬೆಂಜ್ ಕಾರು ಅಂತವುಗಳ ಮೇಲೆ ಸೆಸ್ ವಿಧಿಸಿ ಅದರಲ್ಲಿ ನಮಗೆ ಕೊಡಿ ಎಂದು ಕೇಳಿದ್ದೇವೆ' ಎಂದರು.

'ಸ್ಥಿರಾಸ್ತಿ ನೋಂದಣಿ ಶುಲ್ಕವನ್ನು ಶೇ 1ರಷ್ಟು ಹೆಚ್ಚಿಸಿದ್ದೇವೆ. ದಕ್ಷಿಣದ ರಾಜ್ಯಗಳಿಗೆ ಸಮನಾಗಿ ಏರಿಕೆ ಮಾಡಿದ್ದೇವೆ' ಎಂದು ಹೇಳಿದರು.

'ನಮಗೆ ₹11,950 ಕೋಟಿ ನಷ್ಟ ಆಗಿದೆ. ಈ ಬಗ್ಗೆ ಕೇಂದ್ರದಲ್ಲಿ ಸಚಿವರಾಗಿರುವವರು, ಬಿಜೆಪಿ ಸಂಸದರು ರಾಜ್ಯದ ಪರ ಎಂದೂ ಮಾತನಾಡಿಲ್ಲ' ಎಂದು ಟೀಕಿಸಿದರು.

'ದಸರಾ ಉತ್ಸವ ನಿಮಿತ್ತ ವೈಮಾನಿಕ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಒಪ್ಪಿದ್ದು, ವಿಜಯದಶಮಿ ದಿನವೇ (ಅ.2ರಂದು) ಪ್ರದರ್ಶನ ನಡೆಯಲಿದೆ' ಎಂದರು.

ಆನ್‌ಲೈನ್ ಆಟ ನಿಷೇಧ: ಸಿಬ್ಬಂದಿ ವಜಾಕ್ಕೆ ಎಂಪಿಎಲ್ ನಿರ್ಧಾರ

ನವದೆಹಲಿ (ರಾಯಿಟರ್ಸ್): ಆನ್‌ಲೈನ್ ಗೇಮಿಂಗ್ ಆ್ಯಪ್ 'ಮೊಬೈಲ್ ಪ್ರೀಮಿಯರ್ ಲೀಗ್' (ಎಂಪಿಎಲ್) ಶೇ 60ರಷ್ಟು ಸ್ಥಳೀಯ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ ಎಂದು ಕಂಪನಿಯ ಮೂಲಗಳು ಭಾನುವಾರ ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹಣ ಕಟ್ಟಿ ಆಡಲಾಗುವ ಆನ್‌ಲೈನ್ ಆಟಗಳನ್ನು ನಿಷೇಧಿಸಿದೆ. ಇದು ದೇಶದ ಆನ್‌ಲೈನ್ ಆಟಗಳ ಉದ್ಯಮವನ್ನು ಸಂಕಷ್ಟಕ್ಕೆ ದೂಡಿದೆ. ಇದು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಕಾರಣವಾಗಿದೆ ಎಂದು ತಿಳಿಸಿವೆ.

ಮಾರ್ಕೆಟಿಂಗ್, ಹಣಕಾಸು, ಕಾರ್ಯಾಚರಣೆ, ಎಂಜಿನಿಯರಿಂಗ್ ಮತ್ತು ಕಾನೂನು ವಿಭಾಗದಲ್ಲಿನ 500 ಸಿಬ್ಬಂದಿಯಲ್ಲಿ ಅಂದಾಜು 300 ಉದ್ಯೋಗಿಗಳನ್ನು ವಜಾಗೊಳಿಸಲಾಗುತ್ತದೆ ಎಂದು ತಿಳಿಸಿವೆ.

ಕಂಪನಿಯ ಉದ್ಯೋಗಿಗಳಿಗೆ ಇ-ಮೇಲ್ ಮಾಡಿರುವ ಸಿಇಒ ಸಾಯಿ ಶ್ರೀನಿವಾಸ್, 'ಕಂಪನಿಗೆ ಶೇ 50ರಷ್ಟು ವರಮಾನ ಭಾರತದಿಂದಲೇ ಬರುತ್ತಿತ್ತು. ಸರ್ಕಾರದ ಕಾನೂನಿನಿಂದ ಭವಿಷ್ಯದಲ್ಲಿ ವರಮಾನ ಸಂಗ್ರಹಿಸುವ ಸಾಧ್ಯತೆ ಇಲ್ಲ. ಹೀಗಾಗಿ, ಸಿಬ್ಬಂದಿ ಸಂಖ್ಯೆಯನ್ನು ಕಡಿಮೆ ಮಾಡಲು ನಿರ್ಧರಿಸಿದ್ದೇವೆ. ಕೆಲಸ ಕಳೆದುಕೊಳ್ಳಲಿರುವವರಿಗೆ ನೆರವು ನೀಡಲಾಗುವುದು' ಎಂದು ತಿಳಿಸಿದ್ದಾರೆ.

ಆದರೆ, ಎಷ್ಟು ಜನರನ್ನು ಕೆಲಸದಿಂದ ವಜಾಗೊಳಿಸಲಾಗುತ್ತಿದೆ ಎಂದು ಇ-ಮೇಲ್‌ನಲ್ಲಿ ಹೇಳಿಲ್ಲ.

ಈ ಕುರಿತು ರಾಯಿಟರ್ಸ್‌ಗೆ ಎಂಪಿಎಲ್ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ. ಕಳೆದ ವರ್ಷ ಎಂಪಿಎಲ್‌ನ ಭಾರತದ ವರಮಾನ ₹881 ಕೋಟಿ ಆಗಿತ್ತು.

ಪತ್ರಕರ್ತನ ಮೇಲೆ ಗುಂಡಿನ ದಾಳಿ

ಇಂಫಾಲ್/ಗುವಾಹಟಿ (ಪಿಟಿಐ): ಮಣಿಪುರದ ಸೇನಾಪತಿ ಜಿಲ್ಲೆಯಲ್ಲಿ ಹೂವಿನ ಉತ್ಸವದ ವರದಿ ಮಾಡಲು ಹೋಗಿದ್ದ ಸುದ್ದಿ ವಾಹಿನಿಯೊಂದರ ಪತ್ರಕರ್ತರೊಬ್ಬರ ಮೇಲೆ ಗುಂಡು ಹಾರಿಸಲಾಗಿದೆ.

ನಾಗಲ್ಯಾಂಡ್ ಮೂಲದ ಹಾರ್ನ್‌ಬಿಲ್ ಟಿವಿಯ ಪತ್ರಕರ್ತ ದೀಪ್ ಸೈಕಿಯಾ ಅವರ ಕಂಕುಳು ಮತ್ತು ಕಾಲುಗಳಿಗೆ ಗುಂಡೇಟಿನ ಗಾಯಗಳಾಗಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ನಾಗಾ ಸಮುದಾಯದ ಪ್ರಾಬಲ್ಯವಿರುವ ಜಿಲ್ಲೆಯ ಲಾಯಿ ಗ್ರಾಮದಲ್ಲಿ ಶನಿವಾರ ಸಂಜೆ ಘಟನೆ ನಡೆದಿದ್ದು, ಸೈಕಿಯಾ ಅವರು ಜೇನಿಯಾ ಹೂವಿನ ಉತ್ಸವದಲ್ಲಿ ವರದಿ ಮಾಡುತ್ತಿದ್ದಾಗ ದಾಳಿ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಸ್ಥಳೀಯರು ಬಂದೂಕು ಸಮೇತ ದಾಳಿಕೋರನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ದಾಳಿ ಹಿಂದಿನ ಕಾರಣವೇನೆಂಬುದನ್ನು ತನಿಖೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹555; 12 ಕ್ಕೆ ₹75
ಮೈಸೂರು: 100 ಕ್ಕೆ ₹563

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹485-656
ದ್ವಿತಳಿ (ಬಿ.ವಿ) ₹410-839

ಷೇರು ಕೊಳ್ಳುವಾಗ ಕಂಪನಿ ವಿಶ್ಲೇಷಣೆ ಹೇಗೆ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಷೇರು ವಿಶ್ಲೇಷಣೆಗೆ ಪ್ರಾಯೋಗಿಕ ಸಲಹೆಗಳು

ಕಂಪನಿಯೊಂದರ ಹಲವು ವರ್ಷಗಳ ದತ್ತಾಂಶವನ್ನು ವಿಶ್ಲೇಷಿಸಿ ಮತ್ತು ಆ ಕ್ಷೇತ್ರದ ಇತರ ಕಂಪನಿಗಳೊಂದಿಗೆ ಹೋಲಿಸಿ ನೋಡಿ. ಕಂಪನಿಗಳ ವರದಿಗಳನ್ನು ಮೇಲ್ನೋಟಕ್ಕೆ ನೋಡಿ ಸುಮ್ಮನಾಗಬೇಡಿ, ಸಾಧ್ಯವಾದಷ್ಟು ಮೌಲ್ಯಮಾಪನ ಮಾಡಿ. ಅನುಪಾತಗಳು ಮತ್ತು ಅಂಕಿ-ಅಂಶಗಳು ಏಕೆ ಬದಲಾಗುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಿ. ನಿರ್ದಿಷ್ಟ ಕ್ಷೇತ್ರದಲ್ಲಾಗುತ್ತಿರುವ ಬದಲಾವಣೆಗಳ ಬಗ್ಗೆ ಗಮನವಿರಲಿ. ಲಾಭ-ನಷ್ಟದ ವರದಿ ಜೊತೆಗೆ ಬ್ಯಾಲನ್ಸ್‌ಶೀಟ್ ಮತ್ತು ಕ್ಯಾಶ್ ಫ್ಲೋ ಸ್ಟೇಟ್‌ಮೆಂಟ್‌ಗಳನ್ನು ಕೂಡ ನಿಮ್ಮ ವಿಶ್ಲೇಷಣೆಗೆ ಬಳಸಿಕೊಳ್ಳಿ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಾಗ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಕಂಪನಿಗಳನ್ನು ಆಯ್ಕೆ ಮಾಡುವುದು ಬಹಳ ಮುಖ್ಯ. ಯಾವುದೇ ಕಂಪನಿಯ ಹಣಕಾಸಿನ ಸ್ಥಿತಿಗತಿ ಹೇಗಿದೆ ಎಂಬುದು ಅದರ ಲಾಭ ಮತ್ತು ನಷ್ಟದ ವರದಿ (ಪಿ ಆ್ಯಂಡ್ ಎಲ್ ಸ್ಟೇಟ್‌ಮೆಂಟ್) ನೋಡಿದರೆ ತಿಳಿಯುತ್ತದೆ. ಪಿ ಆ್ಯಂಡ್ ಎಲ್ ಸ್ಟೇಟ್‌ಮೆಂಟ್ ಅನ್ನು ಇನ್‌ಕಮ್ ಸ್ಟೇಟ್‌ಮೆಂಟ್ ಎಂದೂ ಕರೆಯಲಾಗುತ್ತದೆ. ಈ ಲೇಖನದಲ್ಲಿ ಈ ಸ್ಟೇಟ್‌ಮೆಂಟ್ ಅನ್ನು ಹೇಗೆ ವಿಶ್ಲೇಷಣೆಗೆ ಒಳಪಡಿಸಬೇಕು ಎಂಬುದನ್ನು ತಿಳಿಸಲು ಯತ್ನಿಸಲಾಗಿದೆ.

ಲಾಭ ಮತ್ತು ನಷ್ಟದ ವರದಿ: ಲಾಭ ಮತ್ತು ನಷ್ಟದ ವರದಿ ಒಂದು ಪ್ರಮುಖ ಹಣಕಾಸು ದಾಖಲೆ. ನಿರ್ದಿಷ್ಟ ಅವಧಿಯಲ್ಲಿ ಕಂಪನಿಯೊಂದರ ಆದಾಯ, ಖರ್ಚುಗಳು ಮತ್ತು ಲಾಭದ ಪ್ರಮಾಣವನ್ನು ತಿಳಿಸಿ ಕೊಡುತ್ತದೆ. ಹೇಗೆ ಬ್ಯಾಂಕ್ ಸ್ಟೇಟ್‌ಮೆಂಟ್ ವ್ಯಕ್ತಿಗತ ಹಣಕಾಸಿನ ವಿವರಗಳನ್ನು ಒದಗಿಸುವುದೋ ಅದೇ ಮಾದರಿಯಲ್ಲಿ ಪಿ ಆ್ಯಂಡ್ ಎಲ್ ಸ್ಟೇಟ್‌ಮೆಂಟ್ ಕಂಪನಿಯ ಹಣಕಾಸಿನ ಸ್ಥಿತಿಗತಿಯನ್ನು ಬಿಂಬಿಸುತ್ತದೆ. ಈ ಸ್ಟೇಟ್‌ಮೆಂಟ್ ಅನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಮತ್ತು ವರ್ಷಕ್ಕೊಮ್ಮೆ ಪ್ರಕಟಿಸಲಾಗುತ್ತದೆ. ಬ್ಯಾಲನ್ಸ್‌ಶೀಟ್, ಕ್ಯಾಶ್ ಫ್ಲೋ ಸ್ಟೇಟ್‌ಮೆಂಟ್ ನಂತೆಯೇ ಇದು ಪ್ರಮುಖ ವರದಿ.

ಪಿ ಆ್ಯಂಡ್ ಎಲ್ ಸ್ಟೇಟ್‌ಮೆಂಟ್ ಪ್ರಮುಖ ಅಂಶಗಳು:

ಸರಕು ಮತ್ತು ಸೇವೆಗಳಿಂದ ಬರುವ ಆದಾಯ: ಸರಕು ಮತ್ತು ಸೇವೆಗಳ ಮಾರಾಟದಿಂದ ಸಿಗುವ ಗಳಿಕೆಯನ್ನು ಆದಾಯ ಎಂದು ಪರಿಗಣಿಸಲಾಗುತ್ತದೆ. ಯಾವುದೇ ಕಂಪನಿಯ ಇತ್ತೀಚಿನ ಆದಾಯವನ್ನು ಹಿಂದಿನ ವರ್ಷಗಳ ಆದಾಯದ ಜೊತೆ ಮತ್ತು ಕ್ಷೇತ್ರದಲ್ಲಿನ ಇತರೆ ಕಂಪನಿಗಳ ಆದಾಯದ ಜೊತೆ ಹೋಲಿಸಿದರೆ, ಅದರ ಬೆಳವಣಿಗೆ ದಿಕ್ಕು ಮತ್ತು ಗತಿ ಗೊತ್ತಾಗುತ್ತದೆ.

ಇತರೆ ಆದಾಯ: ಇತರೆ ಆದಾಯ ಎಂದರೆ ಕಂಪನಿಯ ಮುಖ್ಯ ವ್ಯವಹಾರ ಚಟುವಟಿಕೆಗಳಿಗೆ ಸಂಬಂಧಿಸದ ಆದಾಯ. ಉದಾಹರಣೆಗೆ ಬಂಡವಾಳ ಹೂಡಿಕೆಗಳಿಂದ ಅಥವಾ ಠೇವಣಿಗಳಿಂದ ಲಭ್ಯವಾಗುವ ಬಡ್ಡಿ ಆದಾಯ. ಸರಕು ಮತ್ತು ಸೇವೆಗಳಿಂದ ಬರುವ ಆದಾಯದ ಬದಲು ನಿರ್ದಿಷ್ಟ ಕಂಪನಿ ಇತರೆ ಆದಾಯಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದರೆ ಆ ಕಂಪನಿಯನ್ನು ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ಇತರೆ ಆದಾಯಗಳನ್ನೇ ಕಂಪನಿ ನೆಚ್ಚಿಕೊಂಡಿದ್ದರೆ ಅದು ಹೂಡಿಕೆದಾರನಿಗೆ ಎಚ್ಚರಿಕೆಯ ಸೂಚನೆ.

ಒಟ್ಟು ಆದಾಯ: ಕಂಪನಿ ತನ್ನ ಸರಕು ಮತ್ತು ಸೇವೆಗಳಿಂದ ಬರುವ ಆದಾಯ ಹಾಗೂ ಇತರೆ ಆದಾಯಗಳನ್ನು ಸೇರಿಸಿದಾಗ ಒಟ್ಟು ಆದಾಯ ಸಿಗುತ್ತದೆ. ಈ ಆದಾಯದ ಪ್ರಮಾಣ ಹೆಚ್ಚಿದ್ದರೆ, ಅದು ಸಾಮಾನ್ಯವಾಗಿ ಕಂಪನಿಯ ಬಲಿಷ್ಠ ಆರ್ಥಿಕ ಸ್ಥಿತಿಯ ಸೂಚಕವಾಗಿರುತ್ತದೆ. ಒಟ್ಟು ಆದಾಯದಲ್ಲಿ ಸರಕು ಮತ್ತು ಸೇವೆಗಳಿಂದ ಬರುವ ಆದಾಯದ ಪ್ರಮಾಣ ಹೆಚ್ಚಿದ್ದರೆ ಅದು ಸಕಾರಾತ್ಮಕ.

ಖರ್ಚುಗಳು: ಖರ್ಚುಗಳು ಅಂದರೆ ಉದ್ಯಮ ನಡೆಸುವಾಗ ಆಗುವ ಎಲ್ಲಾ ವೆಚ್ಚಗಳ ಒಟ್ಟು ಚಿತ್ರಣ. ಉದಾಹರಣೆಗೆ ತಯಾರಿಕಾ ವೆಚ್ಚ, ವೇತನ, ಬಾಡಿಗೆ, ಮಾರುಕಟ್ಟೆ ವೆಚ್ಚ, ಆಡಳಿತದ ಖರ್ಚುಗಳು, ಬಡ್ಡಿ ಮತ್ತು ಸವಕಳಿ (ಡಿಪ್ರಿಶಿಯೇಷನ್) ಅಥವಾ ಮೌಲ್ಯ ಇಳಿಕೆ (ಅಂದರೆ ನಿರ್ದಿಷ್ಟ ವಸ್ತು ಅಥವಾ ಆಸ್ತಿ ಬಳಕೆಯಿಂದಾಗಿ ಅಥವಾ ಕಾಲಾನುಕ್ರಮದಲ್ಲಿ ಮೌಲ್ಯವನ್ನು ನಿಧಾನವಾಗಿ ಕಳೆದುಕೊಳ್ಳುವ ಪ್ರಕ್ರಿಯೆ). ಖರ್ಚುಗಳನ್ನು ಆದಾಯ ಹಾಗೂ ಹಿಂದಿನ ವರ್ಷಗಳ ದಾಖಲೆಗಳೊಂದಿಗೆ ಹೋಲಿಸಿ ವಿಶ್ಲೇಷಿಸುವುದರಿಂದ, ಸಂಸ್ಥೆಯ ನಿರ್ವಹಣಾ ದಕ್ಷತೆಯ ಬಗ್ಗೆ ಸ್ಪಷ್ಟ ನೋಟ ಸಿಗುತ್ತದೆ.

ತೆರಿಗೆಗಳು ಮತ್ತು ಲಾಭ ವಿಶ್ಲೇಷಣೆ: ಸರಕು ಮತ್ತು ಸೇವೆಗಳ ಪೂರೈಕೆಯಿಂದ ನೇರವಾಗಿ ಬರುವ ಲಾಭವನ್ನು ಹಣಕಾಸು ನಿರ್ವಹಣೆಯ ಪರಿಭಾಷೆಯಲ್ಲಿ ತೆರಿಗೆ ಪೂರ್ವದ ಲಾಭ (ಪಿಬಿಟಿ) ಎಂದು ಕರೆಯಲಾಗುತ್ತದೆ. ಬಂದ ಲಾಭಕ್ಕೆ ತೆರಿಗೆ ಕಟ್ಟಿದ ನಂತರ ಉಳಿಯುವ ಲಾಭವನ್ನು ತೆರಿಗೆ ನಂತರದ ಲಾಭ (ಪಿಎಟಿ) ಎಂದು ಕರೆಯಲಾಗುತ್ತದೆ. ಎಲ್ಲ ಖರ್ಚುಗಳ ನಂತರ ಕಂಪನಿಗೆ ಎಷ್ಟು ಹೆಚ್ಚುವರಿ ಆದಾಯ ಸೃಷ್ಟಿಸುವ ಸಾಮರ್ಥ್ಯವಿದೆ ಎಂಬುದನ್ನು ಇದು ಹೇಳುತ್ತದೆ.

ಹೂಡಿಕೆದಾರರು ಗಮನಿಸಬೇಕಿರುವ ಅನುಪಾತಗಳು: ಕಂಪನಿಯ ಆರ್ಥಿಕ ಸ್ಥಿತಿ ಮತ್ತು ಷೇರುಗಳ ಭವಿಷ್ಯದ ಪರಿಗಣನೆಗಾಗಿ, ಹೂಡಿಕೆದಾರರು ಎರಡು ಪ್ರಮುಖ ಅನುಪಾತಗಳ ಮೇಲೆ ಗಮನಹರಿಸಬೇಕು:

- **ತೆರಿಗೆ ನಂತರದ ಲಾಭ ಮಿತಿ (ಪಿಎಟಿ ಮಾರ್ಜಿನ್):** ಇದು ಕಂಪನಿ ಒಂದೊಂದು ರೂಪಾಯಿ ಆದಾಯದ ಮೇಲೆ ಎಷ್ಟು ಲಾಭ ಗಳಿಸುತ್ತಿದೆ ಎಂಬುದನ್ನು ತೋರಿಸುವ ಅನುಪಾತ. ಈ ಮಿತಿ ಕಾಲಕಾಲಕ್ಕೆ ಹೆಚ್ಚಾಗುತ್ತಾ ಹೋದರೆ ಮತ್ತು ಸಮಾನ ವಲಯದ ಇತರ ಕಂಪನಿಗಳಿಗಿಂತ ಉತ್ತಮ ಪ್ರಗತಿಯ ಹಾದಿಯಲ್ಲಿದ್ದರೆ ಅದು ಉತ್ತಮ ಲಾಭದಾಯಕತೆಯ ಸೂಚಕ. ಮಿತಿ ಇಳಿಯುತ್ತಿದ್ದರೆ ಕಂಪನಿಯಲ್ಲಿ ಏನೋ ತಾತ್ಕಾಲಿಕ ಸಮಸ್ಯೆ ಇರಬಹುದು ಅಥವಾ ಕಂಪನಿ ಸಂಕಷ್ಟದ ಹಾದಿಯಲ್ಲಿರಬಹುದು ಎಂದು ಅಂದಾಜು ಮಾಡಬೇಕಾಗುತ್ತದೆ. ಒಂದೇ ಮಾತಲ್ಲಿ ಹೇಳುವುದಾದರೆ ಪಿಎಟಿ ಮಾರ್ಜಿನ್ ನಕಾರಾತ್ಮಕವಾಗಿದ್ದರೆ ಆ ಕಂಪನಿಯನ್ನು ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿರುತ್ತದೆ.
- **ಹೂಡಿಕೆ ಮೇಲಿನ ಲಾಭ (ಆರ್‌ಒಇ):** ಷೇರುದಾರರ ಹೂಡಿಕೆಯ ಮೊತ್ತವನ್ನು ಕಂಪನಿ ಎಷ್ಟು ಪರಿಣಾಮಕಾರಿಯಾಗಿ ಲಾಭಕ್ಕೆ ಪರಿವರ್ತಿಸುತ್ತಿದೆಯೆಂಬುದನ್ನು ಅಳೆಯುವ ಪ್ರಮಾಣ. ಆರ್‌ಒಇ ಹೆಚ್ಚುತ್ತ ಸಾಗುವುದು ಬಂಡವಾಳದ ಪರಿಣಾಮಕಾರಿ ಬಳಕೆ ಮತ್ತು ಷೇರುದಾರರ ಹೂಡಿಕೆಯ ಮೌಲ್ಯವೃದ್ಧಿಯ ಸ್ಪಷ್ಟ ಸೂಚಕವಾಗಿದೆ.

ಕಿವಿಮಾತು: ಲಾಭ ಮತ್ತು ನಷ್ಟದ ವರದಿಯು ಷೇರುಗಳ ವಿಶ್ಲೇಷಣೆಯಲ್ಲಿ ಅವಿಭಾಜ್ಯ ಸಾಧನ, ಕಂಪನಿಯ ವರಮಾನ, ಖರ್ಚು, ನಿರ್ವಹಣೆ ಮತ್ತು ಒಟ್ಟಾರೆ ಲಾಭದಾಯಕತೆಯ ಕುರಿತಾಗಿ ಪ್ರಮುಖ ಒಳನೋಟ ನೀಡುತ್ತದೆ. ಯಾರು ಕಂಪನಿಯ ಲಾಭ ಮತ್ತು ನಷ್ಟದ ವರದಿಯನ್ನು ತೆರಿಗೆ ನಂತರದ ಲಾಭ ಅನುಪಾತ ಮತ್ತು ಹೂಡಿಕೆ ಮೇಲಿನ ಲಾಭದೊಂದಿಗೆ ತುಲನೆ ಮಾಡಿ ನೋಡಲು ಕಲಿಯುತ್ತಾರೋ ಅವರು ಉತ್ತಮ ಹೂಡಿಕೆ ನಿರ್ಧಾರಗಳನ್ನು ಮಾಡುತ್ತಾರೆ.

ಜಿಎಸ್‌ಟಿ ಬದಲಾವಣೆ: ಖರೀದಿ ಮುಂದಕ್ಕೆ

ಸಚಿವೆ ನಿರ್ಮಲಾ ಅಧ್ಯಕ್ಷತೆಯಲ್ಲಿ ಇದೇ 3, 4ರಂದು ಜಿಎಸ್‌ಟಿ ಮಂಡಳಿ ಸಭೆ

ಮುಖ್ಯಾಂಶಗಳು
- ಖರೀದಿ ಅನಿಶ್ಚಿತತೆ ಅಲ್ಪಕಾಲಿಕ
- ಅಕ್ಟೋಬರ್ ಕೊನೆಯಲ್ಲಿ ಖರೀದಿಗೆ ಬಲ



ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ಹಂತಗಳಲ್ಲಿ ಬದಲಾವಣೆ ತರುವ ಪ್ರಸ್ತಾವ ಇರುವ ಕಾರಣಕ್ಕೆ, ಆನ್‌ಲೈನ್ ವೇದಿಕೆಗಳ ಮೂಲಕ ಖರೀದಿಸುವ ಪ್ರವೃತ್ತಿ ಇರುವ ಹಲವರು ಖರೀದಿಯನ್ನು ಮುಂದೂಡುತ್ತಿದ್ದಾರೆ.

ತೆರಿಗೆ ಪ್ರಮಾಣ ಇಳಿಕೆ ಆಗಿ, ಗ್ರಾಹಕ ಬಳಕೆ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳ ಬೆಲೆಯು ಕಡಿಮೆ ಆಗಬಹುದು ಎಂಬ ನಿರೀಕ್ಷೆಯಲ್ಲಿ ಅವರು ಈ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಖರೀದಿಯನ್ನು ಮುಂದಕ್ಕೆ ಹಾಕುತ್ತಿರುವುದು ಅಲ್ಪಕಾಲಕ್ಕೆ ಮಾತ್ರ ಸೀಮಿತ, ಜಿಎಸ್‌ಟಿ ಬದಲಾವಣೆಗಳ ವಿಚಾರದಲ್ಲಿ ಸ್ಪಷ್ಟತೆ ಮೂಡಿದ ನಂತರದಲ್ಲಿ ಖರೀದಿಯು ಚುರುಕುಗೊಳ್ಳಲಿದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಜಿಎಸ್‌ಟಿ ಅಡಿಯಲ್ಲಿ ನಾಲ್ಕು ಹಂತಗಳ ತೆರಿಗೆಯ ಬದಲಿಗೆ ಎರಡು ಹಂತಗಳ ತೆರಿಗೆ ಪದ್ಧತಿಯನ್ನು ಜಾರಿಗೆ ತರುವ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ಸಿದ್ಧಪಡಿಸಿದೆ. ಕೇಂದ್ರದ ಪ್ರಸ್ತಾವ ಜಾರಿಗೆ ಬಂದಲ್ಲಿ ವಾಷಿಂಗ್ ಮೆಷಿನ್, ಹವಾನಿಯಂತ್ರಕಗಳು, ರೆಫ್ರಿಜರೇಟರ್‌ಗಳಂತಹ ಉಪಕರಣಗಳ ಮೇಲಿನ ತೆರಿಗೆ ತಗ್ಗುವ ನಿರೀಕ್ಷೆ ಇದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯ ಜಿಎಸ್‌ಟಿ ಮಂಡಳಿಯು ಸೆಪ್ಟೆಂಬರ್ 3 ಹಾಗೂ 4ರಂದು ಸಭೆ ಸೇರಲಿದೆ.

'ತೆರಿಗೆ ಹಂತಗಳಲ್ಲಿ ಬದಲಾವಣೆ ಆಗಲಿದೆ ಎಂಬ ನಿರೀಕ್ಷೆಯ ಕಾರಣದಿಂದಾಗಿ ಗ್ರಾಹಕರು ಕಾದುನೋಡುವ ತಂತ್ರದ ಮೊರೆಹೋಗಿದ್ದಾರೆ. ಜಿಎಸ್‌ಟಿ ವಿಚಾರದಲ್ಲಿ ಸ್ಪಷ್ಟತೆ ಸಿಗುವುದು ವಿಳಂಬ ಆದಲ್ಲಿ, ಹವಾನಿಯಂತ್ರಕ, ರೆಫ್ರಿಜರೇಟರ್‌ಗಳ ಮಾರಾಟದ ಮೇಲೆ ಶೇ 30ರವರೆಗೆ ಪರಿಣಾಮ ಉಂಟಾಗಬಹುದು ಎಂಬುದನ್ನು ಆಂತರಿಕ ಅಂದಾಜುಗಳು ಹೇಳುತ್ತಿವೆ' ಎಂದು ಗ್ರ್ಯಾಂಟ್ ಥಾರ್ನ್‌ಟನ್ ಭಾರತ್ ಸಂಸ್ಥೆಯ ಪಾಲುದಾರ ನವೀನ್ ಮಲ್ಪಾನಿ ಹೇಳಿದ್ದಾರೆ.

ದೀಪಾವಳಿ ಸಂದರ್ಭದಲ್ಲಿ ತೆರಿಗೆ ದರ ಇಳಿಕೆಯಾಗಿ, ಉತ್ಪನ್ನಗಳ ಬೆಲೆಯೂ ಕಡಿಮೆ ಆಗಬಹುದು ಎಂದು ಗ್ರಾಹಕರು ಅಂದಾಜು ಮಾಡಿದ್ದಾರೆ. ₹1.2 ಲಕ್ಷ ಮೌಲ್ಯದ ಸ್ಮಾರ್ಟ್‌ಫೋನ್ ಬೆಲೆಯು ಶೇ 10ರಷ್ಟು ಕಡಿಮೆ ಆಗಬಹುದು ಎಂಬ ನಿರೀಕ್ಷೆಯಲ್ಲಿ ಗ್ರಾಹಕರು ಖರೀದಿಯನ್ನು ಮುಂದೂಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿ ಅಡಿ ಹೊಸ ದರಗಳನ್ನು ಅಂತಿಮಗೊಳಿಸಿದ ನಂತರದಲ್ಲಿ, ಅಕ್ಟೋಬರ್ ಕೊನೆಯ ಭಾಗದಲ್ಲಿ ಬೇಡಿಕೆ ಹೆಚ್ಚಳ ಆಗಬಹುದು ಎಂದು ಇ–ಕಾಮರ್ಸ್ ವಹಿವಾಟಿನಲ್ಲಿರುವ ಪ್ರಮುಖ ಕಂಪನಿಗಳು ಉತ್ಪಾದಕರಿಗೆ ತಿಳಿಸುತ್ತಿವೆ ಎಂದು ಕೌಂಟರ್‌ಪಾಯಿಂಟ್ ರಿಸರ್ಚ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಶುಭಂ ನಿಮ್ಕಾರ್ ಹೇಳಿದ್ದಾರೆ.

ಸೇಬು ಮಾರಾಟಕ್ಕೆ ಅಣಿ

ಪಿಟಿಐ ಚಿತ್ರ



ಹಿಮಾಚಲ ಪ್ರದೇಶದ ಕುಲ್ಲುವಿನಲ್ಲಿ ಸೇಬು ಹಣ್ಣುಗಳನ್ನು ಮಾರಾಟಕ್ಕಾಗಿ ಪೆಟ್ಟಿಗೆಗೆ ಕೆಲಸಗಾರರು ತುಂಬಿಸಿದರು

'ರಾಜ್ಯ ಸರ್ಕಾರದ ದಿವಾಳಿತನ ಸಾಬೀತು'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯ ಸರ್ಕಾರ ದಿವಾಳಿ ಆಗಿದೆ ಎಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೋಪ ಬರುತ್ತದೆ. ಈಗ ಎರಡನೇ ಬಾರಿ ಸ್ಥಿರಾಸ್ತಿ ನೋಂದಣಿ ಶುಲ್ಕ ಹೆಚ್ಚಿಸಿ, ದಿವಾಳಿತನ ಸಾಬೀತು ಪಡಿಸಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಮಾನ್ಯರು ಖರೀದಿಸುವ ಚಿಕ್ಕ ಮನೆ, ಅಪಾರ್ಟ್‌ಮೆಂಟ್‌ಗಳ ಮೇಲೆ ಶುಲ್ಕ ಹೆಚ್ಚಳವು ಪರಿಣಾಮ ಬೀರುತ್ತದೆ' ಎಂದರು.

'ಜಿಎಸ್‌ಟಿ ನಿರ್ಧಾರವು ರಾಜ್ಯ ಸರ್ಕಾರದ ಕೈಯಲ್ಲಿ ಇಲ್ಲ ಎಂದು ರಾಜ್ಯದ ಜನರು ಸಮಾಧಾನ ಪಟ್ಟುಕೊಳ್ಳುವ ಸ್ಥಿತಿ ಬಂದಿದೆ' ಎಂದು ಅವರು ವ್ಯಂಗ್ಯವಾಡಿದರು.



ಬೇರೆ ಧರ್ಮದವರು ಎಷ್ಟು ಮಕ್ಕಳನ್ನು ಮಾಡಿದರೂ ತೊಂದರೆ ಇಲ್ಲ. ಹಿಂದೂಗಳು ಮೂರು ಮಕ್ಕಳನ್ನು ಹೊಂದುವಂತೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಕರೆ ನೀಡಿದರೆ ಕಾಂಗ್ರೆಸ್‌ನವರಿಗೆ ನೋವಾಗುತ್ತದೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಖಾಸಗಿ ಬಂಡವಾಳ ವೆಚ್ಚ ಶೇ 21.5ರಷ್ಟು ಹೆಚ್ಚಳ ನಿರೀಕ್ಷೆ'

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಖಾಸಗಿ ವಲಯದಿಂದ ಆಗುವ ಬಂಡವಾಳ ವೆಚ್ಚದ ಪ್ರಮಾಣ ಶೇ 21.5ರಷ್ಟು ಹೆಚ್ಚಳ ಕಾಣುವ ನಿರೀಕ್ಷೆ ಇದೆ ಎಂದು ಆರ್‌ಬಿಐ ಲೇಖನವೊಂದು ಹೇಳಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಅಂದಾಜು ₹2,20,132 ಕೋಟಿ ಬಂಡವಾಳ ವೆಚ್ಚ ಆಗಿದೆ. ಈ ಬಾರಿ ₹2,67,432 ಕೋಟಿ ಬಂಡವಾಳ ವೆಚ್ಚ ಆಗಬಹುದು ಎಂದು ಲೇಖನವು ಅಂದಾಜು ಮಾಡಿದೆ. ಜಿಡಿಪಿ ಹೆಚ್ಚಳ, ನಿರುದ್ಯೋಗ ಮತ್ತು ಹಣದುಬ್ಬರ ದರ ಇಳಿಕೆ ಹಾಗೂ ರೆಪೊ ದರ ಕಡಿತವು ಹೂಡಿಕೆ ಹೆಚ್ಚಳಕ್ಕೆ ಕಾರಣವಾಗಲಿವೆ ಎಂದು ಹೇಳಿದೆ.

ಜಾಗತಿಕ ಅನಿಶ್ಚಿತತೆಯ ನಡುವೆಯೂ ದೇಶದ ಕಂಪನಿಗಳು ಆರೋಗ್ಯಕರ ಹಣಕಾಸಿನ ಸ್ಥಿತಿ ಹೊಂದಿವೆ. ಹೆಚ್ಚಿದ ನಗದು ಲಭ್ಯತೆ, ಲಾಭದಾಯಕತೆಯ ಹೆಚ್ಚಳ ಕಂಡುಬಂದಿದೆ ಎಂದು 'ಖಾಸಗಿ ಕಂಪನಿಗಳ ಹೂಡಿಕೆ: 2024–25ರಲ್ಲಿ ಬೆಳವಣಿಗೆ ಮತ್ತು 2025–26ರ ಮುನ್ನೋಟ'ದ ಲೇಖನದಲ್ಲಿ ಬರೆಯಲಾಗಿದೆ.

ಜಾಗತಿಕ ರಾಜಕೀಯ ಬಿಕ್ಕಟ್ಟು, ಅನಿಶ್ಚಿತತೆ, ಬೇಡಿಕೆ ಇಳಿಕೆ ಆಗುತ್ತಿರುವುದು ಹೂಡಿಕೆಯ ಮೇಲೆ ಪ್ರಭಾವ ಬೀರಬಹುದು ಎಂದು ಹೇಳಿದೆ.

ಸಾರ್ವಜನಿಕ ಸ್ಥಳ ಬಳಕೆಗೆ ಮಾತ್ರ ಮೋಟಾರು ವಾಹನ ತೆರಿಗೆ: 'ಸುಪ್ರೀಂ'



ನವದೆಹಲಿ (ಪಿಟಿಐ): ಮೋಟಾರು ವಾಹನ ತೆರಿಗೆಯು ಎಲ್ಲಾ ವಾಹನಗಳಿಗೂ ಕಡ್ಡಾಯವಲ್ಲ. ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಬಳಸಿದಾಗ ಮಾತ್ರವೇ ಮಾಲೀಕನು ಈ ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ಪೀಠವು, 2024ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ನಡೆಸಿತು.

'ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಬಳಸದೇ ಇದ್ದರೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ಬಳಕೆಗೆ ಇರಿಸದಿದ್ದರೆ ಈ ಅವಧಿಯಲ್ಲಿ ಮಾಲೀಕನು ಮೋಟಾರು ವಾಹನ ತೆರಿಗೆಯನ್ನು ಪಾವತಿಸಬೇಕಿಲ್ಲ' ಎಂದು ಪೀಠ ಹೇಳಿತು.

'ಮೋಟಾರು ವಾಹನ ತೆರಿಗೆಯು ಪರಿಹಾರಾತ್ಮಕ ಸ್ವರೂಪವನ್ನು ಹೊಂದಿದೆ. ರಸ್ತೆ ಹಾಗೂ ಹೆದ್ದಾರಿಯಂತಹ ಸಾರ್ವಜನಿಕ ಮೂಲಸೌಕರ್ಯಗಳನ್ನು ಬಳಸುವ ವ್ಯಕ್ತಿಯು ಈ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ವ್ಯಕ್ತಿಯು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಬಳಸದೇ ಇದ್ದರೆ, ಸಾರ್ವಜನಿಕ ಮೂಲಸೌಕರ್ಯಗಳನ್ನು ಆತ ಬಳಸುತ್ತಿಲ್ಲ. ಹೀಗಿರುವಾಗ ಆತನ ಮೇಲೆ ತೆರಿಗೆ ಹೊರೆಯನ್ನು ಹೊರಿಸಬಾರದು' ಎಂದೂ ಹೇಳಿದೆ.

ಆಂಧ್ರಪ್ರದೇಶ ಮೋಟಾರು ವಾಹನ ಕಾಯಿದೆ–1963ರ ಮೂರನೇ ಸೆಕ್ಷನ್ ಅನ್ನು ಉಲ್ಲೇಖಿಸಿದ ಪೀಠವು, 'ಈ ನಿಬಂಧನೆಯಲ್ಲಿ 'ಸಾರ್ವಜನಿಕ ಸ್ಥಳ'ದಲ್ಲಿ ವಾಹನ ಬಳಸಿದಾಗ ತೆರಿಗೆ ಪಾವತಿಸಬೇಕು ಎಂದು ಉಲ್ಲೇಖಿಸಲಾಗಿದೆ' ಎಂದಿತು.

ರಾಷ್ಟ್ರೀಯ ಇಸ್ಪಾತ್ ನಿಗಮ ಲಿಮಿಟೆಡ್ (ಆರ್‌ಐಎನ್‌ಎಲ್) ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. 'ಈ ಪ್ರಕರಣದಲ್ಲಿ ಆರ್‌ಐಎನ್‌ಎಲ್, ತನ್ನ ನಿರ್ಬಂಧಿತ ಪ್ರದೇಶದಲ್ಲಿ ವಾಹನವನ್ನು ಬಳಸಿದೆ. ಅದು ಸಾರ್ವಜನಿಕ ಸ್ಥಳವಲ್ಲ' ಎಂದೂ ಪೀಠ ಹೇಳಿತು.

ಲಂಡನ್: ಹಿಂದೂ ಸಮುದಾಯ ಭವನದಲ್ಲಿ ಬೆಂಕಿ

ಲಂಡನ್ (ಪಿಟಿಐ): ಪೂರ್ವ ಲಂಡನ್‌ನ ಇಲ್‌ಫೋರ್ಡ್‌ನಲ್ಲಿರುವ ಕ್ಲೀವ್‌ಲ್ಯಾಂಡ್ ರಸ್ತೆಯ ಶ್ರೀ ಸೊರಾಠಿಯಾ ಪ್ರಜಾಪ್ರತಿ ಸಮುದಾಯ ಭವನದಲ್ಲಿ ಹಿಂದೂ ಸಮಾಜ ಗಣೇಶ ವಿಸರ್ಜನಾ ಮಹೋತ್ಸವದ ಸಂಭ್ರಮದಲ್ಲಿದ್ದ ಸಂದರ್ಭದಲ್ಲಿ ಬೆಂಕಿ ಅವಘಡ ಸಂಭವಿಸಿದೆ.

ಕೂಡಲೇ ರಕ್ಷಣಾ ಕಾರ್ಯ ಕೈಗೊಂಡ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಕಟ್ಟಡಕ್ಕೆ ಭಾಗಶಃ ಹಾನಿಯಾಗಿದ್ದು, ಯಾರಿಗೂ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯರ ಪ್ರಕಾರ ಪಟಾಕಿ ಸಿಡಿತ ಅವಘಡಕ್ಕೆ ಕಾರಣ ಎನ್ನಲಾಗಿದೆ. ಆದರೆ, ಪಟಾಕಿ ಸಿಡಿತದಿಂದಲೇ ಬೆಂಕಿ ಹೊತ್ತಿಕೊಂಡಿರುವುದಕ್ಕೆ ಯಾವುದೇ ಸಾಕ್ಷಿಗಳಿಲ್ಲ. ಘಟನೆ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದ್ದಾರೆ.

ಇಲ್‌ಫೋರ್ಡ್‌ನಲ್ಲೇ ಭಾರತೀಯ ರೆಸ್ಟೋರೆಂಟ್ ಮೇಲೆ ದಾಳಿ ಮಾಡಿ ಬೆಂಕಿ ಹಚ್ಚಿದ್ದ ಘಟನೆ ಕಳೆದ ವಾರ ನಡೆದಿತ್ತು. ಇದೀಗ ಕೆಲವೇ ಕಿಲೋ ಮೀಟರ್ ದೂರ ಇರುವ ಹಿಂದೂ ಸಮುದಾಯ ಭವನದಲ್ಲಿ ಬೆಂಕಿ ಅವಘಡ ಸಂಭವಿಸಿರುವುದು ಆತಂಕ ಮತ್ತು ಅನುಮಾನಕ್ಕೆ ಕಾರಣವಾಗಿದೆ.

ಇಸ್ರೇಲ್ ದಾಳಿ: ಹಮಾಸ್ ವಕ್ತಾರನ ಹತ್ಯೆ

ದೀರ್ ಅಲ್–ಬಲಾಹ್ (ಎಪಿ): ಗಾಜಾದ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಹಮಾಸ್‌ನ ಸಶಸ್ತ್ರ ಪಡೆಗಳ ವಕ್ತಾರ ಅಬು ಒಬೈದಾ ಅವರನ್ನು ಹತ್ಯೆಗೈಯ್ಯಲಾಗಿದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಭಾನುವಾರ ಘೋಷಿಸಿದ್ದಾರೆ.

'ಗಾಜಾ ನಗರದ ಮೇಲೆ ಇಸ್ರೇಲ್ ಪಡೆಗಳು ಹೊಸ ದಾಳಿ ಆರಂಭಿಸಿವೆ. ಹೀಗಾಗಿ ನಗರವನ್ನು ಯುದ್ಧವಲಯ ಎಂದು ಘೋಷಿಸಲಾಗುತ್ತಿದೆ' ಎಂದು ಒಬೈದಾ ಶುಕ್ರವಾರ ಹೇಳಿದ್ದರು. ಇದೇ ಅವರ ಕೊನೆಯ ಹೇಳಿಕೆಯಾಗಿತ್ತು. ಇದೀಗ ಅವರ ಹತ್ಯೆಯ ವಿಚಾರವನ್ನು ಇಸ್ರೇಲ್ ಘೋಷಿಸಿದೆ.

ಆದರೆ, ಹಮಾಸ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಹಮಾಸ್ ನಾಯಕರನ್ನು ಹೊಡೆದುರುಳಿಸಲು ಪಣತೊಟ್ಟಿರುವ ಇಸ್ರೇಲ್ ಪಡೆಗಳು ಈಗಾಗಲೇ ಹಮಾಸ್‌ನ ಹಲವು ನಾಯಕರನ್ನು ಹತ್ಯೆಗೈದಿವೆ. ಈ ಸಾಲಿಗೆ ಈಗ ಒಬೈದಾ ಕೂಡ ಸೇರಿದಂತಾಗಿದೆ.

43 ಮಂದಿ ಸಾವು

ಗಾಜಾ ಪಟ್ಟಣದ ವಿವಿಧ ಭಾಗಗಳಲ್ಲಿ ಇಸ್ರೇಲ್ ಪಡೆಗಳು ನಡೆಸುತ್ತಿರುವ ದಾಳಿಯಿಂದಾಗಿ ಶನಿವಾರದಿಂದ 43 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ. ಶಿಫಾ ಆಸ್ಪತ್ರೆಯೊಂದರಲ್ಲೇ ಶವಾಗಾರಕ್ಕೆ 29 ಮೃತದೇಹಗಳನ್ನು ತರಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ. ನೆರವು ಕೇಂದ್ರಗಳ ಬಳಿಯೇ ಇಸ್ರೇಲ್ ಪಡೆಗಳು ಹೆಚ್ಚಿನ ದಾಳಿ ನಡೆಸುತ್ತಿವೆ ಎಂದೂ ಅಧಿಕಾರಿಗಳು ದೂರಿದ್ದಾರೆ.

ಅಮೆರಿಕ–ಭಾರತ ನಡುವಿನ ಅಂಚೆ ವ್ಯವಹಾರ ಸ್ಥಗಿತ

ನವದೆಹಲಿ (ಪಿಟಿಐ): ಅಮೆರಿಕದ ಜೊತೆಗಿನ ಎಲ್ಲ ರೀತಿಯ ಅಂಚೆ ವ್ಯವಹಾರಗಳ ಮುಂಗಡ ಕಾಯ್ದಿರಿಸುವಿಕೆಯನ್ನು ಭಾರತೀಯ ಅಂಚೆ ಇಲಾಖೆ ಸ್ಥಗಿತಗೊಳಿಸಿದೆ.

ಅಮೆರಿಕದ ಸೀಮಾಸುಂಕ ಇಲಾಖೆಯು ಜಾರಿಗೊಳಿಸಿರುವ ಹೊಸ ನಿಯಮಗಳ ಬಗ್ಗೆ ಸ್ಪಷ್ಟತೆ ಇಲ್ಲದಿರುವ ಕಾರಣಕ್ಕೆ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಅಂಚೆ ಇಲಾಖೆ ತಿಳಿಸಿದೆ.

ಅಮೆರಿಕ ಸರ್ಕಾರವು ಹೊಸ ಕಸ್ಟಮ್ ನಿಯಮಗಳನ್ನು ಜಾರಿಗೊಳಿಸಿದ ಬೆನ್ನಲ್ಲೇ ಭಾರತೀಯ ಅಂಚೆ ಇಲಾಖೆಯು ₹8,800ಕ್ಕಿಂತ (100 ಡಾಲರ್) ಅಧಿಕ ಮೌಲ್ಯದ ವಸ್ತುಗಳ ರವಾನೆಯನ್ನು ಈ ಹಿಂದೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು.

ಈ ನಿರ್ಧಾರವನ್ನು ಪುನರ್ ಪರಿಶೀಲಿಸಿರುವ ಅಂಚೆ ಇಲಾಖೆ ಪತ್ರ, ದಾಖಲೆ ಮತ್ತು ₹8,800 (100 ಡಾಲರ್) ಮೌಲ್ಯದವರೆಗಿನ ವಸ್ತುಗಳು ಸೇರಿದಂತೆ ಎಲ್ಲ ರೀತಿಯ ಅಂಚೆ ವ್ಯವಹಾರಗಳ ಮುಂಗಡ ಕಾಯ್ದಿರಿಸುವಿಕೆಯನ್ನು ಸ್ಥಗಿತಗೊಳಿಸಿದೆ.

'ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ. ಶೀಘ್ರದಲ್ಲಿ ಎಲ್ಲ ಸೇವೆಗಳನ್ನು ಪುನರಾರಂಭಿಸಲು ಪ್ರಯತ್ನಿಸಲಾಗುತ್ತದೆ' ಎಂದು ಅಂಚೆ ಇಲಾಖೆ ಹೇಳಿದೆ.

ಅಮೆರಿಕವು ಜುಲೈ 30ರಂತೆ ಹೊರಡಿಸಿರುವ ಕಾರ್ಯಕಾರಿ ಆದೇಶದ ಅನ್ವಯ ₹8,800ಗಿಂತ ಅಧಿಕ ಮೌಲ್ಯದ ವಸ್ತುಗಳಿಗೆ ಆಗಸ್ಟ್ 20ರಿಂದ ಅಮೆರಿಕದಲ್ಲಿ ಸುಂಕ ವಿಧಿಸಲಾಗುತ್ತದೆ. ಆದರೆ, ಈ ಕುರಿತಾದ ಮಾರ್ಗಸೂಚಿಯಲ್ಲಿ ಸ್ಪಷ್ಟತೆ ಇರದ ಕಾರಣ ಅಮೆರಿಕಕ್ಕೆ ತೆರಳುವ ವಿಮಾನಗಳು ವಸ್ತುಗಳನ್ನು ಕೊಂಡೊಯ್ಯಲು ಒಪ್ಪುತ್ತಿಲ್ಲ.

ಅಕ್ಟೋಬರ್‌ನಿಂದ ಸ್ಪೆಷಾಲಿಟಿ ಫರ್ಟಿಲೈಜರ್ ರಫ್ತಿಗೆ ಚೀನಾ ನಿರ್ಬಂಧ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಿನಿಂದ ಸ್ಪೆಷಾಲಿಟಿ ಫರ್ಟಿಲೈಜರ್ ರಫ್ತಿಗೆ ಚೀನಾ ಮತ್ತೆ ನಿರ್ಬಂಧ ಹೇರಲಿದೆ. ಇದು ಪೂರೈಕೆ ಸವಾಲು ಸೃಷ್ಟಿಸಲಿದ್ದು, ದರ ಹೆಚ್ಚಳಕ್ಕೆ ಕಾರಣವಾಗಲಿದೆ. ಅಲ್ಲದೆ, ನೇರವಾಗಿ ರೈತರ ಮೇಲೆ ಪರಿಣಾಮ ಬೀರಲಿದೆ ಎಂದು ಕೈಗಾರಿಕಾ ವಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಚೀನಾ ಅಕ್ಟೋಬರ್‌ನಿಂದ ನಿರ್ಬಂಧವನ್ನು ಜಾರಿಗೆ ತರುತ್ತಿದೆ. ನಿರ್ಬಂಧವು ಭಾರತಕ್ಕೆ ಮಾತ್ರವೇ ಅನ್ವಯ ಆಗುವುದಿಲ್ಲ, ಜಗತ್ತಿನ ಇತರ ಮಾರುಕಟ್ಟೆಗಳಿಗೂ ಅನ್ವಯಿಸಲಿದೆ' ಎಂದು ಕರಗುವ ರಸಗೊಬ್ಬರ ಕೈಗಾರಿಕಾ ಸಂಘದ (ಸೊಲ್ಯುಬಲ್ ಫರ್ಟಿಲೈಜರ್ ಇಂಡಸ್ಟ್ರಿ ಅಸೋಸಿಯೇಷನ್ – ಎಸ್‌ಎಫ್‌ಐಎ) ಅಧ್ಯಕ್ಷ ರಾಜೀವ್ ಚಕ್ರವರ್ತಿ ಹೇಳಿದ್ದಾರೆ.

ಭಾರತವು ಚೀನಾದಿಂದ ಶೇ 80ರಷ್ಟು ಸ್ಪೆಷಾಲಿಟಿ ಫರ್ಟಿಲೈಜರ್ ಅನ್ನು ನೇರವಾಗಿ ಆಮದು ಮಾಡಿಕೊಳ್ಳುತ್ತಿದೆ. ಉಳಿದ ಶೇ 20ರಷ್ಟನ್ನು ಪರೋಕ್ಷವಾಗಿ ಚೀನಾದ ವ್ಯಾಪಾರ ಮೂಲಗಳಿಂದ ಖರೀದಿಸುತ್ತದೆ. ಭಾರತವು, ಚೀನಾದ ಸ್ಪೆಷಾಲಿಟಿ ಫರ್ಟಿಲೈಜರ್ ಆಮದು ಮೇಲೆ ಶೇ 95ರಷ್ಟು ಅವಲಂಬಿಸಿದೆ.

ಇತ್ತೀಚೆಗೆ ಚೀನಾ ಸ್ಪೆಷಾಲಿಟಿ ಫರ್ಟಿಲೈಜರ್ ರಫ್ತು ಮೇಲೆ ನಿರ್ಬಂಧ ಹೇರಿತ್ತು. ಇದರಿಂದ ಲಭ್ಯತೆಯಲ್ಲಿ ಕೊರತೆಯುಂಟಾಗಿ, ಬೆಲೆ ಶೇ 40ರಷ್ಟು ಏರಿಕೆಯಾಗಿತ್ತು.

ಗಡಿ ವಿವಾದ ಇತ್ಯರ್ಥಕ್ಕೆ ಸಹಮತ

ಒಂದನೇ ಪುಟದಿಂದ...

ಜಾಗತಿಕ ಅರ್ಥ ವ್ಯವಸ್ಥೆಗೆ ಸ್ಥಿರತೆ ತರಲು ಉಭಯ ದೇಶಗಳ ಆರ್ಥಿಕತೆಯು ಪ್ರಮುಖ ಪಾತ್ರ ವಹಿಸಬೇಕು ಎಂಬ ವಿಚಾರದಲ್ಲಿ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿದರು. ಅಮೆರಿಕದ ಸುಂಕ ಹೇರಿಕೆಯು ಜಾಗತಿಕ ಅರ್ಥ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿರುವ ಸಮಯದಲ್ಲಿ ನಡೆದಿರುವ ಈ ಮಾತುಕತೆ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

'ಭಾರತ ಮತ್ತು ಚೀನಾ ಬಾಹ್ಯ ಶಕ್ತಿಗಳ ಒತ್ತಡಕ್ಕೆ ಮಣಿಯದೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿವೆ. ಉಭಯ ದೇಶಗಳ ಸಂಬಂಧವನ್ನು ಮೂರನೇ ದೇಶದ ದೃಷ್ಟಿಯಲ್ಲಿ ನೋಡಬಾರದು' ಎಂದು ಮಾತುಕತೆ ವೇಳೆ ಪ್ರಧಾನಿ ಹೇಳಿದ್ದಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ಎಂಇಎ) ಪ್ರಕಟಣೆ ತಿಳಿಸಿದೆ.

ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಗಡಿ ಪ್ರದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯ ಮಹತ್ವವನ್ನು ಪ್ರಧಾನಿ ಅವರು ಒತ್ತಿ ಹೇಳಿದರು. ಲಡಾಖ್‌ನಲ್ಲಿ ವಾಸ್ತವ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ನಿಯೋಜಿಸಿದ್ದ ಸೇನಾಪಡೆಗಳನ್ನು ಕಳೆದ ವರ್ಷ ವಾಪಸ್ ಕರೆಸಿಕೊಂಡದ್ದು ಮತ್ತು ಆ ಬಳಿಕ ಗಡಿಯಲ್ಲಿ ಶಾಂತಿ ನೆಲೆಸಿರುವುದಕ್ಕೆ ಉಭಯ ನಾಯಕರು ತೃಪ್ತಿ ವ್ಯಕ್ತಪಡಿಸಿದರು.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ರಷ್ಯಾದ ಕಜಾನ್‌ನಲ್ಲಿ ನಡೆದ ಮಾತುಕತೆಯ ನಂತರ ದ್ವಿಪಕ್ಷೀಯ ಸಂಬಂಧದಲ್ಲಿ ಸುಧಾರಣೆ ಕಂಡುಬಂದಿರುವುದಕ್ಕೆ ಇಬ್ಬರೂ ಸಂತಸ ವ್ಯಕ್ತಪಡಿಸಿದರು.

ಮೋದಿ ಅವರು ಏಳು ವರ್ಷಗಳ ಬಳಿಕ ಚೀನಾಕ್ಕೆ ಭೇಟಿ ನೀಡಿದ್ದಾರೆ. ಗಾಲ್ವನ್ ಕಣಿವೆಯಲ್ಲಿನ ಸಂಘರ್ಷದ ಬಳಿಕ ಹದಗೆಟ್ಟಿದ್ದ ಭಾರತ–ಚೀನಾ ಸಂಬಂಧದಲ್ಲಿ ಸುಧಾರಣೆ ತರುವ ಪ್ರಕ್ರಿಯೆ ಮುಂದುವರಿಸುವುದು ಮೋದಿ–ಷಿ ಮಾತುಕತೆಯ ಮುಖ್ಯ ಆಶಯವಾಗಿತ್ತು ಎಂದು ತಿಳಿದುಬಂದಿದೆ.

ಜಿನ್‌ಪಿಂಗ್‌ಗೆ ಆಹ್ವಾನ: ಭಾರತದ ಆತಿಥ್ಯದಲ್ಲಿ ಮುಂದಿನ ವರ್ಷ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳುವಂತೆ ಮೋದಿ ಅವರು ಚೀನಾ ಅಧ್ಯಕ್ಷರನ್ನು ಆಹ್ವಾನಿಸಿದರು.

'ಆಹ್ವಾನ ನೀಡಿದ್ದಕ್ಕೆ ಷಿ ಅವರು ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು. ಭಾರತದ ಬ್ರಿಕ್ಸ್ ಅಧ್ಯಕ್ಷತೆಗೆ ಚೀನಾ ತನ್ನ ಬೆಂಬಲ ಸೂಚಿಸಿದೆ' ಎಂದು ಎಂಇಎ ಪ್ರಕಟಣೆ ತಿಳಿಸಿದೆ.

ರಿಷಿಗೆ ಜೋಡಿಯಾದ ಗೌತಮಿ

'ಸತ್ಯ' ಧಾರಾವಾಹಿ, 'ಬಿಗ್‌ಬಾಸ್' ಮೂಲಕ ಜನಪ್ರಿಯವಾಗಿದ್ದ ನಟಿ ಗೌತಮಿ ಜಾಧವ್ 'ಮಂಗಳಾಪುರಂ' ಚಿತ್ರದ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇದರೊಂದಿಗೆ ನಟ ರಿಷಿಗೆ ಅವರು ಜೋಡಿಯಾಗಿದ್ದಾರೆ.

ಗೌತಮಿ ಈ ಹಿಂದೆ ಕೆಲ ಸಿನಿಮಾಗಳಲ್ಲಿ ನಟಿಸಿದ್ದರು. ಆದರೆ ಯಾವುದೂ ಜನಪ್ರಿಯತೆ ನೀಡಿರಲಿಲ್ಲ. ಬಳಿಕ ಕಿರುತೆರೆಯಲ್ಲಿ ಸಕ್ರಿಯರಾದ ಅವರು ಮತ್ತೆ ಬೆಳ್ಳಿತೆರೆಗೆ ಮರಳಿದ್ದಾರೆ.

ತುಳು ಚಿತ್ರರಂಗದಲ್ಲಿ 'ಉಮಿಲ್' ಹಾಗೂ 'ದೊಂಬರಾಟ' ಸಿನಿಮಾ ನಿರ್ದೇಶಿಸಿದ್ದ ರಂಜಿತ್ ರಾಜ್ ಸುವರ್ಣ ನಿರ್ದೇಶನದ ಚಿತ್ರವಿದು. 'ಮಂಗಳಾಪುರಂ' ಎಂಬ ಊರಿನಲ್ಲಿ ನಡೆಯುವ ಮರ್ಡರ್ ಮಿಸ್ಟ್ರಿ ಕಥೆ ಹೊಂದಿರುವ ಚಿತ್ರ ಮೂಡಬಿದ್ರೆ ಸುತ್ತಮುತ್ತ ಚಿತ್ರೀಕರಣಗೊಳ್ಳುತ್ತಿದೆ.

'ಆಸ್ತಿಕರ ನಾಡಿಗೆ ನಾಸ್ತಿಕನ ಮಡದಿ ಸುಕನ್ಯಾಳಾಗಿ ಬರುತ್ತಿದ್ದೇನೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ' ಎಂದು 'ಮಂಗಳಾಪುರಂ' ಸಿನಿಮಾದ ತಮ್ಮ ಪಾತ್ರ ಪರಿಚಯಿಸುವ ಪೋಸ್ಟರ್ ಅನ್ನು ಗೌತಮಿ ಈ ಹಿಂದೆ ಹಂಚಿಕೊಂಡಿದ್ದರು.

ಶ್ರೀ ವರಾಹಿ ಕ್ರಿಯೇಷನ್ಸ್‌ನಡಿ ಪ್ರಸನ್ನ ತಂತ್ರಿ ಮೂಡಬಿದ್ರೆ ಹಾಗೂ ರಾಮ್ ಪ್ರಸಾದ್ ಬಂಡವಾಳ ಹೂಡಿದ್ದಾರೆ. ಕಾರ್ಕಳ, ತೀರ್ಥಹಳ್ಳಿ, ಮಡಿಕೇರಿ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಅಭಿಷೇಕ್ ಕಾಸರಗೋಡು ಛಾಯಾಚಿತ್ರಗ್ರಹಣವಿದೆ.



ಗೌತಮಿ ಜಾಧವ್


ಸೆಟ್ಟೇರಲು ಸಜ್ಜಾದ ಶಿವಣ್ಣ ಹೊಸ ಚಿತ್ರ

ನಟ ಶಿವರಾಜ್‌ಕುಮಾರ್ ಕೈಯಲ್ಲಿ ಸಾಲು, ಸಾಲು ಸಿನಿಮಾಗಳಿವೆ. ಉಪೇಂದ್ರ ಜತೆ ನಟಿಸಿರುವ '45' ಸಿನಿಮಾ ಬಿಡುಗಡೆಗೆ ಸಿದ್ಧವಿದೆ. 'ಎ ಫಾರ್ ಆನಂದ್' ಚಿತ್ರೀಕರಣ ನಡೆಯುತ್ತಿದೆ. '131' ಚಿತ್ರ ಸೆಟ್ಟೇರಿದೆ. ಹೇಮಂತ್ ರಾವ್ ನಿರ್ದೇಶನದ '666 ಆಪರೇಷನ್' ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಮಿಳು, ತೆಲುಗು ಸಿನಿಮಾಗಳಲ್ಲಿಯೂ ಬಣ್ಣ ಹಚ್ಚಿದ್ದಾರೆ. ಇತ್ತೀಚೆಗಷ್ಟೇ ಆರೋಗ್ಯದ ಸಮಸ್ಯೆಯಿಂದ ಚೇತರಿಸಿಕೊಂಡಿರುವ ಶಿವಣ್ಣ ಅವರ ಎನರ್ಜಿ, ಸಿನಿಮಾ ಕುರಿತಾದ ಉತ್ಸಾಹ ಒಂಚೂರು ಕಡಿಮೆಯಾಗಿಲ್ಲ. ಇದೀಗ ಪವನ್ ಒಡೆಯರ್ ಜತೆ ಕೈಜೋಡಿಸಿದ್ದು, ಸೆಪ್ಟೆಂಬರ್ ಮೊದಲ ವಾರದಿಂದಲೇ ಈ ಚಿತ್ರದ ಚಿತ್ರೀಕರಣ ಪ್ರಾರಂಭಗೊಳ್ಳಲಿದೆ.


ಯಶ್ ನಟನೆಯ 'ಟಾಕ್ಸಿಕ್', ಧ್ರುವ ಸರ್ಜಾ ನಟನೆಯ 'ಕೆಡಿ', ದಳಪತಿ ವಿಜಯ್ ಅಭಿನಯದ 'ಜನ ನಾಯಗನ್' ಸೇರಿ ಹಲವು ಬಹುನಿರೀಕ್ಷಿತ ಸಿನಿಮಾಗಳನ್ನು ನಿರ್ಮಿಸುತ್ತಿರುವ 'ಕೆವಿಎನ್ ಪ್ರೊಡಕ್ಷನ್ಸ್' ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿರುವುದರಿಂದ ನಿರೀಕ್ಷೆ ಹೆಚ್ಚಾಗಿದೆ. ಇತ್ತೀಚೆಗೆ ಈ ಸಿನಿಮಾದ ಸ್ಕ್ರಿಪ್ಟ್ ಪೂಜೆ ನೆರವೇರಿದೆ.

'ಗೂಗ್ಲಿ' ಖ್ಯಾತಿಯ ನಿರ್ದೇಶಕ ಪವನ್ ಒಡೆಯರ್ ಪುನೀತ್ ರಾಜ್‌ಕುಮಾರ್ ಅವರ ಎರಡು ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದರು. ಅವರು ಶಿವರಾಜ್‌ಕುಮಾರ್‌ಗೆ ಆ್ಯಕ್ಷನ್ ಕಟ್ ಹೇಳುವುದು ವರ್ಷಗಳ ಹಿಂದೆಯೇ ಖಚಿತವಾಗಿತ್ತು. ಇದೀಗ ಚಿತ್ರ ಸೆಟ್ಟೇರುವ ಹಂತಕ್ಕೆ ಬಂದಿದೆ. ನಿರ್ದೇಶನ ಮಾಡುವುದರ ಜೊತೆಗೆ ಪವನ್ ಒಡೆಯರ್ ಅವರು ನಿರ್ಮಾಣದಲ್ಲೂ ಕೈ ಜೋಡಿಸುತ್ತಿದ್ದಾರೆ. 'ಕೆವಿಎನ್ ಪ್ರೊಡಕ್ಷನ್ಸ್' ಮತ್ತು ಪವನ್ ಒಡೆಯರ್ ಅವರ 'ಒಡೆಯರ್ ಮೂವೀಸ್' ಜಂಟಿಯಾಗಿ ಈ ಸಿನಿಮಾವನ್ನು ನಿರ್ಮಾಣ ಮಾಡಲಿವೆ. 'ಸೆಪ್ಟೆಂಬರ್ 3ರಂದು ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಪ್ರಾರಂಭವಾಗಲಿದೆ. ನಂತರ ಮಂಡ್ಯ, ಮುಂಬೈ, ಹೈದರಾಬಾದ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ' ಎಂದಿದೆ ಚಿತ್ರತಂಡ.

ಆ್ಯಕ್ಷನ್ ಜತೆಗೆ ಮನರಂಜನೆ ಹೊಂದಿರುವ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಶಶಾಂಕ್ ನಾರಾಯಣ್ ಸಂಕಲನವಿರಲಿದೆ. ಜಯರಾಮ್, ಗೋಪಾಲಕೃಷ್ಣ ದೇಶಪಾಂಡೆ, ಪ್ರಕಾಶ್ ಬೆಳವಾಡಿ, ಸಾಯಿ ಕುಮಾರ್, ಸಂಜನಾ ಆನಂದ್, ದೀಕ್ಷಿತ್ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ.



ಶಿವರಾಜ್‌ಕುಮಾರ್





ಪ್ರಕೃತಿ

ಸೆ.5ಕ್ಕೆ 'ಆಸ್ಟಿನ್‌ನ ಮಹನ್ಮೌನ'

ಬಹುತೇಕ ಹೊಸಬರಿಂದಲೇ ಕೂಡಿರುವ 'ಆಸ್ಟಿನ್‌ನ ಮಹನ್ಮೌನ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ವಿನಯ್ ಕುಮಾರ್ ವೈದ್ಯನಾಥನ್ ನಿರ್ದೇಶನದ ಚಿತ್ರ ಸೆ.5ರಂದು ತೆರೆಗೆ ಬರಲಿದೆ.

'ನಿರ್ದೇಶಕರು ಡಿವಿಜಿ ಕುಟುಂಬಕ್ಕೆ ಸೇರಿದವರು. ಹೀಗಾಗಿ ನಾನು ಈ ವೇದಿಕೆಯಲ್ಲಿದ್ದೇನೆ. ಈ ಚಿತ್ರದ ಟ್ರೇಲರ್ ಬಹಳ ವಿಭಿನ್ನವಾಗಿ ಬಂದಿದೆ. ಇತ್ತೀಚೆಗೆ ಬಿಡುಗಡೆಗೊಂಡ ಚಿತ್ರಗಳು ಯಶಸ್ಸನ್ನು ಗಳಿಸುತ್ತಿವೆ. ಆ ಸಾಲಿನಲ್ಲಿ ಈ ಚಿತ್ರವೂ ಸಾಗಲಿ. ನಟ, ನಿರ್ದೇಶಕ ವಿನಯ್ ವೃತ್ತಿಯಿಂದ ಎಂಜಿನಿಯರ್ ಆಗಿದ್ದರೂ ಕೂಡ ಸಿನಿಮಾ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾನೆ. ವರ್ಷಗಟ್ಟಲೆ ಇಲ್ಲಿ ಕೆಲಸ ಮಾಡಿದ್ದಾನೆ. ಈ ಚಿತ್ರವನ್ನು ಕೆಆರ್‌ಜಿ ಫಿಲ್ಮ್ಸ್ ಬಿಡುಗಡೆ ಮಾಡುತ್ತಿದೆ' ಎಂದರು ಕೆ.ಮಂಜು.

'ನಾನು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮುಗಿಸಿದ ನಂತರ ಸಿನಿಮಾ ಬಗ್ಗೆ ಅಪಾರ ಆಸಕ್ತಿಯನ್ನು ಹೊಂದಿದ್ದೆ. ಬಹಳಷ್ಟು ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿ ಅನುಭವ ಪಡೆದು, ನಂತರ ಕಿರುಚಿತ್ರಗಳನ್ನು ನಿರ್ದೇಶಿಸಿದೆ. 13 ವರ್ಷಗಳ ಶ್ರಮದ ಫಲವಾಗಿ ಈಗ ಎವಿವಿ ಪ್ರೊಡಕ್ಷನ್ಸ್ ಬ್ಯಾನರ್ ಮೂಲಕ ಸಿನಿಮಾ ಮಾಡಿರುವೆ. ಲವ್, ಥ್ರಿಲ್ಲಿಂಗ್ ಹಾಗೂ ಭಾವನಾತ್ಮಕ ಅಂಶಗಳನ್ನು ಹೊಂದಿರುವ ಕಥೆ. ಒಂದು ಮಹಾ ಮೌನದ ಹಿಂದಿರುವ ಘಟನೆಯೇ ಚಿತ್ರದ ಕಥಾಸಾರ. 90ರ ಕಾಲಘಟ್ಟದಲ್ಲಿ ನಡೆಯುವ ಕಥೆ' ಎಂದರು ನಿರ್ದೇಶಕರು.

'ಇದು ನನ್ನ ಮೊದಲ ಚಿತ್ರ. ಒಂದು ವಿಭಿನ್ನ ಪಾತ್ರದಲ್ಲಿ ನಟಿಸಿರುವೆ. ನಟಿಯಾಗಬೇಕೆಂದು ಬಹಳ ಕಾಲದಿಂದ ಕನಸು ಕಂಡಿದ್ದೆ. ಹೊಸಬರ ಯತ್ನವನ್ನು ಚಿತ್ರಮಂದಿರಗಳಲ್ಲಿಯೇ ನೋಡಿ ಪ್ರೋತ್ಸಾಹಿಸಿ' ಎಂದರು ಚಿತ್ರದ ನಾಯಕಿ ಪ್ರಕೃತಿ.

ಬಲ ರಾಜವಾಡಿ, ರಘು ರಾಮನಕೊಪ್ಪ, ಜಗಪ್ಪ, ಸ್ವಾತಿ ಸೇರಿದಂತೆ ಹಲವಾರು ಕಲಾವಿದರು ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ವಿಶ್ವಿ ಸಂಗೀತ, ರಾಜಕಾಂತ್ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಹಾಗೂ ಶಶಿಧರ್ ಸಂಕಲನವಿದೆ.



ರಿತನ್ಯ ವಿಜಯ್

ಲ್ಯಾಂಡ್‌ಲಾರ್ಡ್‌ನಲ್ಲಿ ರಿತನ್ಯ

ದುನಿಯಾ ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಚಿತ್ರದಲ್ಲಿ ಅವರ ಪುತ್ರಿ ರಿತನ್ಯ ವಿಜಯ್ ಪಾತ್ರ ಪರಿಚಯಿಸುವ ಪೋಸ್ಟರ್ ಅನ್ನು ಚಿತ್ರತಂಡ ಇತ್ತೀಚೆಗಷ್ಟೇ ಬಿಡುಗಡೆಗೊಳಿಸಿದೆ. ಜಡೇಶ್ ಹಂಪಿ ನಿರ್ದೇಶನದ ಚಿತ್ರವಿದು. ರಿತನ್ಯ ಜನ್ಮದಿನದ ಅಂಗವಾಗಿ ಚಿತ್ರದಲ್ಲಿ ಅವರ ಮೂರು ವಿಭಿನ್ನ ಲುಕ್‌ಗಳನ್ನು ಪರಿಚಯಿಸುವ ಪೋಸ್ಟರ್‌ಗಳನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ.

ದರ್ಶನ್ ಅವರ 'ಸಾರಥಿ' ಸಿನಿಮಾ ನಿರ್ಮಾಣ ಮಾಡಿದ್ದ ಕೆ.ವಿ.ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್. ಅವರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಹಳ್ಳಿಯಲ್ಲಿ ನಡೆಯುವ ಕಥೆಯನ್ನು ಹೊಂದಿರುವ ಈ ಚಿತ್ರ ಪೋಸ್ಟ್‌ಪ್ರೊಡಕ್ಷನ್ ಹಂತದಲ್ಲಿದ್ದು, ಈ ವರ್ಷದ ಅಂತ್ಯಕ್ಕೆ ತೆರೆಗೆ ಬರುವ ಸಾಧ್ಯತೆಯಿದೆ. ದುನಿಯಾ ವಿಜಯ್‌ಗೆ ರಚಿತಾ ರಾಮ್ ಜೋಡಿಯಾಗಿದ್ದಾರೆ. ರಿತನ್ಯ ವಿಜಯ್ ಅವರ ಮೊದಲ ಸಿನಿಮಾ ಇದಾಗಿದೆ. ಅಜನೀಶ್ ಲೋಕನಾಥ್ ಸಂಗೀತ, ಸ್ವಾಮಿ ಜೆ. ಗೌಡ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನ ಚಿತ್ರಕ್ಕಿದೆ.

ಚಿಟಿಕೆ ಸುದ್ದಿ

ಮಣಿಪುರಕ್ಕೆ ಪ್ರಧಾನಿ ಭೇಟಿ ಸಾಧ್ಯತೆ

ನವದೆಹಲಿ: ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಭೇಟಿ ನೀಡುವ ಸಾಧ್ಯತೆ ಇದೆ.



ಮೋದಿ

ಈಶಾನ್ಯ ಕಣಿವೆ ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದ 28 ತಿಂಗಳ ಬಳಿಕ ಮೊದಲ ಬಾರಿಗೆ ಪ್ರಧಾನಿ ಭೇಟಿ ನೀಡಲಿದ್ದಾರೆ.

ರಾಜಧಾನಿ ಇಂಫಾಲ್ ಹಾಗೂ ಚುರಾಚಾಂದಪುರಕ್ಕೆ ಭೇಟಿ ನೀಡಲಿದ್ದು, 2023ರ ಮೇ 3ರಂದು ಪ್ರಾರಂಭವಾದ ಹಿಂಸಾಚಾರದಲ್ಲಿ ಸ್ಥಳಾಂತರಗೊಂಡ ಜನರನ್ನು ಭೇಟಿಯಾಗುವ ಸಾಧ್ಯತೆ ಇದೆ.

ಸೆ.12 ಹಾಗೂ 14ರ ನಡುವೆ ನಿಗದಿಯಾಗಿರುವ ಮಿಜೋರಾಂ ಹಾಗೂ ಅಸ್ಸಾಂ ಪ್ರವಾಸದೊಂದಿಗೆ ಮಣಿಪುರ ಭೇಟಿಯು ಸೇರ್ಪಡೆಗೊಳ್ಳಲಿದ್ದು, ಅಲ್ಲಿ ಕೆಲ ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸುವ ನಿರೀಕ್ಷೆ ಇದೆ. ಮೋದಿ ಭೇಟಿ ಕಾರಣಕ್ಕೆ ರಾಜ್ಯದಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಮಣಿಪುರದ ಅಧಿಕಾರಿಗಳು ತಿಳಿಸಿದ್ದಾರೆ.

ಜಮ್ಮು: ಇಬ್ಬರು ಉಗ್ರರ ಬಂಧನ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಇಬ್ಬರು ಉಗ್ರರನ್ನು ಪೊಲೀಸರು ಬಂಧಿಸಿದ್ದಾರೆ.



ಅಜಾಮಾಬಾದ್‌ನಲ್ಲಿರುವ ತಾರೀಖ್ ಶೇಖ್ ಮನೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ತಾರೀಖ್ ಹಾಗೂ ಆತನ ಸಹಚರ, ಚಂಬೆರ್ ಗ್ರಾಮದ ರಿಯಾಜ್ ಅಹ್ಮದ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಇಬ್ಬರನ್ನೂ ವಿಚಾರಣೆ ನಡೆಸಲಾಗುತ್ತಿದೆ. ತಾರೀಖ್ ಬಾಡಿಗೆಗೆ ಪಡೆದಿರುವ ಜಾಗವೊಂದರಲ್ಲಿ ಶೋಧ ನಡೆಸಿ, ಅಲ್ಲಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಮಹುವಾ ವಿರುದ್ಧ ಎಫ್‌ಐಆರ್

ರಾಯಪುರ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರ ವಿರುದ್ಧ ಇಲ್ಲಿ ಎಫ್‌ಐಆರ್ ದಾಖಲಾಗಿದೆ.



ಮಹುವಾ

'ಇಲ್ಲಿನ ನಿವಾಸಿಯೊಬ್ಬರು ಶನಿವಾರ ನೀಡಿದ ದೂರಿನ ಅನ್ವಯ ಸಂಸದೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸರು ಭಾನುವಾರ ತಿಳಿಸಿದರು.

ಪಂಜಾಬ್: 25 ವರ್ಷದಲ್ಲೇ ಅಧಿಕ ಮಳೆ

ನವದೆಹಲಿ/ಜಮ್ಮು/ಶಿಮ್ಲಾ/ಚಂಡೀಗಢ (ಪಿಟಿಐ): ಪಂಜಾಬ್‌ನಲ್ಲಿ ಆಗಸ್ಟ್ ತಿಂಗಳಲ್ಲಿ 25.37 ಸೆಂ.ಮೀ.ನಷ್ಟು ಮಳೆ ಸುರಿದಿದೆ. ಈ ಪ್ರಮಾಣವು ವಾಡಿಕೆಗಿಂತ ಶೇ 74ರಷ್ಟು ಅಧಿಕವಾಗಿದೆ. ಕಳೆದ 25 ವರ್ಷಗಳಲ್ಲೇ ಈ ಪ್ರಮಾಣದ ಮಳೆಯನ್ನು ರಾಜ್ಯ ಕಂಡಿರಲಿಲ್ಲ ಎಂದು ಅಧಿಕಾರಿಗಳು ಹೇಳಿದರು.

ಭಾರಿ ಮಳೆಯಿಂದಾಗಿ ಜಮ್ಮು ಮತ್ತು ಕಾಶ್ಮೀರ ಹಾಗೂ ಪಂಜಾಬ್‌ನ ಹಲವು ಭಾಗಗಳಲ್ಲಿ ಪ್ರವಾಹ ಉಂಟಾಗಿದೆ. ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ನದಿಗಳು ಉಕ್ಕಿ ಹರಿಯುತ್ತಿದ್ದು, ಹಲವು ಗ್ರಾಮಗಳ ರಸ್ತೆ ಸಂಪರ್ಕ ಕಡಿತಗೊಂಡಿದೆ. ಸೆ.3ರವರೆಗೆ ಶಾಲೆಗಳಿಗೆ ರಜೆಯನ್ನು ವಿಸ್ತರಿಸಿ ಪಂಜಾಬ್ ಸರ್ಕಾರ ಆದೇಶಿಸಿದೆ.

ಜನರ ಸುರಕ್ಷತೆಗಾಗಿ ಸೇನೆಯು 'ಮಾನವ ನೆರವು ಮತ್ತು ವಿಪತ್ತು ಪರಿಹಾರ' (ಎಚ್‌ಎಡಿಆರ್) ಕಾರ್ಯಾಚರಣೆ ನಡೆಸುತ್ತಿದೆ. ವಾಯುಪಡೆಯು 20 ವಿಮಾನಗಳು, ಮೂರು ಹೆಲಿಕಾಪ್ಟರ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ.


₹60 ಸಾವಿರ ಕೋಟಿ ಬಿಡುಗಡೆ ಮಾಡಿ: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ₹60 ಸಾವಿರ ಕೋಟಿ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ. 'ಇದು ರಾಜ್ಯದ್ದೇ ಅನುದಾನ. ಅದು ನಿಮ್ಮ ಬಳಿ ಸಿಲುಕಿಕೊಂಡಿದೆ' ಎಂದೂ ಹೇಳಿದ್ದಾರೆ.

ಶಾ ಭೇಟಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮಾಹಿತಿ ನೀಡಿದರು. ಜಮ್ಮು ಮತ್ತು ಶ್ರೀನಗರ ರಾಷ್ಟ್ರೀಯ ಹೆದ್ದಾರಿಯು ಮಳೆಯ ಕಾರಣ ಹಾನಿಗೊಳಗಾಗಿದ್ದು, ಇದರ ದುರಸ್ತಿ ಕಾರ್ಯವನ್ನು ಒಮರ್ ಭಾನುವಾರ ವೀಕ್ಷಿಸಿದರು.

ತೀವ್ರ ಮಳೆಯಿಂದಾಗಿ ಹಿಮಾಚಲ ಪ್ರದೇಶದ ಮೂರು ರಾಷ್ಟ್ರೀಯ ಹೆದ್ದಾರಿಗಳೂ ಸೇರಿ ಒಟ್ಟು 822 ರಸ್ತೆಗಳು ಮುಚ್ಚಿವೆ. 1,236 ವಿದ್ಯುತ್ ಪರಿವರ್ತಕಗಳು ಮತ್ತು 424 ಜಲ ಪೂರೈಕೆ ಯೋಜನೆಗಳಿಗೆ ಹಾನಿಯಾಗಿದೆ.

'ಸೆಪ್ಟೆಂಬರ್‌ನಲ್ಲಿ ದೇಶದಲ್ಲಿ ಭಾರಿ ಮಳೆ'


ಸೆಪ್ಟೆಂಬರ್ 30ಗಳಲ್ಲಿ ದೇಶದ ವಿವಿಧೆಡೆ ವಾಡಿಕೆಗಿಂತ ಅಧಿಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸಾಮಾನ್ಯವಾಗಿ ಸೆಪ್ಟೆಂಬರ್‌ನಲ್ಲಿ ಸರಾಸರಿ 16.7 ಸೆಂ.ಮೀ ಮಳೆಯಾಗುತ್ತದೆ. ಈ ಬಾರಿ ಈ ಪ್ರಮಾಣಕ್ಕಿಂತ ಶೇ 109ಕ್ಕೂ ಅಧಿಕ ಮಳೆಯಾಗಲಿದೆ ಎಂದು ಇಲಾಖೆ ಎಚ್ಚರಿಕೆ ನೀಡಿದೆ



ಉತ್ತರಾಖಂಡ: ಸೆಪ್ಟೆಂಬರ್‌ನಲ್ಲಿ ಭೂಕುಸಿತ, ದಿಢೀರ್ ಪ್ರವಾಹ ಉಂಟಾಗಬಹುದು. ರಾಜ್ಯದಲ್ಲಿ ಹುಟ್ಟುವ ನದಿಗಳು ಉಕ್ಕಿ ಹರಿಯಲಿವೆ. ಇದರಿಂದ ತಗ್ಗು ಪ್ರದೇಶದಲ್ಲಿರುವ ನಗರಗಳಿಗೆ ತೀವ್ರ ಹಾನಿಯಾಗಲಿದೆ



ಪಂಜಾಬ್‌ನಲ್ಲಿ ಭಾರಿ ಮಳೆ ಆಗುತ್ತಿದ್ದು ಗ್ರಾಮವೊಂದರಲ್ಲಿ ವೃದ್ಧೆಯೊಬ್ಬರು ಅರ್ಧ ಮುಳುಗಿದ ಮನೆಯಲ್ಲೇ ಭಾನುವಾರ ಕಳೆದರು —ಪಿಟಿಐ ಚಿತ್ರ



ಸುರಂಗದಲ್ಲಿ ಸಿಲುಕಿದ ಕಾರ್ಮಿಕರು

ಪಿತೋರಗಢ: ತೀವ್ರ ಮಳೆಯಿಂದ ಉಂಟಾದ ಭೂಕುಸಿತದಿಂದ ರಸ್ತೆ ಸಂಪರ್ಕ ಕಡಿತಗೊಂಡು ರಾಷ್ಟ್ರೀಯ ಜಲವಿದ್ಯುತ್ ಶಕ್ತಿ ನಿಗಮ ಲಿಮಿಟೆಡ್‌ನ 19 ಕಾರ್ಮಿಕರು ಉತ್ತರಾಖಂಡದ ಧರಚೂಲಾ ಜಿಲ್ಲೆಯಲ್ಲಿರುವ ದೌಲಿಗಂಗಾ ವಿದ್ಯುತ್ ಯೋಜನೆಯ ಸುರಂಗದಲ್ಲಿ ಭಾನುವಾರ ಸಿಲುಕಿಕೊಂಡಿದ್ದರು.

ಎಂಟು ಕಾರ್ಮಿಕರನ್ನು ಹೊರಗೆ ಕರೆತರಲಾಗಿದೆ. ಉಳಿದ 11 ಮಂದಿ ಇನ್ನೂ ಸುರಂಗದಲ್ಲಿಯೇ ಸಿಲುಕಿಕೊಂಡಿದ್ದಾರೆ. ರಕ್ಷಣಾ ಕಾರ್ಯ ಮುಂದುವರಿದಿದೆ.

'ಭೂಕುಸಿತದ ಕಾರಣ ಸುರಂಗದ ಎರಡೂ ಬದಿ ಬಂಡೆಗಳು ಬಿದ್ದಿವೆ. ಅವುಗಳನ್ನು ತೆರವುಗೊಳಿಸಲು ಜೆಸಿಬಿ ಯಂತ್ರಗಳನ್ನು ತರಲಾಗಿದೆ. ಕಾರ್ಮಿಕರು ಸುರಂಗದ ಒಳಗೆ ಸುರಕ್ಷಿತವಾಗಿದ್ದಾರೆ. ಸುರಂಗದಲ್ಲಿ ಸಾಕಷ್ಟು ಆಹಾರ ದಾಸ್ತಾನು ಇದೆ. ಆದ್ದರಿಂದ ಭಯಪಡುವ ಅಗತ್ಯ ಇಲ್ಲ' ಎಂದು ಜಿಲ್ಲಾಧಿಕಾರಿ ಜಿತೇಂದ್ರ ವರ್ಮಾ ತಿಳಿಸಿದರು.

'ಭೂಕುಸಿತದಿಂದ ಅವಶೇಷಗಳು ನಿರಂತರವಾಗಿ ಬೀಳುತ್ತಿವೆ. ಇದರಿಂದ ರಕ್ಷಣಾ ಕಾರ್ಯಕ್ಕೆ ತೊಡಕಾಗಿದೆ. ವಿದ್ಯುತ್ ಉತ್ಪಾದನೆಗೆ ಯಾವುದೇ ತೊಡಕಾಗಿಲ್ಲ' ಎಂದು ಮಾಹಿತಿ ನೀಡಿದರು.

ಎಸ್‌ಐಆರ್ ಬಳಿಕ ಹೊಸ ಮತದಾರರ ಚೀಟಿ ವಿತರಣೆ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಪೂರ್ಣಗೊಂಡ ಬಳಿಕ ಬಿಹಾರದ ಎಲ್ಲ ಮತದಾರರಿಗೂ ಹೊಸದಾಗಿ ಮತದಾರರ ಚೀಟಿ ವಿತರಿಸಲು ಚುನಾವಣಾ ಆಯೋಗ ಯೋಜಿಸಿದೆ.

'ಯಾವಾಗ ಮತ್ತು ಹೇಗೆ ಹೊಸ ಮತದಾರರ ಚೀಟಿಯನ್ನು ವಿತರಿಸಲಾಗುವುದು ಎನ್ನುವ ಬಗ್ಗೆ ಆಯೋಗವು ಇನ್ನಷ್ಟೇ ನಿರ್ಧರಿಸಬೇಕಿದೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

'ಎಸ್‌ಐಆರ್ ಸಂದರ್ಭದಲ್ಲಿ ಮತದಾರರಿಗೆ, ಮತದಾರರ ನೋಂದಣಿ ಅರ್ಜಿಗಳನ್ನು ವಿತರಿಸಲಾಗಿತ್ತು. ಈ ಅರ್ಜಿಯನ್ನು ಭರ್ತಿ ಮಾಡಿ, ಮತದಾರರ ಹೊಸ ಭಾವಚಿತ್ರವನ್ನು, ಇತರ ದಾಖಲೆಗಳನ್ನು ನೀಡಲು ಆಯೋಗ ಸೂಚಿಸಿತ್ತು. ಅರ್ಜಿಯೊಂದಿಗೆ ನೀಡಿದ ಭಾವಚಿತ್ರವನ್ನೇ ಹೊಸ ಮತದಾರರ ಚೀಟಿಗೆ ಬಳಸಿಕೊಳ್ಳಲಾಗುವುದು' ಎಂದರು.

ಹೆಸರು ಕೈಬಿಡಲು ಕೋರಿ 2.07 ಲಕ್ಷ ಅರ್ಜಿ ಸಲ್ಲಿಕೆ: ಮತದಾರರ ಪಟ್ಟಿಯಿಂದ ಕೈಬಿಡುವಂತೆ ಕೋರಿ 2.07 ಲಕ್ಷ ಅರ್ಜಿಗಳು ಬಿಹಾರದಲ್ಲಿ ಸಲ್ಲಿಕೆಯಾಗಿವೆ ಎಂದು ಆಯೋಗ ಭಾನುವಾರ ಮಾಹಿತಿ ನೀಡಿದೆ.

ಅಂತಿಮ ಮತದಾರರ ಪಟ್ಟಿಯು ಸೆ.30ರಂದು ಬಿಡುಗಡೆಯಾಗಲಿದೆ.

ಕರಡು ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲಾಗಿರುವ 65 ಲಕ್ಷ ಮಂದಿಯ ಪೈಕಿ 33,236 ಮಂದಿ ಮಾತ್ರ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದು ಆಯೋಗ ತಿಳಿಸಿದೆ.

ಜತೆಗೆ 15.32 ಲಕ್ಷ ಮಂದಿ ಹೊಸ ಮತದಾರರು (18 ವರ್ಷ ಪೂರೈಸಿದವರು) ಕೂಡ ಮತದಾರರ ಪಟ್ಟಿಗೆ ತಮ್ಮ ಹೆಸರನ್ನು ಸೇರ್ಪಡೆಗೊಳಿಸಲು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದೂ ಹೇಳಿದೆ.

'ಇಂಡಿಯಾ ಯಾತ್ರೆ ಇಂದು ಮುಕ್ತಾಯ'

ಪಟ್ನಾ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಬಿಹಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ ಎಲ್ಲ ನಾಯಕರು ಒಟ್ಟುಗೂಡಿ 16 ದಿನ ನಡೆಸಿದ 'ಮತದಾರರ ಅಧಿಕಾರ ಯಾತ್ರೆ'ಯು ಸೋಮವಾರ ಮುಕ್ತಾಯಗೊಳ್ಳಲಿದೆ.

ಬಿಹಾರದ ಒಟ್ಟು 25 ಜಿಲ್ಲೆಗಳ 110 ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಸಾಗಿತ್ತು. ಯಾತ್ರೆಯು ಒಟ್ಟು 1,300 ಕಿ.ಮೀನಷ್ಟು ಕ್ರಮಿಸಿದೆ.

89 ಲಕ್ಷ ದೂರು ತಿರಸ್ಕರಿಸಿದ ಆಯೋಗ: 'ಎಸ್‌ಐಆರ್ ವೇಳೆ ಕಾಂಗ್ರೆಸ್‌ನ ಬೂತ್ ಮಟ್ಟದ ಏಜೆಂಟರು (ಬಿಎಲ್‌ಎ) ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿನ ಲೋಪಗಳಿಗೆ ಸಂಬಂಧಿಸಿದಂತೆ 89 ಲಕ್ಷ ದೂರುಗಳನ್ನು ಸಲ್ಲಿಸಿದ್ದಾರೆ. ಆದರೆ, ಕೇಂದ್ರ ಚುನಾವಣಾ ಆಯೋಗವು ಅವೆಲ್ಲವನ್ನೂ ತಿರಸ್ಕರಿಸಿದೆ' ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಆರೋಪಿಸಿದ್ದಾರೆ.

'ಚುನಾವಣಾ ಅಕ್ರಮಗಳು ಆಯೋಗದ ಉದ್ದೇಶದ ಮೇಲೆಯೇ ಅನುಮಾನ ಮೂಡಿಸುವಂತಿವೆ. ಹೀಗಾಗಿ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಮತ್ತೊಮ್ಮೆ ಹೊಸದಾಗಿ ನಡೆಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಉಪವಾಸ ಸತ್ಯಾಗ್ರಹ: ಆಸ್ಪತ್ರೆಗೆ ಸಸಿಕಾಂತ್

ಚೆನ್ನೈ (ಪಿಟಿಐ): ಸಮಗ್ರ ಶಿಕ್ಷಣ ಯೋಜನೆಯಡಿ ಕೇಂದ್ರ ಸರ್ಕಾರದಿಂದ ತಮಿಳುನಾಡಿಗೆ ಬರಬೇಕಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿ ಅನಿರ್ದಿಷ್ಟಾವಧಿಯ (ಆ. 29ರಿಂದ) ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಕಾಂಗ್ರೆಸ್ ಸಂಸದ ಸಸಿಕಾಂತ್ ಸೆಂಥಿಲ್ ಅನಾರೋಗ್ಯಕ್ಕೀಡಾಗಿದ್ದು, ಶನಿವಾರ ರಾತ್ರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.



ಸೆಂಥಿಲ್

ರಾಜ್ಯಕ್ಕೆ ಅನುದಾನ ಬಿಡುಗಡೆ ಆಗುವವರೆಗೂ ಚೆನ್ನೈನ ರಾಜೀವ್ ಗಾಂಧಿ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲೇ ತಮ್ಮ ಪ್ರತಿಭಟನೆಯನ್ನು ಮುಂದುವರಿಸುವುದಾಗಿ ಭಾನುವಾರ ತಿಳಿಸಿದ್ದಾರೆ.

'ಉಪವಾಸ ಸತ್ಯಾಗ್ರಹದ ಮೂರನೇ ದಿನ ಅಧಿಕ ರಕ್ತದೊತ್ತಡದಿಂದಾಗಿ ಆಸ್ಪತ್ರೆಗೆ ದಾಖಲಾಗಿರುವೆ. ವೈದ್ಯರ ಸಲಹೆ ಮೇರೆಗೆ ತಿರುವಳ್ಳೂರ್ ಸರ್ಕಾರಿ ಆಸ್ಪತ್ರೆಯಿಂದ ರಾಜೀವ್ ಗಾಂಧಿ ಆಸ್ಪತ್ರೆಗೆ ಸ್ಥಳಾಂತರಗೊಂಡಿದ್ದೇನೆ' ಎಂದು ಸಂಸದರು ಹೇಳಿದ್ದಾರೆ.

ಹಿಂದುಳಿದ ವರ್ಗಗಳಿಗೆ ಶೇ 42 ಮೀಸಲಾತಿ

ಹೈದರಾಬಾದ್(ಪಿಟಿಐ): ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಶೇಕಡ 42ರಷ್ಟು ಮೀಸಲಾತಿ ಕಲ್ಪಿಸುವ ಎರಡು ಮಸೂದೆಗಳನ್ನು ತೆಲಂಗಾಣ ವಿಧಾನಸಭೆ ಭಾನುವಾರ ಅಂಗೀಕರಿಸಿದೆ.

ಮಸೂದೆ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ,'ಹೈಕೋರ್ಟ್ ಆದೇಶದಂತೆ ಸ್ಥಳೀಯ ಸಂಸ್ಥೆಗಳಿಗೆ ಸೆಪ್ಟೆಂಬರ್ 30ರ ಒಳಗಾಗಿ ಚುನಾವಣೆ ನಡೆಸಬೇಕಿದೆ' ಎಂದು ಹೇಳಿದರು.

ಇದೇ ವಿಚಾರಕ್ಕೆ ಸಂಬಂಧಿಸಿ 2018ರಲ್ಲಿ ರೂಪಿಸಿದ್ದ ಕಾಯ್ದೆಗೆ ತಿದ್ದುಪಡಿ ತರುವುದಕ್ಕಾಗಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿತ್ತು.

'ಸ್ವದೇಶಿ ಉತ್ಪನ್ನಗಳ ಬಗ್ಗೆ ಹೆಮ್ಮೆಯಿರಲಿ'

ಮನ್ ಕಿ ಬಾತ್‌ನ 125ನೇ ಸಂಚಿಕೆಯಲ್ಲಿ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಮುಂಬರುವ ವಾರಗಳಲ್ಲಿ ಸಾಲು ಸಾಲು ಹಬ್ಬಗಳಿದ್ದು, 'ಸ್ವದೇಶಿ' ಉತ್ಪನ್ನಗಳ ಬಗ್ಗೆ ಹೆಮ್ಮೆಯಿರಲಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್‌ನಲ್ಲಿ ಹೇಳಿದ್ದಾರೆ.

'ನಮ್ಮ ಬದುಕಿಗೆ ಅವಶ್ಯವಿರುವ ಎಲ್ಲ ವಸ್ತುಗಳು ಸ್ವದೇಶಿಯೇ ಆಗಿರಬೇಕು. ಅವನ್ನೇ ನಾವು ಬಳಸಬೇಕು' ಎಂದು ದೇಶದ ಜನರಲ್ಲಿ ಮನವಿ ಮಾಡಿಕೊಂಡಿದ್ದಾರೆ.

'ಆತ್ಮನಿರ್ಭರ ಭಾರತ'ದ ಹಾದಿಯು ಅಭಿವೃದ್ಧಿ ಹೊಂದಿದ ಭಾರತಕ್ಕೆ ಕಾರಣವಾಗಲಿದೆ ಎಂದು ಸ್ವದೇಶಿ ಮಂತ್ರವನ್ನು ಭಾನುವಾರ ಪ್ರಸಾರಗೊಂಡ ಮಾಸಾಂತ್ಯದ 'ಮನದ ಮಾತು' ಕಾರ್ಯಕ್ರಮದ 125ನೇ ಸಂಚಿಕೆಯಲ್ಲಿ ಪುನರುಚ್ಚರಿಸಿದ್ದಾರೆ.

'ದೇಶದ ವಿವಿಧೆಡೆ ಇದೀಗ ಗಣೇಶ ಪೂಜೆ ನಡೆದಿದೆ. ಮುಂದೆ ದಸರಾ, ದುರ್ಗಾಪೂಜೆ, ದೀಪಾವಳಿ ಹಬ್ಬ ಬರಲಿವೆ. ಈ ಸಂದರ್ಭ ಉಡುಗೊರೆ ಇರಲಿ, ಹೊಸ ಬಟ್ಟೆಯಾಗಲಿ, ಅಲಂಕಾರಿಕ ಸಾಮಗ್ರಿಗಳ ಖರೀದಿಯೇ ಆಗಲಿ... ಈ ಎಲ್ಲವೂ ಸ್ವದೇಶಿ ಉತ್ಪನ್ನಗಳೇ ಆಗಿರಬೇಕು ಎಂಬುದನ್ನು ಜನರು ಮರೆಯಬಾರದು' ಎಂದಿದ್ದಾರೆ.



ಹುಬ್ಬಳ್ಳಿಯ ಗಣೇಶ ಪೆಂಡಾಲ್‌ವೊಂದರಲ್ಲಿ ಭಾನುವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಬಿಜೆಪಿ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅವರ ಮಾಸಾಂತ್ಯದ ಮನದ ಮಾತು ಆಲಿಸಿದರು ಪಿಟಿಐ ಚಿತ್ರ

'ಎಜುಕೇಟ್ ಗರ್ಲ್ಸ್'ಗೆ ಮ್ಯಾಗ್ಸೆಸೆ

ಒಂದನೇ ಪುಟದಿಂದ...

'ಸಾಂಪ್ರದಾಯಿಕ ಕಟ್ಟಳೆಗಳ ಬಂಧನ ಹಾಗೂ ಅನಕ್ಷರತೆಯಿಂದ ಬಾಲಕಿಯರು ಮತ್ತು ಯುವತಿಯರನ್ನು ಮುಕ್ತರನ್ನಾಗಿಸುವುದು, ಆ ಮೂಲಕ ಅವರಲ್ಲಿ ಧೈರ್ಯ ತುಂಬುವುದು, ಕೌಶಲಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಿ, ಅವರಲ್ಲಿನ ಸುಪ್ತಪ್ರತಿಭೆಯನ್ನು ಪೋಷಿಸುವ ದಿಸೆಯಲ್ಲಿ 'ಎಜುಕೇಟ್ ಗರ್ಲ್ಸ್' ಪ್ರದರ್ಶಿಸಿದ ಬದ್ಧತೆ ಗಮನಿಸಿ, ಏಷ್ಯಾದ ಈ ಪ್ರತಿಷ್ಠಿತ ಪ್ರಶಸ್ತಿಗೆ ಸಂಘಟನೆಯನ್ನು ಆಯ್ಕೆ ಮಾಡಲಾಗಿದೆ' ಎಂದು ಆರ್‌ಎಂಎಎಫ್ ತಿಳಿಸಿದೆ.

'ರಾಜಸ್ಥಾನದಲ್ಲಿ ಆರಂಭಗೊಂಡ ಸಂಘಟನೆಯು ಶಾಲೆಯಿಂದ ದೂರ ಉಳಿದ ಹಾಗೂ ಶಾಲೆಯನ್ನು ಅರ್ಧಕ್ಕೆ ಬಿಟ್ಟ ಬಾಲಕಿಯರನ್ನು ಗುರುತಿಸಿ, ಅವರನ್ನು ಪುನಃ ಶಿಕ್ಷಣದ ಮುಖ್ಯವಾಹಿನಿಗೆ ತರುವ ಕೆಲಸ ಆರಂಭಿಸಿತು. ಅವರು ಉನ್ನತ ಶಿಕ್ಷಣ ಪೂರೈಸಿ, ಉದ್ಯೋಗ ಪಡೆಯುವವರೆಗೆ ಅವರ ಬೆಂಬಲಕ್ಕೆ ನಿಲ್ಲುವ ಕಾರ್ಯ ಮಾಡುತ್ತಿದೆ' ಎಂದು ಫೌಂಡೇಷನ್ ಹೇಳಿದೆ.

'ಪ್ರಾಯೋಗಿಕವಾಗಿ 50 ಗ್ರಾಮಗಳ ಶಾಲೆಗಳಲ್ಲಿ ತನ್ನ ಕಾರ್ಯಕ್ರಮ ಆರಂಭಿಸಿದ್ದ ಸಂಘಟನೆ, ದೇಶದಾದ್ಯಂತ 30 ಸಾವಿರಕ್ಕೂ ಅಧಿಕ ಗ್ರಾಮಗಳಿಗೆ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದೆ. 20 ಲಕ್ಷಕ್ಕೂ ಅಧಿಕ ಬಾಲಕಿಯರಿಗೆ ಶಿಕ್ಷಣ ನೀಡಿದೆ' ಎಂದೂ ತಿಳಿಸಿದೆ.

ಏರ್ ಇಂಡಿಯಾ ವಿಮಾನ ತುರ್ತು ಭೂಸ್ಪರ್ಶ

ನವದೆಹಲಿ (ಪಿಟಿಐ): ಇಂದೋರ್‌ಗೆ ಹೋಗುತ್ತಿದ್ದ ಏರ್ ಇಂಡಿಯಾ ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ದೆಹಲಿಯಲ್ಲಿ ಭಾನುವಾರ ತುರ್ತು ಭೂಸ್ಪರ್ಶ ಮಾಡಿದೆ.

ಎ320 ನಿಯೊ ವಿಮಾನ ಟೇಕ್ ಆಫ್ ಆಗಿ ಕೆಲ ನಿಮಿಷಗಳಲ್ಲಿಯೇ ಬಲ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಸಿಬ್ಬಂದಿ ಬಲ ಎಂಜಿನ್ ಸ್ಥಗಿತಗೊಳಿಸಿ, ದೆಹಲಿ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಿದರು ಎಂದು ಏರ್ ಇಂಡಿಯಾ ತಿಳಿಸಿದೆ.


ಈ ವೇಳೆ ವಿಮಾನದಲ್ಲಿ 90ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಇಂದೋರ್‌ಗೆ ಹೋಗಲು ಅವರಿಗೆ ಪರ್ಯಾಯ ವಿಮಾನದ ವ್ಯವಸ್ಥೆ ಮಾಡಲಾಗಿದೆ.

ಭಾರತಕ್ಕೆ ಒಲಿದ ಕಂಚಿನ ಪದಕ

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಸಾತ್ವಿಕ್–ಚಿರಾಗ್ ಜೋಡಿಗೆ ಒಲಿದ ಎರಡನೇ ಪದಕ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಪಡೆದರು.

ಶನಿವಾರ ಸಂಜೆ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಜೋಡಿಯು 19-21, 21-18, 12-21ರಿಂದ ಚೀನಾದ 11ನೇ ಶ್ರೇಯಾಂಕದ ಚೆನ್ ಬೊ ಯಾಂಗ್ ಮತ್ತು ಲೀ ಯಿ ಅವರ ಎದುರು ಮಣಿಯಿತು. 67 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ ನಿಕಟ ಪೈಪೋಟಿ ಕಂಡುಬಂದಿತು. ಇದರಲ್ಲಿ ಚೀನಾದ ಜೋಡಿಯು ಪ್ರಯಾಸದ ಜಯ ಸಾಧಿಸಿತು.



ಚೀನಾದ ಚೆನ್ ಬೊ ಯಾಂಗ್ ಮತ್ತು ಲೀ ಯಿ ಎಎಫ್‌ಪಿ ಚಿತ್ರ

ಆದರೆ ಎರಡನೇ ಗೇಮ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ ಜೋಡಿಯು ತಿರುಗೇಟು ನೀಡಿತು. ಕೇವಲ ಮೂರು ಅಂಕಗಳ ಅಂತರದಿಂದ ಗೇಮ್‌ನಲ್ಲಿ ಭಾರತದ ಆಟಗಾರರು ರೋಚಕ ಜಯ ಸಾಧಿಸಿದರು. ಆದರೆ ಚೀನಾ ಆಟಗಾರರು ಮೂರನೇ ಮತ್ತು ನಿರ್ಣಾಯಕ ಗೇಮ್ಸ್‌ನಲ್ಲಿ ತೋರಿದ ಚಾಕಚಕ್ಯತೆ ಮತ್ತು ಪರಸ್ಪರ ಹೊಂದಾಣಿಕೆಯ ಆಟಕ್ಕೆ ಮೇಲುಗೈ ಲಭಿಸಿತು. ಇದರಿಂದಾಗಿ ಭಾರತದ ಜೋಡಿಯು ಸೋಲಿಗೆ ಶರಣಾಗಬೇಕಾಯಿತು.

ಚಿರಾಗ್ ಜೋಡಿಯು ಒಂದೊಮ್ಮೆ ಜಯಿಸಿದ್ದರೆ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ತಲುಪಿದ ಭಾರತದ ಮೊದಲ ಡಬಲ್ಸ್ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತಿತ್ತು. ಈ ಜೋಡಿಗೆ ಚಾಂಪಿಯನ್‌ಷಿಪ್ ಇತಿಹಾಸದಲ್ಲಿ ಒಲಿದ ಎರಡನೇ ಕಂಚಿನ ಪದಕ ಇದಾಗಿದೆ. 2022ರಲ್ಲಿ ಟೋಕಿಯೊದಲ್ಲಿ ನಡೆದಿದ್ದ ವಿಶ್ವ ಟೂರ್ನಿಯಲ್ಲಿ ಸಾತ್ವಿಕ್ ಜೋಡಿಯು ಕಂಚು ಪಡೆದಿತ್ತು.

ಶುಕ್ರವಾರ ನಡೆದಿದ್ದ ಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್ –ಚಿರಾಗ್ ಅವರು ಮಲೇಷ್ಯಾದ ಎರಡು ಒಲಿಂಪಿಕ್ಸ್ ಪದಕ ವಿಜೇತ ಜೋಡಿ ಆ್ಯರನ್ ಚಿಯಾ ಮತ್ತು ಸೊಹ ವೂಯ್ ಯೀಕ್ ವಿರುದ್ಧ ಗೆದ್ದಿದ್ದರು.

‘ಪಂದ್ಯದ ಆರಂಭದಿಂದಲೂ ನಮಗೆ ಉತ್ತಮ ಲಯ ಸಿಗಲಿಲ್ಲ. ಉತ್ತಮ ಆರಂಭವನ್ನೂ ಮಾಡಲಾಗಿಲ್ಲ. ಸುಲಭವಾಗಿ ರಕ್ಷಿಸಿಕೊಳ್ಳಬೇಕಿದ್ದ ಪಾಯಿಂಟ್‌ಗಳನ್ನೂ ಕೈಚೆಲ್ಲಿದ್ದು (ಮೂರನೇ ಗೇಮ್) ಲೋಪ. ಹೆಚ್ಚು ನಿಖರವಾಗಿ ಆಡಿದ್ದರೆ ಗೆಲುವಿನ ಅವಕಾಶ ಇತ್ತು. ಅವರು (ಎದುರಾಳಿ) ಶಿಸ್ತುಬದ್ಧ ಸರ್ವಿಸ್‌ಗಳನ್ನು ಮಾಡಿದರು’ ಎಂದು ಚಿರಾಗ್ ಅವರು ಪಂದ್ಯದ ನಂತರ ಹೇಳಿದರು.

ಪ್ರಸಕ್ತ ಋತುವಿನಲ್ಲಿ ಇಬ್ಬರೂ ಆಟಗಾರರು ಬಹಳಷ್ಟು ಕಠಿಣ ಸವಾಲುಗಳನ್ನು ಎದುರಿಸಿದ್ದಾರೆ. ಚಿರಾಗ್ ಅವರು ಬೆನ್ನುನೋವಿನಿಂದ ಕೆಲಕಾಲ ಆಟದಿಂದ ದೂರವಿದ್ದರು. ಫೆಬ್ರುವರಿಯಲ್ಲಿ ಸಾತ್ವಿಕ್ ಅವರ ತಂದೆ ನಿಧನರಾಗಿದ್ದರು.

ಈಚೆಗೆ ನಡೆದ ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೂಲಕ ಅವರಿಬ್ಬರೂ ಮತ್ತೆ ಅಂಕಣಕ್ಕೆ ಮರಳಿದ್ದರು. ಈ ಟೂರ್ನಿ, ಸಿಂಗಪುರ ಓಪನ್ ಮತ್ತು ಚೀನಾ ಓಪನ್ ಟೂರ್ನಿಗಳಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿದ್ದರು.

ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಪದಕ ಗೆದ್ದ ಭಾರತೀಯರು

ಆಟಗಾರ	ಪದಕ	ಸ್ಪರ್ಧೆ	ವರ್ಷ
ಪ್ರಕಾಶ್ ಪಡುಕೋಣೆ	ಕಂಚು	ಸಿಂಗಲ್ಸ್	1983
ಜ್ವಾಲಾ ಗುಟ್ಟಾ/ಅಶ್ವಿನಿ ಪೊನ್ನಪ್ಪ	ಕಂಚು	ಮಹಿಳಾ ಡಬಲ್ಸ್	2011
ಪಿ.ವಿ. ಸಿಂಧು	ಕಂಚು	ಸಿಂಗಲ್ಸ್	2013
ಪಿ.ವಿ. ಸಿಂಧು	ಕಂಚು	ಸಿಂಗಲ್ಸ್	2014
ಸೈನಾ ನೆಹ್ವಾಲ್	ಬೆಳ್ಳಿ	ಸಿಂಗಲ್ಸ್	2015
ಸೈನಾ ನೆಹ್ವಾಲ್	ಕಂಚು	ಸಿಂಗಲ್ಸ್	2017
ಪಿ.ವಿ. ಸಿಂಧು	ಬೆಳ್ಳಿ	ಸಿಂಗಲ್ಸ್	2017
ಪಿ.ವಿ. ಸಿಂಧು	ಬೆಳ್ಳಿ	ಸಿಂಗಲ್ಸ್	2018
ಪಿ.ವಿ. ಸಿಂಧು	ಚಿನ್ನ	ಸಿಂಗಲ್ಸ್	2019
ಬಿ. ಸಾಯಿಪ್ರಣೀತ್	ಕಂಚು	ಸಿಂಗಲ್ಸ್	2019
ಕೆ. ಶ್ರೀಕಾಂತ್	ಬೆಳ್ಳಿ	ಸಿಂಗಲ್ಸ್	2021
ಲಕ್ಷ್ಯ ಸೇನ್	ಕಂಚು	ಸಿಂಗಲ್ಸ್	2021
ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್	ಕಂಚು	ಡಬಲ್ಸ್	2022
ಎಚ್.ಎಸ್. ಪ್ರಣಯ್	ಕಂಚು	ಸಿಂಗಲ್ಸ್	2023
ಚಿರಾಗ್ ಶೆಟ್ಟಿ/ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ	ಕಂಚು	ಪುರುಷರ ಡಬಲ್ಸ್	2025

ಅಕಾನೆಗೆ ಮಹಿಳಾ ಸಿಂಗಲ್ಸ್ ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಜಪಾನ್‌ನ ಅಕಾನೆ ಯಮಾಗುಚಿ ಅವರು ಭಾನುವಾರ ನಡೆದ ಫೈನಲ್‌ನಲ್ಲಿ ಚೀನಾದ ಚೆನ್ ಯೂಫಿ ಅವರನ್ನು 21–09, 21–13, ರಿಂದ ಸೋಲಿಸಿ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಐದನೇ ಶ್ರೇಯಾಂಕ ಪಡೆದಿದ್ದ ಜಪಾನ್‌ನ ಆಟಗಾರ್ತಿ ಯಾವ ಹಂತದಲ್ಲೂ ತೊಂದರೆಗೆ ಸಿಲುಕಲಿಲ್ಲ. ಕೇವಲ 37 ನಿಮಿಷಗಳಲ್ಲಿ ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ಯುಫಿ ಅವರನ್ನು ಮಣಿಸಿದರು. ಅಕಾನೆ ಅವರು 2021 ಮತ್ತು 2022ರಲ್ಲೂ ಚಿನ್ನದ ಪದಕ ಗೆದ್ದುಕೊಂಡಿದ್ದರು.

2020ರ ಟೋಕಿಯೊ ಒಲಿಂಪಿಕ್ಸ್ ಸ್ವರ್ಣ ವಿಜೇತೆ ಚೆನ್ ಅವರು ಪಾದದ ನೋವಿಗೆ ಒಳಗಾದಂತೆ ಕಂಡರು. ಹಾಲಿ ಚಾಂಪಿಯನ್ ಹಾಗೂ ಅಗ್ರ ಶ್ರೇಯಾಂಕದ ಆನ್ ಸೆ-ಯಂಗ್ (ದಕ್ಷಿಣ ಕೊರಿಯಾ) ಅವರ ವಿರುದ್ಧ ಸೆಮಿಫೈನಲ್ ಪಂದ್ಯ ಗೆಲ್ಲುವ ಮೊದಲು ಅವರು ಪಾದದ ತಿರುಚುವಿಕೆಗೆ ಒಳಗಾಗಿದ್ದರು.

ಸ್ಯಾಫ್ ಫುಟ್‌ಬಾಲ್ ಭಾರತಕ್ಕೆ ಪ್ರಶಸ್ತಿ

ಥಿಂಪು (ಪಿಟಿಐ): ಭಾರತ ತಂಡ, ಸ್ಯಾಫ್ 17 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಭಾನುವಾರ ಬಾಂಗ್ಲಾದೇಶ ಎದುರು 3–4 ಗೋಲುಗಳಿಂದ ಸೋತರೂ, ಚಾಂಪಿಯನ್ ಕಿರೀಟ ಧರಿಸುವಲ್ಲಿ ಯಶಸ್ವಿಯಾಯಿತು. ಭಾರತ 6 ಪಂದ್ಯಗಳಿಂದ 15 ಪಾಯಿಂಟ್ಸ್ ಪಡೆದು ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿತ್ತು.

ಪ್ರೊ ಕಬಡ್ಡಿ : ಅಜಿತ್, ಅನಿಲ್ ಅಮೋಘ ಆಟ

ಮುಂಬಾಗೆ ಮಣಿದ ತಲೈವಾಸ್

ವಿಶಾಖಪಟ್ಟಣ: ಅಜಿತ್ ಚೌಹಾಣ್ ಸಂಘಟಿಸಿದ ಚುರುಕಾದ ದಾಳಿ ಮತ್ತು ಆಲ್‌ರೌಂಡರ್ ಅನಿಲ್ ಅವರ ಆಟದ ಬಲದಿಂದ ಯು ಮುಂಬಾ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ತಮಿಳ್ ತಲೈವಾಸ್ ಎದುರು ರೋಚಕ ಜಯ ದಾಖಲಿಸಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮುಂಬಾ ತಂಡವು 36–33ರಿಂದ ತಲೈವಾಸ್ ಸವಾಲನ್ನು ಮೀರಿ ನಿಂತಿತು.



ದೇವಾಂಕ್ ದಲಾಲ್ ರೇಡಿಂಗ್ ವೈಖರಿ ‘ಎಕ್ಸ್’ ಚಿತ್ರ

ಪಂದ್ಯದ ಮೊದಲಾರ್ಧದಲ್ಲಿ ತಲೈವಾಸ್ ತಂಡವು 14–11ರಿಂದ ಮುನ್ನಡೆ ಸಾಧಿಸಿತ್ತು. ದ್ವಿತೀಯಾರ್ಧದಲ್ಲಿ ಉಭಯ ತಂಡಗಳ ಪೈಪೋಟಿ ತುರುಸಿನಿಂದ ಕೂಡಿತ್ತು. ಮುಂಬಾ ತಂಡದ ಆಟಗಾರರು ಯೋಜನಾಬದ್ಧ ಆಟದೊಂದಿಗೆ ಎಲ್ಲ ವಿಭಾಗಗಳಲ್ಲಿಯೂ ಮುನ್ನಡೆ ಸಾಧಿಸಿದರು. ಈ ಹಂತದಲ್ಲಿ ಮುಂಬಾ ತಂಡವು 25 ಹಾಗೂ ತಮಿಳ್ ತಂಡ 19 ಅಂಕ ಗಳಿಸಿದವು. ಉಭಯ ತಂಡಗಳು ತಲಾ 2 ಆಲ್‌ಔಟ್ ಪಾಯಿಂಟ್ಸ್ ಗಳಿಸಿದವು.

ಮುಂಬಾ ತಂಡದ ಅಜಿತ್ ಚೌಹಾಣ್ ಅವರು ಪ್ರೊ ಕಬಡ್ಡಿಯಲ್ಲಿ ಒಟ್ಟು 200 ರೇಡಿಂಗ್ ಪಾಯಿಂಟ್ ಗಳಿಸಿದ ಸಾಧನೆ ಮಾಡಿದರು. ತಲೈವಾಸ್ ತಂಡದ ಅರ್ಜುನ್ ದೇಶ್ವಾಲ್ ಅವರು ಅಮೋಘ ದಾಳಿ ಸಂಘಟಿಸಿ 12 ಅಂಕಗಳನ್ನು ಸೂರೆ ಮಾಡಿದರು. ನಾಯಕ ಮತ್ತು ಸ್ಟಾರ್ ಆಟಗಾರ ಪವನ್ ಶೆರಾವತ್ ಅವರು ಆಲ್‌ರೌಂಡ್ ಆಟದ ಮೂಲಕ 7 ಅಂಕಗಳ ಕಾಣಿಕೆಯನ್ನು ತಂಡಕ್ಕೆ ನೀಡಿದರು.

ಬೆಂಗಾಲ್ ವಾರಿಯರ್ಸ್‌ಗೆ ಜಯ

ನಾಯಕ ದೇವಾಂಕ್ ದಲಾಲ್ ಹಾಗೂ ರೇಡರ್ ಮನ್‌ಪ್ರೀತ್ ಅವರ ಆಟದ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡವು 54–44ರಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಮೊದಲಾರ್ಧದಲ್ಲಿ 23–19ರಿಂದ ಅಲ್ಪ ಮುನ್ನಡೆ ಸಾಧಿಸಿದ್ದ ಬೆಂಗಾಲ್ ತಂಡವು, ದ್ವಿತೀಯಾರ್ಧದಲ್ಲಿ ಪಾರಮ್ಯ ಮೆರೆಯಿತು. ದಲಾಲ್ 21 ಅಂಕಗಳನ್ನು ದೋಚಿದರೆ, ಮನ್‌ಪ್ರೀತ್ 13 ರೇಡಿಂಗ್ ಪಾಯಿಂಟ್ಸ್ ಗಳಿಸಿದರು. ಹಾಲಿ ಚಾಂಪಿಯನ್ ಹರಿಯಾಣ ತಂಡದ ಶಿವಂ ಪಟಾರೆ 17 ಹಾಗೂ ವಿನಯ್ 13 ಅಂಕ ಗಳಿಸಿದರು.



ಮೋಹಿತ್ ಮತ್ತು ಸಾಕ್ಷ್ಯಾ ಸಂತೋಷ್

ಟಿ.ಟಿ: ಮೋಹಿತ್, ಸಾಕ್ಷ್ಯಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮೋಹಿತ್ ದೀಪಕ್ ಬೆಳವಡಿ ಮತ್ತು ಸಾಕ್ಷ್ಯಾ ಸಂತೋಷ್ ಅವರು ವಿನಯಾ ಕೋಟ್ಯಾನ್ ಸ್ಮರಣಾರ್ಥ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಬೆಳಗಾವಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಟಿಳಕವಾಡಿ ಕ್ಲಬ್‌ನಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಮೋಹಿತ್ 11-6, 14-12, 7-11, 13-11ರಿಂದ ದೀಪಕ್ ವಿನಯ್ ಅವರನ್ನು ಪರಾಭವಗೊಳಿಸಿದರು.

ಬಾಲಕಿಯರ ಫೈನಲ್‌ನಲ್ಲಿ ಸಾಕ್ಷ್ಯಾ 11-6, 12-14, 11-8, 8-11, 11-7ರಿಂದ ಲಕ್ಷ್ಮಿ ಆಶ್ರಿತಾ ವಿರುದ್ಧ ಜಯಗಳಿಸಿದರು.

ಅಮೆರಿಕ ಓಪನ್ ಟೆನಿಸ್: ಕೊಕೊ–ನವೊಮಿ ಹಣಾಹಣಿಗೆ ವೇದಿಕೆ ಸಿದ್ಧ

ಯಾನಿಕ್ ಸಿನ್ನರ್, ಶ್ವಾಂಟೆಕ್ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ): ಇಟಲಿಯ ಯಾನಿಕ್ ಸಿನ್ನರ್ ಅವರು ಅಮೆರಿಕ ಓಪನ್ ಟೂರ್ನಿಯ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು. ಇಗಾ ಶ್ವಾಂಟೆಕ್ ಅಂತಿಮ 16ರ ಸುತ್ತಿಗೆ ತಲುಪಲು ಪರದಾಡಿದರೆ, ತವರಿನ ಫೇವರಿಟ್ ಕೊಕೊ ಗಾಫ್ ಅವರು ನವೊಮಿ ಒಸಾಕಾ ಜೊತೆ ‘ಬ್ಲಾಕ್‌ಬಸ್ಟರ್’ ಸೆಣಸಾಟಕ್ಕೆ ಅಣಿಯಾದರು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಶನಿವಾರ ಸೆಟ್ ಹಿನ್ನಡೆಯಿಂದ ಚೇತರಿಸಿದ ಅಗ್ರ ಶ್ರೇಯಾಂಕದ ಸಿನ್ನರ್ 5-7, 6-4, 6-3, 6-3 ರಿಂದ 27ನೇ ಶ್ರೇಯಾಂಕದ ಡೆನಿಸ್ ಶಪೊವಲೋವ್ (ಕೆನಡಾ) ಅವರನ್ನು ಸೋಲಿಸಿದರು. ಸಿನ್ನರ್ ಅವರು ಸ್ವಿಜರ್ಲೆಂಡ್‌ನ ರೋಜರ್ ಫೆಡರರ್ (2008 ರಲ್ಲಿ) ಅವರ ನಂತರ ಈ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಂಡ ಮೊದಲ ಆಟಗಾರ ಎನಿಸುವ ಪ್ರಯತ್ನದಲ್ಲಿದ್ದಾರೆ.



ಯಾನಿಕ್ ಸಿನ್ನರ್ ಆಟದ ವೈಖರಿ ಎಎಫ್‌ಪಿ ಚಿತ್ರ

ಸಿನ್ನರ್ ಅವರ ಪ್ರಿಕ್ವಾರ್ಟರ್‌ಫೈನಲ್ ಎದುರಾಳಿ ಕಜಾಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್. 6 ಅಡಿ 5 ಇಂಚು ಎತ್ತರದ ಬುಬ್ಲಿಕ್ ಶನಿವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ 14ನೇ ಶ್ರೇಯಾಂಕದ ಟಾಮಿ ಪಾಲ್ (ಅಮೆರಿಕ) ಅವರನ್ನು 7-6 (7-5), 6-7 (4-7), 6-3, 6-7 (5-7), 6-1 ರಿಂದ ಸೋಲಿಸಿದರು.

ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್, ಏಳು ವರ್ಷಗಳಲ್ಲಿ ಮೊದಲ ಬಾರಿ ಬೇಗ ಹೊರಬಿದ್ದರು. ಸ್ಫೂರ್ತಿಯುತ ಆಟವಾಡಿದ ಕೆನಡಾದ ಫೆಲಿಕ್ಸ್ ಆಗರ್ ಅಲಿಯಾಸಿಮ್ ಮೂರನೇ ಸುತ್ತಿನಲ್ಲಿ 4-6, 7-6 (9-7), 6-4, 6-4 ರಿಂದ ರಷ್ಯಾದ ಆಟಗಾರನನ್ನು ಸೋಲಿಸಿದರು.

ಎಂಟನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್. ಲೊರೆಂಝೊ ಮುಸೆಟ್ಟಿ, 435ನೇ ಕ್ರಮಾಂಕದ ಸ್ವಿಸ್ ಕ್ವಾಲಿಫೈಯರ್ ಲಿಯಾಂಡ್ರೊ ರೀಡಿ 16ರ ಸುತ್ತಿಗೆ ಮುನ್ನಡೆದರು. ಅವರಿಗೆ ಎದುರಾಳಿಗಳು ಗಾಯದ ಕಾರಣ ಅರ್ಧದಲ್ಲೇ ಪಂದ್ಯಬಿಟ್ಟುಕೊಟ್ಟರು.

ಎಂಟನೇ ಶ್ರೇಯಾಂಕದ ಮಿನೋರ್ 6-7 (7-9), 6-3, 6-4, 2-0 ಮುಂದಿದ್ದಾಗ ಜರ್ಮನಿಯ ಡೇನಿಯಲ್ ಅಲ್ಟಮೇರ್ ಪಂದ್ಯ ಬಿಟ್ಟುಕೊಟ್ಟರು. ಲಿಯಾಂಡ್ರೊ ಅವರು ನಾಲ್ಕನೇ ಸುತ್ತಿಗೆ ತಲುಪಿದ ಅತಿ ಕಡಿಮೆ ಶ್ರೇಯಾಂಕದ ಆಟಗಾರ ಎನಿಸಿದ್ದಾರೆ.

ಪ್ರಯಾಸದ ಜಯ: ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಪೋಲೆಂಡ್‌ನ ಶ್ವಾಂಟೆಕ್, 29ನೇ ಶ್ರೇಯಾಂಕದ ಅನ್ನಾ ಕಲಿನ್‌ಸ್ಕಾಯಾ ವಿರುದ್ಧ ಮೊದಲ ಸೆಟ್‌ನಲ್ಲಿ 1–5 ಹಿನ್ನಡೆಯಿಂದ ಚೇತರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಟೈಬ್ರೇಕರ್‌ನಲ್ಲಿ ಮೊದಲ ಸೆಟ್ ಗೆದ್ದ ಅವರು ಅಂತಿಮವಾಗಿ 7–6 (7–2), 6–4 ರಲ್ಲಿ ರಷ್ಯಾ ಆಟಗಾರ್ತಿಯೆದುರು ಜಯಶಾಲಿಯಾದರು.

ಅವರು 16ರ ಸುತ್ತಿನಲ್ಲಿ ಎಕಟೆರಿನಾ ಅಲೆಕ್ಸಾಂಡ್ರೋವಾ ಅವರನ್ನು ಎದುರಿಸಲಿದ್ದಾರೆ. ರಷ್ಯಾದ ಅಲೆಕ್ಸಾಂಡ್ರೋವಾ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ನಾಲ್ಕನೇ ಸುತ್ತನ್ನು ತಲುಪಿದರು. ಅಮೋಘ ಲಯಲ್ಲಿರುವ ಅವರು 6–0, 6–1 ರಿಂದ ಲಾರಾ ಸೀಗೆಮುಂಡ್ ಅವರನ್ನು ಸೋಲಿಸಿದರು.

ಅಮೆರಿಕದ ಕೊಕೊ ಗಾಫ್ ಶಿಸ್ತುಬದ್ಧ ಆಟವಾಡಿ 6–3, 6–1ರಿಂದ 28ನೇ ಶ್ರೇಯಾಂಕದ ಮೆಗ್ದಲಿನಾ ಫ್ರೆಚ್ (ಪೋಲೆಂಡ್) ಅವರನ್ನು ಹಿಮ್ಮೆಟ್ಟಿಸಿದರು. ವಿಂಬಲ್ಡನ್ ರನ್ನರ್ ಅಪ್ ಅಮಂಡಾ ಅನಿಸಿಮೋವಾ 6–4, 4–6, 6–2ರಿಂದ ರುಮೇನಿಯಾದ ಜಾಕ್ವೆಲಿನ್ ಕ್ರಿಸ್ಟಿಯನ್ ಅವರನ್ನು ಸೋಲಿಸಿದರು.

ಸೂಪರ್ ನಾಲ್ಕಕ್ಕೆ ಭಾರತ ದಾಪುಗಾಲು

ಏಷ್ಯಾ ಕಪ್ ಹಾಕಿ: 3–2ರಿಂದ ಜಪಾನ್ ಎದುರು ಗೆಲುವು

ರಾಜಗೀರ್ (ಬಿಹಾರ) (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಭಾನುವಾರ ಜಪಾನ್ ಎದುರು ರೋಚಕ ಗೆಲುವು ಸಾಧಿಸಿತು. ಅದರೊಂದಿಗೆ ಸೂಪರ್ ಫೋರ್ ಹಂತಕ್ಕೂ ಮುನ್ನಡೆಯಿತು.

ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ ತನಗಿಂತ ಕೆಳಕ್ರಮಾಂಕದ ಚೀನಾ ಎದುರು ಪ್ರಯಾಸದಾಯಕ ಜಯ ಸಾಧಿಸಿದ್ದ ಹರ್ಮನ್ ಬಳಗವು, ಜಪಾನ್ ಎದುರು ಆರಂಭದಿಂದಲೇ ಪ್ರಾಬಲ್ಯ ಸಾಧಿಸಿತು. 3–2ರಿಂದ ರೋಚಕ ಜಯ ಸಾಧಿಸಿತು. ನಾಯಕನಿಗೆ ತಕ್ಕ ಆಟವಾಡಿದ ಹರ್ಮನ್ ಎರಡು ಗೋಲು ಹೊಡೆದು ಗೆಲುವಿನ ರೂವಾರಿಯಾದರು.

ಪಂದ್ಯದಲ್ಲಿ ಮನದೀಪ್ ಸಿಂಗ್ ಅವರು 4ನೇ ನಿಮಿಷದಲ್ಲಿ ಗೋಲು ಬಾರಿಸಿ ಆತಿಥೇಯ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಹರ್ಮನ್‌ಪ್ರೀತ್ ಅವರು, 5ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲು ದಾಖಲಿಸಲು ಸಮರ್ಥವಾಗಿ ಬಳಸಿಕೊಂಡರು. 46ನೇ ನಿಮಿಷದಲ್ಲಿ ದೊರೆತ ಮತ್ತೊಂದು ಪೆನಾಲ್ಟಿ ಕಾರ್ನರ್ ನಲ್ಲಿಯೂ ಗೋಲು ಗಳಿಸಿ, ಭಾರತದ ಮುನ್ನಡೆಯನ್ನು 3–1ಕ್ಕೆ ಹಿಗ್ಗಿಸಿದರು.



ಭಾರತದ ಆಟಗಾರರ ಸಂಭ್ರಮ ಎಕ್ಸ್ ಚಿತ್ರ

ಅವರು ಚೀನಾ ಎದುರಿನ ಪಂದ್ಯದಲ್ಲಿ ಗೋಲ್‌ಗಳ ಹ್ಯಾಟ್ರಿಕ್ ಸಾಧಿಸಿದ್ದರು.

ಜಪಾನ್ ತಂಡದ ಕೊಸಿ ಕವಾಬೆ ಅವರು (38ನೇ ನಿ ಹಾಗೂ 58ನೇ ನಿ) ಪ್ರತಿರೋಧ ತೋರಿದರಾದರೂ, ಅವರ ಆಟಕ್ಕೆ ಗೆಲುವು ಒಲಿಯಲಿಲ್ಲ.

ಭಾರತ ತಂಡವು ಸೋಮವಾರ ನಡೆಯಲಿರುವ ಗುಂಪು ಹಂತದ ತನ್ನ ಅಂತಿಮ ಪಂದ್ಯದಲ್ಲಿ ಕಜಾಕಸ್ತಾನ ಎದುರು ಸೆಣಸಲಿದೆ.

ಪಾಠಕ್‌ಗೆ 150ನೇ ಪಂದ್ಯ: ಭಾರತ ತಂಡದ ಗೋಲ್‌ಕೀಪರ್ ಕೃಷನ್ ಬಹದ್ದೂರ್ ಪಾಠಕ್ ಅವರು ವೃತ್ತಿ ಜೀವನದಲ್ಲಿ 150ನೇ ಅಂತರರಾಷ್ಟ್ರೀಯ ಪಂದ್ಯ ಆಡಿದರು. ಪಂದ್ಯ ಆರಂಭಕ್ಕೂ ಮೊದಲು ಅವರಿಗೆ ಹಾಕಿ ಇಂಡಿಯಾದ ವತಿಯಿಂದ ‘150’ ಸಂಖ್ಯೆಯ ಜೆರ್ಸಿಯನ್ನು ಉಡುಗೊರೆಯಾಗಿ ನೀಡಿ ಗೌರವಿಸಲಾಯಿತು.

ಎ ಗುಂಪಿನ ಮತ್ತೊಂದು ಪಂದ್ಯದಲ್ಲಿ ಚೀನಾ ತಂಡವು ಕಜಾಕಸ್ತಾನ ಎದುರು 13–1 ಗೋಲುಗಳಿಂದ ಸುಲಭದ ಜಯ ದಾಖಲಿಸಿತು. ಚೀನಾ ಹಾಗೂ ಜಪಾನ್ ತಂಡಗಳ ನಡುವೆ ಸೋಮವಾರ ಪಂದ್ಯ ನಡೆಯಲಿದ್ದು, ಜಯಿಸಿದ ತಂಡ ಸೂಪರ್ ನಾಲ್ಕರ ಘಟ್ಟಕ್ಕೆ ಅರ್ಹತೆ ಪಡೆಯಲಿದೆ.



ಬೆಂಗಳೂರಿನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಭಾನುವಾರ ನಡೆದ ಕರ್ನಾಟಕ ಕ್ರಿಕೆಟ್ ಅಂಪೈರ್ಸ್ ಸಂಸ್ಥೆ (ಎಸಿಯುಕೆ) ಸುವರ್ಣ ಮಹೋತ್ಸವದಲ್ಲಿ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಮಾಜಿ ಅಂಪೈರ್ ಬಿ.ಆರ್. ಕೇಶವಮೂರ್ತಿ, ಕ್ರೀಡಾ ಪತ್ರಕರ್ತರಾದ ಸತೀಶ್ ವಿಶ್ವನಾಥನ್, ವೇದಂ ಜೈಶಂಕರ್, ಮಾಜಿ ಅಂಪೈರ್‌ಗಳಾದ ಎ.ಕೆ. ನರಸಿಂಹನ್, ವಿಕ್ರಂ ರಾಜು ಪ್ರಜಾವಾಣಿ ಚಿತ್ರ

ಟೋಕಿಯೊದಲ್ಲಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

ಭಾರತ ತಂಡ ಮುನ್ನಡೆಸಲಿರುವ ನೀರಜ್

ನವದೆಹಲಿ (ಪಿಟಿಐ): ಸೆಪ್ಟೆಂಬರ್ 13 ರಿಂದ 21ರವರೆಗೆ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ 19 ಮಂದಿಯ ಭಾರತ ತಂಡವನ್ನು ಹೆಸರಿಸಲಾಗಿದ್ದು, ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ನೇತೃತ್ವ ವಹಿಸಲಿದ್ದಾರೆ.



ದೇಶದ ಇತಿಹಾಸದಲ್ಲೇ ಮೊದಲ ಬಾರಿ– ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ನೀರಜ್ ಸೇರಿದಂತೆ ನಾಲ್ವರು ಪುರುಷರು ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಚಿನ್ ಯಾದವ್, ಯಶ್ವೀರ್ ಸಿಂಗ್ ಮತ್ತು ರೋಹಿತ್ ಯಾದವ್ ಇತರ ಮೂವರು. ಕೊನೆಯ ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ನಾಲ್ವರು ಅರ್ಹತೆ ಪಡೆದಿದ್ದರು. ಆದರೆ ಗಾಯಾಳಾಗಿದ್ದರಿಂದ ರೋಹಿತ್ ಹಿಂದೆಸರಿದಿದ್ದರು. ಹಾಲಿ ಚಾಂಪಿಯನ್ ಆಗಿರುವ ಕಾರಣ, 27 ವರ್ಷ ವಯಸ್ಸಿನ ನೀರಜ್ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಅಥ್ಲೆಟಿಕ್ ಫೆಡರೇಷನ್‌ನ ಸೀನಿಯರ್ ಆಯ್ಕೆ ಸಮಿತಿಯ ಸಭೆಯ ನಂತರ ತಂಡ ಪ್ರಕಟಿಸಲಾಯಿತು. ಭಾರತ ತಂಡ

ಪುರುಷರು: ನೀರಜ್ ಚೋಪ್ರಾ, ಸಚಿನ್ ಯಾದವ್, ಯಶ್ವೀರ್ ಸಿಂಗ್ ಮತ್ತು ರೋಹಿತ್ ಯಾದವ್ (ಜಾವೆಲಿನ್), ಮುರಳಿ ಶ್ರೀಶಂಕರ್ (ಲಾಂಗ್‌ಜಂಪ್), ಗುಲ್ವೀರ್ ಸಿಂಗ್ (5000 ಮತ್ತು 10000 ಮೀ), ಪ್ರವೀಣ್ ಚಿತ್ರವೇಲ್ ಮತ್ತು ಅಬ್ದುಲ್ಲಾ ಅಬೂಬಕ್ಕರ್ (ಟ್ರಿಪಲ್ ಜಂಪ್), ಸರ್ವೇಶ್ ಅನಿಲ್ ಕುಶಾರೆ (ಹೈಜಂಪ್), ಅನಿಮೇಶ್ ಕುಜೂರ್ (200 ಮೀ.), ತೇಜಸ್ ಶಿರ್ಸೆ (110 ಮೀ. ಹರ್ಡಲ್ಸ್), ಸರ್ವಿನ್ ಸೆಬಾಸ್ಟಿಯನ್ (20 ಕಿ.ಮೀ. ರೇಸ್ ವಾಕ್), ರಾಮ್ ಬಾಬು ಮತ್ತು ಸಂದೀಪ್ ಕುಮಾರ್ (35 ಕಿ.ಮೀ. ರೇಸ್ ವಾಕ್).

ಮಹಿಳೆಯರು: ಪಾರುಲ್ ಚೌಧರಿ ಮತ್ತು ಅಂಕಿತಾ ಧ್ಯಾನಿ (3000 ಮೀ. ಸ್ಟೀಪಲ್‌ಚೇಸ್), ಅನ್ನು ರಾಣಿ (ಜಾವೆಲಿನ್), ಪ್ರಿಯಾಂಕಾ ಗೋಸ್ವಾಮಿ (35 ಕಿ.ಮೀ. ರೇಸ್ ವಾಕ್), ಪೂಜಾ (800 ಮೀ ಮತ್ತು 1500 ಮೀ.)

ಏಷ್ಯಾ ಕಪ್: ಗಿಲ್, ಬೂಮ್ರಾ ಫಿಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್ ಹಾಗೂ ಏಕದಿನ ತಂಡದ ನಾಯಕ ರೋಹಿತ್ ಶರ್ಮಾ ಅವರು ಫಿಟ್‌ನೆಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.



ಗಿಲ್

ಗಿಲ್, ರೋಹಿತ್, ವೇಗಿ ಜಸ್‌ಪ್ರೀತ್ ಬೂಮ್ರಾ, ವಿಕೆಟ್ ಕೀಪರ್ ಜಿತೇಶ್ ಶರ್ಮಾ ಸೇರಿ ಭಾರತ ತಂಡದ ಆಟಗಾರರು ಇಲ್ಲಿಯ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ (ಸಿಒಇ) ಭಾನುವಾರ ಫಿಟ್‌ನೆಸ್ ಪರೀಕ್ಷೆಗೆ ಒಳಗಾಗಿದ್ದರು.

ಮುಂಬರುವ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತ ತಂಡದ ಉಪನಾಯಕರಾಗಿರುವ ಗಿಲ್ ಅವರು ಬೆಂಗಳೂರಿನಿಂದಲೇ ದುಬೈಗೆ ತೆರಳುವರು ಎಂದೂ ಪಿಟಿಐ ವರದಿ ಮಾಡಿದೆ. ಸೆ. 9ರಿಂದ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಯುಎಇಯನ್ನು ಎದುರಿಸಲಿದೆ.

ಫ್ಲೂ ಆಗಿದ್ದರಿಂದ ಗಿಲ್ ಅವರು ದುಲೀಪ್ ಟ್ರೋಫಿ ಕ್ವಾರ್ಟರ್‌ಫೈನಲ್‌ನಲ್ಲಿ ಉತ್ತರ ವಲಯ ತಂಡದ ಪರ ಕಣಕ್ಕಿಳಿದಿರಲಿಲ್ಲ. ಹೀಗಾಗಿ ಅವರಿಗೆ ಫಿಟ್‌ನೆಸ್ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿತ್ತು.

ವಾಷಿಂಗ್ಟನ್ ಸುಂದರ್, ಯಶಸ್ವಿ ಜೈಸ್ವಾಲ್, ಮೊಹಮ್ಮದ್ ಸಿರಾಜ್ ಮತ್ತು ಶಾರ್ದೂಲ್ ಠಾಕೂರ್ ಅವರೂ ಇಲ್ಲಿ ಫಿಟ್‌ನೆಸ್ ಪರೀಕ್ಷೆ ನೀಡಿದ್ದಾರೆ ಎಂದೂ ಪಿಟಿಐ ಹೇಳಿದೆ.

ನಾಲ್ಕರ ಘಟ್ಟದಲ್ಲಿ ಉತ್ತರ–ದಕ್ಷಿಣ ಮುಖಾಮುಖಿ

ದುಲೀಪ್ ಟ್ರೋಫಿ: ಆಯುಷ್ ದ್ವಿಶತಕ • ಸೆಮಿಗೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾನ್ಯ ವಲಯ ಕ್ರಿಕೆಟ್ ತಂಡದ ಆಟಗಾರರಿಗೆ ಅನುಭವದ ಕೊರತೆ ಇದೆ. ಆದರೆ ಬಲಿಷ್ಠ ಎದುರಾಳಿಯನ್ನು ಎದುರಿಸಿ ನಿಲ್ಲುವ ಆತ್ಮವಿಶ್ವಾಸ ಮಾತ್ರ ಅವರಲ್ಲಿ ಭರಪೂರ ತುಂಬಿದೆ.

ನಗರದ ಹೊರವಲಯದ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರ (ಸಿಒಇ) ನಡೆದ ದುಲೀಪ್ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದ ಕೊನೆಯ ದಿನದಾಟದಲ್ಲಿ ಈಶಾನ್ಯ ಆಟಗಾರರ ದಿಟ್ಟತನ ಗಮನ ಸೆಳೆಯಿತು. ಕೇಂದ್ರ ವಲಯ ತಂಡವು ಭಾನುವಾರ ಒಡ್ಡಿದ್ದ 679 ರನ್‌ಗಳ ಬೃಹತ್ ಮೊತ್ತ ಬೆನ್ನಟ್ಟಿದ ಈಶಾನ್ಯ ವಲಯ ಜೆಹು ಆ್ಯಂಡರ್ಸನ್ (64; 96ಎ, 4X11, 6X1) ಮತ್ತು ನಾಯಕ ರಾಂಗ್ಸೆನ್ ಜೊನಾಥನ್ (60; 97ಎ, 4X9) ಅವರ ಅರ್ಧಶತಕಗಳ ಬಲದಿಂದ ತಂಡವು ಸೋಲಿನಿಂದ ಪಾರಾಯಿತು. ಪಂದ್ಯ ಡ್ರಾ ಆಯಿತು. ರಜತ್ ಪಾಟೀದಾರ್ ನಾಯಕತ್ವದ ಕೇಂದ್ರ ತಂಡ ಸೆಮಿಫೈನಲ್ ಪ್ರವೇಶಿಸಿತು.

ಇನ್ನೊಂದು ಕ್ವಾರ್ಟರ್‌ಫೈನಲ್ ಕೂಡ ಡ್ರಾದಲ್ಲಿ ಮುಕ್ತಾಯವಾಯಿತು. ಉತ್ತರ ವಲಯ ತಂಡವು ಪೂರ್ವ ವಲಯದ ವಿರುದ್ಧ ಪಂದ್ಯದ ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು.



ದ್ವಿಶತಕ ಸಿಡಿಸಿದ ಆಯುಷ್ ಬಡೋನಿ ಪಿಟಿಐ ಚಿತ್ರ

ಉತ್ತರ ವಲಯ ತಂಡದ ಬ್ಯಾಟರ್‌ಗಳು ಕೊನೆಯ ದಿನದಾಟದಲ್ಲಿಯೂ ಡಿಕ್ಲೇರ್ ಕೊಡಲಿಲ್ಲ. ಬದಲಿಗೆ ಭರ್ಜರಿ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಆಯುಷ್ ಬಡೋನಿ (ಔಟಾಗದೇ 204; 223ಎ, 4X13, 6X3) ದ್ವಿಶತಕ ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇಂದ್ರ ವಲಯ: 102 ಓವರ್‌ಗಳಲ್ಲಿ 4ಕ್ಕೆ532 ಡಿಕ್ಲೇರ್ಡ್. ಈಶಾನ್ಯ ವಲಯ: 69.3 ಓವರ್‌ಗಳಲ್ಲಿ 185. ಎರಡನೇ ಇನಿಂಗ್ಸ್:ಕೇಂದ್ರ ವಲಯ:80.3 ಓವರ್‌ಗಳಲ್ಲಿ 7ಕ್ಕೆ331 ಡಿಕ್ಲೇರ್ಡ್. ಈಶಾನ್ಯ ವಲಯ: 58 ಓವರ್‌ಗಳಲ್ಲಿ 6ಕ್ಕೆ200 (ಜೆಹು ಆ್ಯಂಡರ್ಸನ್ 64, ರಾಂಗ್ಸೇನ್ ಜೊನಾಥನ್ 60, ಆದಿತ್ಯ ಠಾಕರೆ 21ಕ್ಕೆ2, ಶುಭಂ ಶರ್ಮಾ 10ಕ್ಕೆ2) ಫಲಿತಾಂಶ: ಡ್ರಾ.

ಮೊದಲ ಇನಿಂಗ್ಸ್: ಉತ್ತರ ವಲಯ: 93.2 ಓವರ್‌ಗಳಲ್ಲಿ 405. ಪೂರ್ವ ವಲಯ 56.1 ಓವರ್‌ಗಳಲ್ಲಿ 230. ಎರಡನೇ ಇನಿಂಗ್ಸ್:ಉತ್ತರ ವಲಯ: 146.2 ಓವರ್‌ಗಳಲ್ಲಿ 4ಕ್ಕೆ658 ಡಿಕ್ಲೇರ್ಡ್ (ಅಂಕಿತ್ ಕುಮಾರ್ 198, ಆಯುಷ್ ಬಡೋನಿ ಅಜೇಯ 204, ಮುಕ್ತಾರ್ ಹುಸೇನ್ 86ಕ್ಕೆ1, ಸೂರಜ್ ಸಿಂಧು ಜೈಸ್ವಾಲ್ 77ಕ್ಕೆ1, ರಿಯಾನ್ ಪರಾಗ್ 78ಕ್ಕೆ1) ಫಲಿತಾಂಶ: ಡ್ರಾ

ಸೆಮಿಫೈನಲ್ ಪಂದ್ಯಗಳು:
ದಕ್ಷಿಣ ವಲಯ–ಉತ್ತರ ವಲಯ
ಪಶ್ಚಿಮ ವಲಯ–ಕೇಂದ್ರ ವಲಯ
ದಿನಾಂಕ: ಸೆ. 4ರಿಂದ 7
ಸಮಯ: ಬೆಳಿಗ್ಗೆ 9.30ರಿಂದ
ಸ್ಥಳ: ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನ.